ಬದುಕಿಗೆ ಬೆಳಕು

(ಗೀತಾ ಸಪ್ತತಿ)

ಬದುಕಿಗೆ ಬೆಳಕು

(ಗೀತಾ ಸಪ್ತತಿ)

ಶ್ರೀಮತಿ ಪಾರ್ವತಮ್ಮ ಸಿ.ಪಿ. ಸುಬ್ಬರಾಜು ಚಾರಿಟಬಲ್ ಟ್ರಸ್ಟ್

13/8, ಪಂಪಮಹಾಕವಿ ರಸ್ತೆ, ಶಂಕರಪುರ, ಬೆಂಗಳೂರು ನಗರ

ಬದುಕಿಗೆ ಬೆಳಕು: ಬುದ್ಧಿಯೋಗದಿಂದ ಜೀವನವು ಹಸನಾಗಿ ದೇವ-ಸಾಕ್ಷಾತ್ಕಾರ ಎಂದು ಭಗವದ್ಗೀತಾ-ಶ್ಲೋಕಗಳ ಆಧಾರದಿಂದ ಪ್ರೊ. ಎಸ್.ಕೆ. ರಾಮಚಂದ್ರರಾಯರು ನಿರೂಪಿಸಿದ್ದಾರೆ.

© ಶ್ರೀಮತಿ ಪಾರ್ವತಮ್ಮ ಸಿ. ಪಿ. ಸುಬ್ಬರಾಜು ಚಾರಿಟಬಲ್ ಟ್ರಸ್ಟ್

ಮುಖಪುಟ : ಯೋಗೇಶ್ವರ ಕೃಷ್ಣ (ಪದ್ಮನಾಭಪುರಂ ಅರಮನೆಯಲ್ಲಿನ ಭಿತ್ತಿ ಚಿತ್ರ)

ಮೊದಲ ಮುದ್ರಣ : 15ನೇ ನವೆಂಬರ್ 1998

ಮುದ್ರಕರು :

ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ಹೊಸ ತರಗುಪೇಟೆ, ಬೆಂಗಳೂರು - 560 002
ಟೆಲಿಫ್ಯಾಕ್ಸ್ : 6709026, 6708186
e-mail : omkar@blr.vsnl.net.in

ಕೃತಜ್ಞತೆ

ವೈದುಷ್ಯಕ್ಕೆ, ಭಕ್ತಿಶ್ರದ್ಧೆಗಳಿಗೆ,
ಸದಾಚಾರ ಸಂಪನ್ನತೆಗೆ, ಪ್ರಾಮಾಣಿಕತೆಗೆ,
ವೇದಗಳಲ್ಲಿನ ಅಪಾರ ಶ್ರದ್ಧೆಗೆ,
ನಾಡಿನಾದ್ಯಂತ ಪೂಜ್ಯರಾಗಿರುವ
ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ

ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು

ನಮ್ಮ ಪೂಜ್ಯ ಪಿತೃಶ್ರೀ
ಸಿ.ಪಿ. ಸುಬ್ಬರಾಜುಶ್ರೇಷ್ಠಿ ಅವರ
ಎಪ್ಪತ್ತು ವರ್ಷಗಳ ಭೀಮರಥ ಶಾಂತಿಯ
ಶುಭ ಸಮಾರಂಭದ **ಸವಿನೆನಪಿಗಾಗಿ**
ಭಗವದ್ಗೀತೆಯ ಎಪ್ಪತ್ತು ಆಣಿ ಮುತ್ತುಗಳನ್ನು
ತಮ್ಮ ವಿಚಾರ-ವಿವೇಕದ ಸೂತ್ರದಲ್ಲಿ ಪೋಣಿಸಿ,
ಬುದ್ಧಿಯೋಗದ ಬೆಳಕನ್ನು ಬೀರುವ,
ಜೀವನವನ್ನು ಕ್ರಮಕ್ರಮವಾಗಿ ಉತ್ತಮಪಡಿಸಿಕೊಳ್ಳುವ ವಿಚಾರ-ಸಂಪತ್ತನ್ನು
ಗ್ರಥಿಸಿ ಕೊಟ್ಟಿರುವುದಕ್ಕಾಗಿ ನಾವೆಲ್ಲರೂ ಅವರಿಗೆ ಚಿರ-ಋಣಿಗಳು
ಅವರಿಗೆ
ನಮಸ್ಕಾರ ಪೂರ್ವಕವಾದ ವಿಶ್ವಾಸಪೂರ್ವಕವಾದ ಅಭಿವಂದನೆಗಳು

ಪಿ.ಎಸ್. ಬಾಲಕೃಷ್ಣ ಶೆಟ್ಟಿ
ಪಿ.ಎಸ್. ಶ್ರೀನಿವಾಸ ಶೆಟ್ಟಿ
ಪಿ.ಎಸ್. ವೆಂಕಟೇಶ ಬಾಬು
ಪಿ.ಎಸ್. ಶಂಕರನಾರಾಯಣ್
ಶೋಭಾವತಿ

ಒಳ್ಳೆಯತನಕ್ಕೆ, ಜಾಗರೂಕತೆಗೆ, ವಿವೇಕಕ್ಕೆ

ಮಹೋಪಕಾರಕ್ಕೆ, ವಿದ್ಯಾರ್ಥಿ-ಹಿತಚಿಂತನೆಗೆ,

ವೈಶ್ಯ ಧರ್ಮ ಪರಿಪಾಲನೆಗೆ ತೌರುಮನೆಯಾಗಿದ್ದ

ನನ್ನ ವೃತ್ತಿ-ಪ್ರವೃತ್ತಿಗಳಿಗೆ ಗುರುಗಳಾಗಿದ್ದ

ಪೂಜ್ಯ ದಿವಂಗತ ಮಲಕಲ ಶಿವರಾಮಯ್ಯ ಶ್ರೇಷ್ಠಿ ಅವರ

ದಿವ್ಯಸ್ಮೃತಿಗೆ ಸಮರ್ಪಣೆ

ಸಿ.ಪಿ. ಸುಬ್ಬರಾಜು ಶ್ರೇಷ್ಠಿ

70

ಶ್ರೀ ಸಿ.ಪಿ. ಸುಬ್ಬರಾಜು ಶ್ರೇಷ್ಠಿ ಅವರ

ಭೀಮರಥ ಶಾಂತಿಯ

ಸವಿನೆನಪಿಗಾಗಿ ವಿಶ್ವಾಸದ ಕೊಡುಗೆ

ಮನೆದೇವರಾದ ಶ್ರೀ ವೆಂಕಟೇಶ್ವರನ ಕೃಪೆಯಿಂದ,

ಚನ್ನಪಟ್ಟಣದ ಪೋಲೇಪಲ್ಲಿ ಚಿನ್ನಕೃಷ್ಣಯ್ಯಶೆಟ್ಟಿ ಮತ್ತು ಶ್ರೀಮತಿ ನಾಗಮ್ಮ ಅವರ ವರಪುತ್ರರಾಗಿ, ಸುಶೀಲೆ ಶ್ರೀಮತಿ ಸಿ.ಪಿ. ಪಾರ್ವತಮ್ಮನವರನ್ನು ಅರ್ಧಾಂಗಿಯಾಗಿ ಸ್ವೀಕರಿಸಿ, ಪಿ.ಎಸ್. ಬಾಲಕೃಷ್ಣಶೆಟ್ಟಿ, ಪಿ.ಎಸ್. ಶ್ರೀನಿವಾಸ ಶೆಟ್ಟಿ, ಪಿ.ಎಸ್. ವೆಂಕಟೇಶ್ ಬಾಬು ಮತ್ತು ಪಿ.ಎಸ್. ಶಂಕರ ನಾರಾಯಣ್ ಎಂಬ ಸುಪುತ್ರರನ್ನು ಪಡೆದು, ಶ್ರೀಮತಿ ಶೋಭಾವತಿಯು ಮುದ್ದು ಮಗಳಾಗಿರಲು, ಎಸ್.ಎಲ್.ಎನ್. ಹೈಸ್ಕೂಲಿನಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ತಮ್ಮ ಶ್ರೇಯೋಭಿಲಾಷಿಗಳಾದ ಶ್ರೀ ಮಲಕಲ ಶಿವರಾಮಯ್ಯ ಶ್ರೇಷ್ಠಿ ಅವರಲ್ಲಿ ಜೀವನದ ಪಾಠಗಳನ್ನು ಕಲಿತು, ಶ್ರೀಮತಿ ಸುಬ್ಬರತ್ನಮ್ಮನವರು ಅಕ್ಕನಾಗಿ, ಅವರ ಭರ್ತ ಶ್ರೀ ಮಲಕಲ ದಶರಥರಾಮಯ್ಯ ಶ್ರೇಷ್ಠಿಯವರು ಹಿತೈಷಿಗಳಾಗಿ, ಅವರ ಜೀವನ-ನಾಣ್ಯದ ಒಂದು ಮುಖ್ಯ ಆರ್ಥಿಕ ಪ್ರಗತಿಯಾಗಿ, ಮತ್ತೊಂದು ಮುಖ ಧರ್ಮಾಚರಣೆಯಾಗಿ-ಧರ್ಮಾಭಿವೃದ್ಧಿಯಾಗಿ ಶಂಕರ್ ಟ್ರೇಡಿಂಗ್ ಕಂಪನಿ, ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್, ಅವೆನ್ಯೂ ಪ್ಲಾಜಾ ಮತ್ತು ವೆಲ್‌ವರ್ತ್ ಸಂಸ್ಥೆಗಳ ಪಾಲುದಾರರಾಗಿ, ಕರ್ನಾಟಕ ಥಿಯಾಸಾಫಿಕಲ್ ಫೆಡರೇಷನ್ ಹಾಗೂ ಬೆಂಗಳೂರು ಥಿಯಾಸಾಫಿಕಲ್ ಸೊಸೈಟಿಯ ಸಿಟಿ ಲಾಡ್ಜ್ ಅಧ್ಯಕ್ಷರಾಗಿ, ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ಸ್ ಆಫ್ ಕಾಮರ್ಸ್‌ನ ಅಧ್ಯಕ್ಷರಾಗಿದ್ದು ಮತ್ತು ಆಲ್ ಇಂಡಿಯಾ ಫುಡ್‌ಗ್ರೈನ್ಸ್ ಡೀಲರ್ಸ್ ಅಸೋಸಿಯೇಷನ್‌ನ ಉಪಾಧ್ಯಕ್ಷರಾಗಿದ್ದು, ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸಕ್ರಿಯ ಸದಸ್ಯರಾಗಿ, ಹೊಸ ದೆಹಲಿಯ ಅಸೋಚೆಮ್ (ASSOCHEM) ಹಾಗೂ ಅಶಕ್ತ ಪೋಷಕ ಸಭಾದ ಸದಸ್ಯರಾಗಿ, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಚಾರಿಟಬಲ್ ಟ್ರಸ್ಟ್, ವಾಸವಿ ಯೂನಿಯನ್ ಟ್ರಸ್ಟ್, ಪಿ.ವಿನ್ ಮತ್ತು ಪಿಕೆ ಚಾರಿಟಬಲ್ ಟ್ರಸ್ಟ್, ಗ್ರೈನ್ ಮರ್ಚೆಂಟ್ಸ್ ಚಾರಿಟಬಲ್ ಟ್ರಸ್ಟ್, ಚಾಮರಾಜಪೇಟೆ ಆರ್ಯವೈಶ್ಯ ಮಂಡಳಿ ಟ್ರಸ್ಟ್‌ಗಳ ಟ್ರಸ್ಟಿಯಾಗಿ, ನೆಮ್ಮದಿಯ, ಸುಖಸಂತೋಷದ, ತುಂಬು ಕುಟುಂಬದ ಯಜಮಾನರಾಗಿ, 3-12-1929ರಂದು ಈ ಜನ್ಮದ ನಾಂದಿಯನ್ನು ಪಡೆದು 15-11-98ರಂದು ಭೀಮರಥಶಾಂತಿಯನ್ನು ಮಾಡಿಕೊಳ್ಳುತ್ತಿರುವ ಶುಭಸಮಾರಂಭದ ಕೇಂದ್ರವ್ಯಕ್ತಿಯಾಗಿ, ಥಿಯಾಸಫಿಯ ತತ್ತ್ವಗಳನ್ನು ಜೀವನಕ್ಕೆ ಅಳವಡಿಸಿಕೊಂಡು ತಮ್ಮ ಜೀವನದ ಅಂತಃಸತ್ವವನ್ನಾಗಿ ಮಾಡಿಕೊಂಡಿರುವವರು - ನಮ್ಮ ಟ್ರಸ್ಟಿನ ಸ್ಥಾಪಕ ಅಧ್ಯಕ್ಷರು:

ಶ್ರೀ ಶ್ರೀ ಸಿ.ಪಿ. ಸುಬ್ಬರಾಜು ಶ್ರೇಷ್ಠಿಯವರು

ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಸಿ.ಪಿ. ಸುಬ್ಬರಾಜು ಶ್ರೇಷ್ಠಿ

ಮೊದಲ ಮಾತು

ಬದುಕಿನಲ್ಲಿ ಬೆಳಕನ್ನು ಬಯಸುವವರು ಬಹುಮಂದಿ ಇರುವುದಿಲ್ಲ. ತಾವು ಕತ್ತಲೆಯಲ್ಲಿದ್ದೇವೆಂದು ಕಂಡುಕೊಂಡರೆ ತಾನೆ ಬೆಳಕನ್ನು ಬಯಸುವುದು? ಹೀಗೆ ಕಂಡುಕೊಳ್ಳುವವರು ವಿರಳ. ಕತ್ತಲೆಯಲ್ಲೆ ಇರುತ್ತಾರೆ; ಆದರೆ ಅದೇ ಬೆಳಕೆಂಬ ಭ್ರಮೆ ಅವರಿಗೆ.

ಸಾಕ್ರಟೀಸನ ಹೆಸರನ್ನು ಯಾರು ಕೇಳಿಲ್ಲ? ಜಗತ್ತಿನ ಜಾಣರನ್ನೆಲ್ಲ ಪಟ್ಟಿಮಾಡಹೊರಟರೆ ಅವನ ಹೆಸರು ಮೊದಲಲ್ಲೆ ಬರುತ್ತದೆ. ಗ್ರೀಸ್‌ದೇಶದ ದಾರ್ಶನಿಕ, ಸಂತ. ಒಮ್ಮೆ ಡೆಲ್ಫಿಯ ದೇಗಲದಲ್ಲಿ ಪಾತ್ರಿಯೊಬ್ಬನ ಮೈಮೇಲೆ ದರ್ಶನವೊದಗಿ ದೇವವಾಣಿ ನುಡಿಯಿತಂತೆ - ಗ್ರೀಕ್ ಜನರಲ್ಲೆಲ್ಲ ಸಾಕ್ರಟೀಸನೇ ತುಂಬ ತಿಳಿದವನು, ಎಂದು. ಅದನ್ನು ಕೇಳಿದ ಒಬ್ಬ, ಸಾಕ್ರಟೀಸನ ಬಳಿ ಬಂದು ಇದನ್ನು ತಿಳಿಸಿ, ದೇವವಾಣಿ ಹೇಳಿದ್ದು ದಿಟವೇ ಎಂದು ಪ್ರಶ್ನೆಮಾಡಿದ. ಅದಕ್ಕೆ ಸಾಕ್ರಟೀಸನು ಕೊಟ್ಟ ಉತ್ತರ - ''ಇದ್ದೀತು, ಮಹಾರಾಯ, ದೇವವಾಣಿ ಸುಳ್ಳಾಗುತ್ತದೆಯೆ? ಆದರೆ ಅದರ ರಹಸ್ಯವನ್ನು ನೀನರಿಯೆ. ನಮ್ಮಲ್ಲಿ ಯಾರಿಗೂ ಏನೂ ತಿಳಿಯದು. ಆದರೆ ನನಗೆ ತಿಳಿದಿಲ್ಲವೆಂದು ನಾನು ತಿಳಿದಿದ್ದೇನೆ; ಬೇರೆಯವರಿಗೆ ಇದು ತಿಳಿಯದು, ಅಷ್ಟೆ!''.

ಹೀಗೆಯೆ, ನಾವಿರುವುದು ಕತ್ತಲೆಯಲ್ಲಿ ಎಂಬುದು ನಮಗೆ ತಿಳಿಯದು; ಬೆಳಕನ್ನು ಕಾಣಬೇಕೆಂಬ ತವಕ ಬರುವುದಾದರೂ ಹೇಗೆ? ಬದುಕಿಗೊಂದು ಚೌಕಟ್ಟು ಇದೆ, ಬದುಕಿನಲ್ಲಿ ಸ್ವಾರಸ್ಯವಿದೆ, ಬದುಕಿನಿಂದ ಒಂದು ಪ್ರಯೋಜನವಿದೆ, ಬದುಕಿನ ಹಾದಿಯಲ್ಲಿ ಹಿತವಿದ್ದೀತು, ಎಂದೆಲ್ಲ ತಿಳಿಯಬೇಕಾದರೆ ಬೆಳಕು ಬೇಕು. ಬಾಳುವೆಯಲ್ಲಿ ಒಳಿತು ಎಂಬುದು ಯಾವುದು, ಕೆಡುಕು ಬರುವುದು ಹೇಗೆ, ಯಾವ ದಾರಿ ಹಿಡಿದರೆ ನೇರವಾಗಿ ಗುರಿಮುಟ್ಟಬಹುದು, ಯಾವ ದಾರಿಯಲ್ಲಿ ಕಲ್ಲು, ಮುಳ್ಳು, ಕೊಳೆ, ಕೆಸರು ತುಂಬಿದೆ ಇವೆಲ್ಲ ಅರಿವಿಗೆ ಬರಲು ಬೆಳಕು ಬೇಡವೆ?

ಬರಿದೆ ಉಸಿರಾಡುವುದೇ ಬದುಕಲ್ಲ. ಹಸಿದಾಗ ಉಂಡು, ಆಯಾಸವಾದಾಗ ಒರಗಿ ಬಿಟ್ಟರೆ ಬದುಕಿದಂತಾಯಿತೆ? ನಮಗೆ ಬೇಡವೆನಿಸಿದರೂ ದುಗುಡ, ದುಮ್ಮಾನಗಳು ಬರುತ್ತವೆ; ಬೇಕೆನಿಸಿದರೂ ಸುಖ ಸಂತೋಷಗಳು ಬರುವುದಿಲ್ಲ. ಆಸೆಯೋ ಮುಗಿಲೆತ್ತರ ಏರುತ್ತದೆ; ಅದನ್ನು ಪೂರೈಸಿಕೊಳ್ಳುವ ಸಾಧನೆಗಳು ಕೈಗೆಟಕುವುದಿಲ್ಲ. ರೋಗ-ರುಜಿನಗಳು ಹತ್ತಿರ ಬರಬಾರದೆಂದು ಇನ್ನಿಲ್ಲದಂತೆ ಹಂಬಲಿಸುತ್ತೇವೆ. ಅವೇನಾದರೂ ಬಾರದೆ ಬಿಡುತ್ತವೆಯೆ?

ಬದುಕೆಂದರೆ ಅದೊಂದು ಕಣ್ಣುಮುಚ್ಚಾಲೆಯಾಟ. ಬೇಕೆನಿಸಿದ್ದು ಕೈಚಾಚಿದರೂ ಸಿಗುವುದಿಲ್ಲ; ಬೇಡವಾದದ್ದು ಬಾರದೆ ಬಿಡುವುದಿಲ್ಲ. ಇನ್ನು ಪ್ರಿಯವಾದರೆ ಅದರ ವಿಯೋಗ ಕಟ್ಟಿಟ್ಟದ್ದೇ; ಅಪ್ರಿಯವಾದದ್ದರ ಸಂಯೋಗವೂ ಅಷ್ಟೇ ನಿಶ್ಚಿತ. ಭೋಗಜೀವನವೆಂದರೆ ರೋಗದ ಭಯವಿಲ್ಲವೆ? ಸಂಪತ್ತೆಂದರೆ ಸಂಕಟವಿಲ್ಲವೆ? ನೆಮ್ಮದಿಯೆಂಬುದು ಹಗಲ ಗನಸು. ಇದು ಕತ್ತಲೆಯೊಳಗಣ ಬದುಕು. ಇದರ ಅರಿವಾದರೆ ಬೆಳಕಿನತ್ತ ಬಯಕೆ ಬೇರೂರುತ್ತದೆ.

ಇಲ್ಲಿನ ಬೆಳಕೆಂದರೆ ಸೂರ್ಯನ ಬೆಳಕಲ್ಲ, ಚಂದ್ರನ ಬೆಳಕಲ್ಲ, ದೀಪದ ಬೆಳಕಲ್ಲ. ಬುದ್ಧಿಯ ಬೆಳಕು. ಬದುಕಿನಲ್ಲಿ ಬುದ್ಧಿಯ ಬಲವಿದ್ದರೆ ಅದರಿಂದ ಒಳಿತೇ ವಿನಾ ಕೆಡುಕಿಲ್ಲ. ಬದುಕಿನ ರೀತಿ-ನೀತಿ, ನೆಲೆ-ಬೆಲೆ, ಚೆಲುವು-ಚೆನ್ನ, ಒನಪು-ಒಯ್ಯಾರ, ರಾಗ-ರಂಗುಗಳನ್ನು ಕಂಡುಕೊಳ್ಳಲು ಬುದ್ಧಿಯ ಬೆಳಕು ಬೇಕು. ಹೊರಗಿನ ಬೆಳಕು ಎಷ್ಟಿದ್ದರೂ ಒಳಗಿನ ಬೆಳಕಿಲ್ಲದಿದ್ದರೆ ಏನು ಪ್ರಯೋಜನ?

ಬುದ್ಧಿಯಲ್ಲಿ ಬೆಳಕನ್ನು ಮೂಡಿಸಿಕೊಳ್ಳದೆ ಬದುಕಿನಲ್ಲಿ ವಿವೇಕ ಬಾರದು; ವಿವೇಕವಿಲ್ಲದೆ ಎಡರುತೊಡರುಗಳು ಪೆಡಂಭೂತವಾಗಿ ತೋರಿಕೊಳ್ಳುತ್ತವೆ. ಬದುಕಿನ ಬವಣೆಗಳು ದಿನಗಂಡ, ಕ್ಷಣಗಂಡವೆಂಬಂತೆ ಮುನ್ನುಗ್ಗಿ ಬರುತ್ತವೆ. ಬದುಕಿನ ಉಳಿದೆಲ್ಲ ಸೌಲಭ್ಯಗಳಿದ್ದರೂ ಅವು ಬಿಸಿಲುಗುದುರೆಗಳಂತೆಯೆ ಆಗಿಬಿಡುತ್ತವೆ.

ಬುದ್ಧಿಯಲ್ಲಿ ಬೆಳಕನ್ನು ಒಡಮೂಡಿಸಿಕೊಳ್ಳುವ ಬಗೆ ಹೇಗೆ? ಧರ್ಮಗ್ರಂಥಗಳು ಮಾಡುವ ಕೆಲಸವೇ ಇದು. ಆಯಾ ದೇಶದ ಜನರಿಗೆ ಅಲ್ಲಲ್ಲಿನ ಧರ್ಮ ಈ ಬಗೆಯ ಬೆಳಕನ್ನು ಒದಗಿಸುತ್ತವೆ. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಲೆಕ್ಕವಿಲ್ಲದಷ್ಟು ಜನರಿಗೆ ಬದುಕಿನಲ್ಲಿ ಬೆಳಕನ್ನು ತಂದು ಕೊಟ್ಟಿರುವ ಗ್ರಂಥವೆಂದರೆ ಭಗವದ್ಗೀತೆ. ನಮ್ಮಲ್ಲಿ ಇದರಷ್ಟು ಜನಪ್ರಿಯವಾದ ಧರ್ಮಗ್ರಂಥ ಮತ್ತೊಂದಿರದು. ಬೇರೆ ದೇಶಗಳಲ್ಲಿ ಇದರಂತೆ ಜನಪ್ರೀತಿಯನ್ನು ಗಳಿಸಿರುವ ಗ್ರಂಥ ಇನ್ನೊಂದಿದೆಯೋ ನಾನರಿಯೆ.

ಇಡೀ ದೇಶದಲ್ಲಿ ಭಗವದ್ಗೀತೆಯ ಪಾಠ, ವ್ಯಾಖ್ಯಾನ, ಅನುವಾದ, ಟೀಕೆ-ಟಿಪ್ಪಣಿಗಳು ಎಣಿಕೆಗೆ ಸಿಗುವುದಿಲ್ಲ; ದೇಶದ ಎಲ್ಲ ಭಾಷೆಗಳಲ್ಲೂ ಭಗವದ್ಗೀತೆಯನ್ನು ಕುರಿತಂತೆ ಲೆಕ್ಕವಿಲ್ಲದಷ್ಟು ಪ್ರಕಟಣೆಗಳಿವೆ. ಅಷ್ಟೇ ಅಲ್ಲ, ಪ್ರಪಂಚದ ಎಲ್ಲ ಭಾಷೆಗಳಲ್ಲೂ ಈ ಗ್ರಂಥದ ಅನುವಾದಗಳಿವೆ. ಲಕ್ಷಾಂತರ ಜನರು ಇದನ್ನು ನಿತ್ಯವೂ ಪಾರಾಯಣ ಮಾಡುತ್ತಾರೆ; ಮಕ್ಕಳು ಬಾಯಿಪಾಠ ಮಾಡುತ್ತಾರೆ. ಎಲ್ಲೆಡೆಗಳಲ್ಲಿ ಇದನ್ನು ಕುರಿತಂತೆ ಪ್ರವಚನಗಳು, ವ್ಯಾಖ್ಯಾನಗಳು, ಪಾಠಗಳು ನಡೆಯುತ್ತಲೆ ಇರುತ್ತವೆ. ಇದರ ಪ್ರತಿಯಿಲ್ಲದ ಹಿಂದೂ ಮನೆಯೆ ಇಲ್ಲವೆಂದರೂ ತಡೆದೀತು. ಇದನ್ನು ಅಷ್ಟಿಷ್ಟಾದರೂ ಅಧ್ಯಯನ ಮಾಡದ ವಿದ್ಯಾವಂತನೂ ಇಲ್ಲವೆನ್ನಬಹುದು.

ಇಷ್ಟೊಂದು ಜನಪ್ರೀತಿಗೆ ಕಾರಣವೇನು? ಶಂಕರಾಚಾರ್ಯರ ಮಾತುಗಳಲ್ಲಿ ಹೇಳುವುದಾದರೆ, ಇದು 'ಸಮಸ್ತವೇದಾರ್ಥಸಾರಸಂಗ್ರಹಭೂತ' ವಾದುದು. ವೇದವಾಙ್ಮಯದ ಶಿಖರಪ್ರಾಯವಾದುದು. ಉಪನಿಷತ್ತುಗಳು ವೇದಸಾಹಿತ್ಯದ ಕೊನೆಯ ಭಾಗವಾಗಿ ವೇದಾಂತವೆನಿಸಿಕೊಂಡುವು. ಅಂತವೆಂದರೆ ನಿರ್ಣಯವೂ ಹೌದು; ವೇದ ಹೇಳಲು ಹೊರಟಿದ್ದು ಉಪನಿಷತ್ತುಗಳಲ್ಲಿರುವ ತತ್ತ್ವವನ್ನೆ. ಉಪನಿಷತ್ತುಗಳು ಹಲವಾರು ಇರುವುದು ಮಾತ್ರವಲ್ಲ; ರಹಸ್ಯವಾದ ಉಪದೇಶವಾದುದರಿಂದ ಎಲ್ಲರೂ ಸರಳವಾಗಿ ತಿಳಿಯುವಂತಿಲ್ಲ. ಭಗವದ್ಗೀತೆಯು ಉಪನಿಷತ್ತುಗಳು ಹೇಳುವ ವಿಚಾರವನ್ನೆ ತಿಳಿಯಾಗಿ, ಎಲ್ಲರಿಗೆ ತಟ್ಟನೆ ಮನದಟ್ಟಾಗುವಂತೆ ತಿಳಿಯಹೇಳುತ್ತದೆ. ಉಪನಿಷತ್ತುಗಳು ಹಸುಗಳೆಂದರೆ, ಹಸುಗಳಿಂದ ಕರೆದುಕೊಂಡ ಹಾಲು ಭಗವದ್ಗೀತೆ. ಹೀಗೆ ಇದು ವೈದಿಕಸಂಪ್ರದಾಯದ ಪ್ರಧಾನವಾದ ಚೌಕಟ್ಟನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಸಾಧನವಾಯಿತು.

ನಮ್ಮ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಗೀತೆಗಳಿಗೇನು ಕೊರತೆಯಿಲ್ಲ. ಅವಧೂತಗೀತಾ, ಅಷ್ಟಾವಕ್ರಗೀತಾ, ಉದ್ಧವಗೀತಾ, ಅನುಗೀತಾ, ಗಣೇಶಗೀತಾ, ಪಾಂಡವಗೀತಾ, ಈಶ್ವರಗೀತಾ, ಶಿವಗೀತಾ ಹೀಗೆ ನೂರಾರು ಗೀತೆಗಳಿವೆ. ಆದರೆ ಸುಮ್ಮನೆ ಗೀತೆಯೆಂದರೆ ಎಲ್ಲರ ಪಾಲಿಗೆ ಭಗವದ್ಗೀತೆಯೇ. ಇಷ್ಟು ಅದರ ಪ್ರಖ್ಯಾತಿ!

ಭಗವದ್ಗೀತೆಯ ಪಾಠವಿರುವುದು ಮಹಾಭಾರತದಲ್ಲಿ ಭೀಷ್ಮಪರ್ವದಲ್ಲಿ ಭಗವದ್ಗೀತಾ ಪರ್ವವೆಂಬ ಭಾಗವೇ ಇದೆ. ಇದರಲ್ಲಿ 25ನೆಯ ಅಧ್ಯಾಯದಿಂದ 42ನೆಯ ಅಧ್ಯಾಯದವರೆಗೆ ಭಗವದ್ಗೀತೆಯ ಪಾಠವಿರುವುದು. ಸರ್ವಶಾಸ್ತ್ರಗಳಲ್ಲಿ ಭಾರತವು ಶ್ರೇಷ್ಠವಾದುದೆಂದೂ, ಭಾರತದಲ್ಲಿ ಗೀತೆಯು ಶ್ರೇಷ್ಠವೆಂದೂ ಎಣಿಕೆ; ಇದು ಭಾರತಾರ್ಥಸಂಗ್ರಹವೆಂದೂ ಹೇಳುವುದಿದೆ. ಭಾರತವು ಸ್ಮೃತಿಯಾದರೂ ಅದರಲ್ಲಿರುವ ಗೀತೆಯನ್ನು ಮಟ್ಟಿಗೆ ಶ್ರುತಿಗೆ ಸಮಾನವಾಗಿಯೇ ನಮ್ಮವರು ಎಣಿಸಿದ್ದಾರೆ. ವ್ಯಾಸರಿಂದ

ಪಡೆದುಕೊಂಡದ್ದನ್ನು ವೈಶಂಪಾಯನರು ಜನಮೇಜಯನಿಗೆ ಹೇಳಿದರು; ಅದನ್ನೆ ಸರ್ಪಯಾಗದಲ್ಲಿದ್ದ ಪೌರಾಣಿಕ ಉಗ್ರಶ್ರವ (ಸೂತ) ಕೇಳಿಸಿಕೊಂಡು ಶೌನಕಾದಿಗಳಿಗೆ ನೈಮಿಶಾರಣ್ಯದಲ್ಲಿ ಹೇಳಿದ್ದು ಭಾರತ. ಗೀತೆಯಲ್ಲಿ ಈ ಒಕ್ಕಣೆ ಇರದಿದ್ದರೂ ಕುರುಕ್ಷೇತ್ರ ಯುದ್ಧ ನಡೆಯುವಾಗ ಸಂಜಯನು ಧೃತರಾಷ್ಟ್ರನಿಗೆ ಹೇಳಿದಂತೆ ಹಿನ್ನೆಲೆಯಿದೆ. ಆದರೆ ಎಲ್ಲರೂ ತಿಳಿದಿರುವುದು ಇದು ಕೃಷ್ಣಾರ್ಜುನ ಸಂವಾದವೆಂದೇ. ಮಹಾಭಾರತದ ಕಥೆಯ ಓಟಕ್ಕೂ, ಪ್ರಸಂಗಗಳಿಗೂ ಗೀತೆಗೂ ಯಾವ ಸಂಬಂಧವೂ ಇಲ್ಲ.

ಗೀತೆಯನ್ನು ಶಂಕರಾಚಾರ್ಯರ ಕಾಲದಿಂದಲೂ ನಮ್ಮವರು ಸ್ವತಂತ್ರಶಾಸ್ತ್ರ ಗ್ರಂಥವೆಂದೇ ಪರಿಗಣನೆಮಾಡಿದ್ದಾರೆ. ಶಾಸ್ತ್ರವೆಂದರೆ ಅಧ್ಯಾತ್ಮಶಾಸ್ತ್ರ, ಆತ್ಮನನ್ನು, ಎಂದರೆ ಜೀವನ ಹಿತವನ್ನು, ಕುರಿತ ಶಾಸ್ತ್ರ. ಅದರ ಅರ್ಥವನ್ನು ಅರಿತುಕೊಂಡರೆ ಮನುಷ್ಯನ ಎಲ್ಲ ಪುರುಷಾರ್ಥಗಳೂ ಕೈಗೂಡುವುವೆಂದು ಶಂಕರಾಚಾರ್ಯರೇ ಹೇಳಿದ್ದಾರೆ. ತತ್ತ್ವ-ಹಿತ ಎರಡನ್ನೂ ಮನದಟ್ಟುಮಾಡಿಕೊಡುವುದರಿಂದ ಇದು ಶಾಸ್ತ್ರವೆಂದು ವೇದಾಂತದೇಶಿಕರ ವಿವರಣೆ. ಶಾಸ್ತ್ರ ಪದ್ಧತಿಯಂತೆಯೇ ವಿಚಾರಗಳ ನಿರೂಪಣೆಯೂ ಇರುವುದನ್ನು ಕಾಣಬಹುದು. ಶಾಸ್ತ್ರ ಮಾಡಬೇಕಾದ ಕೆಲಸವನ್ನು ಗೀತೆ ಸಮರ್ಥವಾಗಿಯೆ ಮಾಡುತ್ತದೆ. ವೇದಾಂತ ದೇಶಿಕರು ಹೇಳುವಂತೆ, ತತ್ತ್ವವೇನು, ಯಥಾರ್ಥವಾಗಿ ಇರುವ ವಸ್ತು ಯಾವುದು, ಅದರ ಸ್ವರೂಪವೇನು ಎಂದು ತಿಳಿಯಹೇಳುವುದರೊಂದಿಗೆ ಮನುಷ್ಯ ಹೇಗೆ ಬದುಕಿದರೆ ಅವನಿಗೆ ಒಳಿತು ಎಂಬುದನ್ನೂ ಸ್ಪಷ್ಟಪಡಿಸುತ್ತದೆ.

ಬದುಕಿನಲ್ಲಿ ತೋರಿಕೊಳ್ಳಬಹುದಾದ ಯಾವುದೇ ಆತಂಕ, ಅಳುಕು, ಅಂಜಿಕೆ ಯಾರಿಗಿದ್ದರೂ ಗೀತೆಯಿಂದ ಧೈರ್ಯ ತಂದುಕೊಳ್ಳಬಹುದು. ಮನುಷ್ಯ ದುಃಖಕ್ಕೀಡಾಗುವುದು ಹೇಗೆ, ನೆಮ್ಮದಿಯನ್ನು ಪಡೆದುಕೊಳ್ಳುವುದು ಹೇಗೆ ಎಂಬುದನ್ನೂ ಗೀತೆ ತಿಳಿಯಾದ ಮಾತುಗಳಲ್ಲಿ ಸರಳವಾಗಿ, ಆದರೆ ಖಚಿತವಾಗಿ ತಿಳಿಸಿಕೊಡುತ್ತದೆ. ಹೀಗೆಂದೇ ಸಾವಿರಾರು ವರ್ಷಗಳಿಂದ ನಮ್ಮ ಜನ ಗೀತೆಯನ್ನು ಗಟ್ಟಿಯಾಗಿ ಹಿಡಿದಿದ್ದಾರೆ; ಗೀತೆಯಿಂದ ಸರಿಯಾದ ದಾರಿಯನ್ನು ಅರಿತುಕೊಂಡು ಬದುಕಿನಲ್ಲಿ ಕೃತಾರ್ಥರಾಗಿದ್ದಾರೆ. ರಾಷ್ಟ್ರದ ರಾಜಕಾರಣದಲ್ಲಿ ತೊಡಗಿದ್ದ ಲೋಕಮಾನ್ಯ ಟಿಳಕರು, ಮಹಾತ್ಮಾಗಾಂಧಿ, ಅರವಿಂದರು, ಆನಿಬೆಸೆಂಟ್ ಮೊದಲಾದವರೂ ಗೀತೆಯಿಂದಲೆ ಬೆಳಕನ್ನು ಪಡೆದುಕೊಂಡವರು. ಅಧ್ಯಾತ್ಮದಲ್ಲಿ ನಿಷ್ಠರಾದವರ ಮಾತನ್ನು ಹೇಳುವುದೇ ಬೇಡ. ಇವರೆಲ್ಲರಿಗೆ ಗೀತೆಯೇ ಊರುಗೋಲೆಂಬುದರಲ್ಲಿ ಎರಡು ಮಾತಿಲ್ಲ.

ಗೀತೆಯಲ್ಲಿ ಏಳು ನೂರು ಶ್ಲೋಕಗಳು, ಹದಿನೆಂಟು ಅಧ್ಯಾಯಗಳಲ್ಲಿ ಅಡಕವಾಗಿವೆ. ಆದರೆ ಮಹಾಭಾರತದಲ್ಲೇ ಬರುವ ಎಣಿಕೆಯಂತೆ ಏಳುನೂರು ನಲವತ್ತೈದು ಶ್ಲೋಕಗಳಿರಬೇಕು. (ಕೃಷ್ಣನ ಮಾತುಗಳು 680, ಅರ್ಜುನನದ್ದು 57, ಸಂಜಯನದ್ದು 67,

ಧೃತರಾಷ್ಟ್ರನದು ಒಂದು, ಭೀಷ್ಮಪರ್ವ, 43, 4-5). ಆದರೆ ಈಗ ಇರುವುದು ಕೃಷ್ಣನ ಮಾತುಗಳು 574, ಅರ್ಜುನನದ್ದು 28, ಸಂಜಯನದ್ದು 41, ಧೃತರಾಷ್ಟ್ರನದು ಒಂದು, ಒಟ್ಟು ಏಳುನೂರು ಶ್ಲೋಕಗಳು. ಇದನ್ನು ಅರಾಬಿಕ್ ಭಾಷೆಗೆ ಅನುವಾದ ಮಾಡಿದ ಅಲ್‌ಬೆರೂನಿ (ಕ್ರಿಸ್ತಾಬ್ದ 1030ರಲ್ಲಿ) 245 ಶ್ಲೋಕಗಳಿರುವ ಗೀತೆಯನ್ನು ನೋಡಿದ್ದನಂತೆ. ಆದರೆ ಶಂಕರಾಚಾರ್ಯರೂ ಗೀತೆಯ ಪ್ರಮಾಣವು ಏಳುನೂರು ಶ್ಲೋಕಗಳೆಂದೇ ಹೇಳುತ್ತಾರೆ (ಸಪ್ತಭಿಃ ಶ್ಲೋಕಶತೈಃ ಉಪನಿಬಬಂಧ). ಎಲ್ಲ ಆಚಾರ್ಯರೂ, ವ್ಯಾಖ್ಯಾನಕಾರರೂ ಈ ಸಂಖ್ಯೆಯನ್ನೆ ಹಿಡಿದಿದ್ದಾರೆ; ಕಾಶ್ಮೀರದ ಅಭಿನವಗುಪ್ತ ಮತ್ತು ರಾಜಾನಕ ರಾಮಕಂಠ ಇಬ್ಬರನ್ನು ಬಿಟ್ಟು (ಅವರು 245 ಶ್ಲೋಕಗಳ ಗೀತೆಯನ್ನು ಬಳಸಿಕೊಂಡಿದ್ದಾರೆ).

ಗೀತೆಯನ್ನು ಶಾಸ್ತ್ರವೆಂದಮೇಲೆ ಅದರ ಉಪಕ್ರಮ ಯಾವುದು? ಎಂದರೆ ಗೀತೆ ದಿಟವಾಗಿ ಆರಂಭವಾಗುವುದೆಲ್ಲಿ? ಇದರ ಉಪಸಂಹಾರ, ಎಂದರೆ ಇದು ಮುಗಿಯುವುದು ಎಲ್ಲಿ? ಗೀತೆಯ ಗ್ರಂಥವೇನೋ 'ಧರ್ಮಕ್ಷೇತ್ರೇ' ಎಂಬ ಮೊದಲನೆ ಶ್ಲೋಕದಿಂದ ಶುರುವಾಗಿ 'ಧ್ರುವಾ ನೀತಿರ್ಮತಿರ್ಮಮ' ಎಂದು (ಶ್ಲೋಕ 700ರ ಕೊನೆ) ಮುಗಿಯುತ್ತದೆ. ಆದರೆ ಶಾಸ್ತ್ರಕ್ಕೆ ಸಂಬಂಧಪಡದ ಭಾಗಗಳನ್ನು ಬಿಟ್ಟರೆ, ಎರಡನೆ ಅಧ್ಯಾಯದ ಹನ್ನೊಂದನೆಯ ಶ್ಲೋಕವಾದ 'ಅಶೋಚ್ಯಾನನ್ವಶೋಚಸ್ತ್ವಂ' ಎಂಬಲ್ಲಿಂದ ಮೊದಲಾಗಿ, ಹದಿನೆಂಟನೆಯ ಅಧ್ಯಾಯದ ಅರವತ್ತಾರನೆಯ ಶ್ಲೋಕವಾದ 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬುದರ ಕಡೆಗೆ ಬರುವ 'ಮಾ ಶುಚಃ' ಎಂಬಲ್ಲಿ ಮುಗಿಯುತ್ತದೆ.

ಗೀತಾಶಾಸ್ತ್ರವಿರುವುದು ಮನುಷ್ಯನ ಶೋಕವನ್ನು ನಿವಾರಣೆ ಮಾಡುವುದಕ್ಕೆ. ಇದೇ ಗೀತೆಯ ಮುಖ್ಯ ವಿಚಾರ; ಮತ್ತೆ ಮತ್ತೆ ಬರುವುದೂ ಇದೇ ವಿಚಾರ. ಇದನ್ನು 'ಅಭ್ಯಾಸ' ಎನ್ನುತ್ತಾರೆ. ಗೀತೆಯಲ್ಲಿ ಬಂದು, ಬೇರೆಯಲ್ಲಿಯೂ ಬರದಿರುವ ವಿಚಾರವೂ ಇದೇ, ಇದನ್ನು 'ಅಪೂರ್ವತಾ' ಎನ್ನುತ್ತಾರೆ. ಗೀತೆಯನ್ನು ತಿಳಿದುಕೊಂಡು ಅದನ್ನು ಪ್ರಯೋಗದಲ್ಲಿ ತಂದುಕೊಂಡರೆ ಒದಗುವ 'ಫಲ'ವೂ ಶೋಕದ ನಿವಾರಣೆಯೇ. ಯುಕ್ತಿಯಿಂದ ವಿಚಾರಮಾಡಿರುವುದೂ ಇದನ್ನೆ (ಉಪಪತ್ತಿ). ಹೀಗಾಗಿ, ಗೀತೆಯ 'ಉಪಕ್ರಮ', 'ಉಪಸಂಹಾರ'ಗಳೂ ಶೋಕವನ್ನೆ ಕುರಿತದ್ದಾಗಿರಬೇಕು. 'ಶೋಕ ಪಡುತ್ತಿದ್ದೀಯೆ' (ಅನ್ವಶೋಚಸಿ) ಎಂದು ಮೊದಲಾಗಿ, 'ಶೋಕಪಡಬೇಡ' (ಮಾ ಶುಚಃ) ಎಂದು ಮುಗಿಯುವುದೇ ಸಮಂಜಸವಾದದ್ದು.

ಮೇಲೆ ಹೇಳಿದ ಆರು ವಿವರಗಳಿಂದ (ಷಡ್‌ಲಿಂಗಗಳಿಂದ) ತಾತ್ಪರ್ಯ ನಿರ್ಣಯ ಮಾಡುವ ಕ್ರಮದಲ್ಲಿ ಭಗವದ್ಗೀತೆಯ ಮುಖ್ಯಭಾಗದಲ್ಲಿ ಅರ್ಜುನವಿಷಾದಯೋಗವೆಂಬ ಮೊದಲನೆಯ ಅಧ್ಯಾಯ ಸೇರುವುದಿಲ್ಲ. ಸಂಪ್ರದಾಯದ ಎಣಿಕೆಯೂ ಇದೇ. ಹಾಗೆಂದೇ

ಯಾವ ಆಚಾರ್ಯರೂ ಈ ಭಾಗಕ್ಕೆ ಭಾಷ್ಯ ಬರೆಯುವ ಗೋಜಿಗೆ ಹೋಗಿಲ್ಲ. ಇಲ್ಲಿ ಬರುವ ಯಾವ ವಿಚಾರವೂ ಗೀತೆಯಲ್ಲಿ ಮತ್ತೆ ಕಾಣಬರುವುದಿಲ್ಲ. ಆದರೆ ಇದು ಗೀತೆಗೆ ಹಿನ್ನೆಲೆಯನ್ನೂ ಸಂದರ್ಭವನ್ನೂ ಒದಗಿಸುತ್ತದೆ. ಅರ್ಜುನನಿಗೆ ತೋರಿಕೊಂಡ ಶೋಕದ ಸ್ವರೂಪವೇನೆಂಬುದನ್ನು ಕಾಣಿಸುತ್ತದೆ. ಮನುಷ್ಯನ ಅನುಭವದಲ್ಲಿ ಬರುವ ಅಳಲನ್ನು ಚೆನ್ನಾಗಿ ತೋರಿಸುತ್ತದೆ. ಧರ್ಮದ ನೆಲೆಯೇನೆಂಬುದನ್ನು ಯೋಗದಿಂದ ತಿಳಿಯಬೇಕು; ಬರಿಯ ನಂಬಿಕೆಗಳಿಂದಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಗೀತೆಯ ಭಾಷೆ ಸರಳವಾಗಿದೆ, ಮಾತಿನಲ್ಲಿ ಮಾಧುರ್ಯವಿದೆ, ಒಕ್ಕಣೆ ಓರಣವಾಗಿದೆ. ಹೀಗೆಂದ ಮಾತ್ರಕ್ಕೆ ಕಾವ್ಯದಂತೆ, ಕತೆಯಂತೆ ಅದನ್ನು ಓದಿಕೊಳ್ಳಬಹುದೆಂದರ್ಥವಲ್ಲ. ಹಾಗೆ ಓದಿದರೆ ಪ್ರಯೋಜನವೇನೂ ಇರದು. ಶಂಕರಾಚಾರ್ಯರೇ ಹೇಳುವಂತೆ, ಅದು 'ದುರ್ವಿಜ್ಞೇಯಾರ್ಥ'. ಎಂದರೆ, ಅದರ ತಾತ್ಪರ್ಯ ತಟ್ಟನೆ ತಿಳಿಯುವುದಿಲ್ಲ. ಅದಕ್ಕಾಗಿಯೇ ಅದರ ಅರ್ಥವಿವರಣೆಗೆಂದು ಅನೇಕ ಭಾಷ್ಯಗಳೂ, ವ್ಯಾಖ್ಯಾನಗಳೂ ಟೀಕೆಗಳೂ ಹೊರಟುಕೊಂಡಿವೆ. ಮೂರೂ ಮಂದಿ ಆಚಾರ್ಯರು ಭಾಷ್ಯಗಳನ್ನು ರಚಿಸಿದ್ದಾರೆ. ಶಂಕರಾಚಾರ್ಯರ ಭಾಷ್ಯಕ್ಕೆ ಆನಂದಗಿರಿಯ ಟೀಕೆಯಿದೆ. ರಾಮಾನುಜಾಚಾರ್ಯರ ಭಾಷ್ಯಕ್ಕೆ ವೇದಾಂತದೇಶಿಕರ ವ್ಯಾಖ್ಯಾನವಿದೆ. ಮಧ್ವಾಚಾರ್ಯರ ಭಾಷ್ಯಕ್ಕೆ ಜಯತೀರ್ಥರ ಟೀಕೆಯಿದೆ, ರಾಘವೇಂದ್ರಸ್ವಾಮಿಗಳ ವಿವೃತಿಯಿದೆ. ಇದಲ್ಲದೆ ವಲ್ಲಭಾಚಾರ್ಯರ 'ಸತ್ತತ್ತ್ವದೀಪಿಕೆ', ಭಾಸ್ಕರಾಚಾರ್ಯರ 'ಭಗವದಾಶಯಾನುಸರಣ', ಆನಂದವರ್ಧನನ 'ಜ್ಞಾನಕರ್ಮ ಸಮುಚ್ಚಯ', ನಿಂಬಾರ್ಕರ 'ತತ್ತ್ವಪ್ರಕಾಶಿಕೆ', ಧನಪತಿಯ 'ಭಾಷ್ಯೋತ್ಕರ್ಷದೀಪಿಕೆ', ಮಧುಸೂದನ ಸರಸ್ವತಿಗಳ 'ಗೂಢಾರ್ಥದೀಪಿಕೆ', ಹನುಮತ್‌ಕೃತ 'ಪೈಶಾಚಭಾಷ್ಯ', ಕೇಶವಕಾಶ್ಮೀರಿಯ 'ತತ್ತ್ವಪ್ರಕಾಶಿಕೆ', ಶ್ರೀಧರಸ್ವಾಮಿಯ 'ಸುಬೋಧಿನೀ', ರಾಮಕಂಠನ 'ಸರ್ವತೋಭದ್ರ', ದೈವಜ್ಞಪಂಡಿತನ 'ಪರಮಾರ್ಥಪ್ರಭೆ' ಹೀಗೆ ನೂರಾರು ವಿವರಣೆಗಳಿವೆ.

ಇವನ್ನೆಲ್ಲ ಓದಿ ದಿಕ್ಕುಕೆಟ್ಟು ಗೊಂದಲದಲ್ಲಿ ಸಿಕ್ಕು ತಲೆಕೆಡಿಸಿಕೊಳ್ಳಬೇಕೆಂದರ್ಥವಲ್ಲ. ನಮಗೆ ಹೊಳೆಯದ ಅನೇಕ ವಿಚಾರಗಳು ಈ ವಿವರಣೆಗಳಲ್ಲಿವೆಯೆಂಬುದು ದಿಟ; ಆಲೋಚನೆ ಮಾಡಬೇಕಾದ ಕ್ರಮವನ್ನು ಇವು ಸೂಚಿಸುತ್ತವೆಯೆಂಬುದೂ ದಿಟ. ನಮಗಿಂತ ಹೆಚ್ಚು ಬುದ್ಧಿವಂತರು, ತಪಸ್ವಿಗಳು, ಅನುಭವಸ್ಥರು ಬರೆದಿರುವ ವಿವರಣೆಗಳಲ್ಲಿ ಸತ್ತ್ವವಿಲ್ಲದೆ ಇರುತ್ತದೆಯೇ? ಸ್ವಾರಸ್ಯವಿಲ್ಲದೆ ಉಂಟೆ? ಆದರೆ ಈ ವಿವರಣೆಗಳನ್ನೆಲ್ಲ ಓದುತ್ತ ಕುಳಿತರೆ ಗೀತೆಯ ಮೂಲಭಾವಧಾರೆಯೇ ನಮ್ಮ ಹಿಡಿತದಿಂದ ಜಾರಿಹೋದರೆ ಮಾಡುವುದೇನು? ಅಸಲನ್ನು ಮರೆತು ಬಡ್ಡಿಗೆ ಮಾತ್ರ ಆಸೆಪಟ್ಟಂತೆ ಆದೀತು!

ಈ ಇಕ್ಕಟ್ಟಿನಿಂದ ಪಾರಾಗುವುದು ಹೇಗೆ? ಗೀತೆಯನ್ನು ಶ್ರದ್ಧೆಯಿಂದ ಓದಿದಾಗ, ಅದರ ಮಾತುಗಳನ್ನು ಗಮನವಿರಿಸಿಕೊಂಡು ಮನವರಿಕೆಮಾಡಿಕೊಂಡಾಗ, ಅದನ್ನೇ ಕುರಿತು ಎಡೆಬಿಡದೆ ಚಿಂತನೆ ಮಾಡಿದಾಗ, ನಮ್ಮ ಅನುಭವದ ಒರೆಗಲ್ಲಿನಲ್ಲಿ ಅದನ್ನು ತೀಡಿ ನೋಡಿದಾಗ, ಅದರ ಸೂಚನೆಗಳನ್ನು ಪ್ರಯೋಗಕ್ಕೆ ತಂದುಕೊಳ್ಳಲು ಪ್ರಯತ್ನ ಪಟ್ಟಾಗ, ನಮ್ಮ ಧ್ಯಾನದಲ್ಲಿ ಅವನ್ನು ಅಳವಡಿಸಿಕೊಂಡಾಗ ಗೀತೆಯು ತನ್ನ ಗುಟ್ಟನ್ನು ಬಿಟ್ಟುಕೊಟ್ಟೀತು, ತನ್ನ ತಾತ್ಪರ್ಯವನ್ನು ನಮ್ಮೆದುರು ತೋರಿಸೀತು.

ಅನುಭವಕ್ಕೆ ತಂದುಕೊಳ್ಳದ ಅಧ್ಯಯನದಿಂದ ಪ್ರಯೋಜನವೇನು? ಹಣ್ಣಿನ ನೆರಳು ನೀರಿನಲ್ಲಿ ಬಿದ್ದುದನ್ನು ತಿನ್ನಬಹುದೆ? ಅದರಲ್ಲಿ ರುಚಿಯಿರುವುದೆ? ಗೀತೆಯಿರುವುದು ವಿಚಾರಕ್ಕೆ ಮಾತ್ರವಲ್ಲ; ಆಚಾರವೂ ಅದರಿಂದ ಕುದುರಬೇಕು. ಗೀತೆಯ ಅರ್ಥವನ್ನು ಮನಸ್ಸಿನಲ್ಲಿ ತಂದುಕೊಳ್ಳಬೇಕು, ನಿಜ. ಆದರೆ ಅಷ್ಟೇ ಸಾಲದು, ಅದರ ಭಾವವನ್ನು ಹೃದಯದಲ್ಲಿ ತುಂಬಿಕೊಳ್ಳಬೇಕು.

ಗೀತೆಯಲ್ಲಿ ಕಾಣಸಿಗುವ ರಥರೂಪಕ ಗೀತೆಯ ಮೂಲವೆಂದೇ ಹೇಳಬಹುದು. ನಮ್ಮ ಜೀವವೇ ದೇಹದ ಒಡೆಯ; ದೇಹವೇ ಬಂಡಿ; ಇಂದ್ರಿಯಗಳು ಬಂಡಿಗೆ ಹೂಡಿದ ಕುದುರೆಗಳು; ಪ್ರಪಂಚದ ವಿಷಯಗಳೇ ಕುದುರೆಗಳು ಓಡುವ ದಾರಿ. ಮನಸ್ಸು ಕುದುರೆಯನ್ನು ತೊಡಗಿಸುವ, ಬಿಗಿಹಿಡಿಯುವ ಕಡಿವಾಣ. ಇನ್ನು ಬಂಡಿಯನ್ನು ನಡೆಸುವವನು ಯಾರು? ನಮ್ಮ ಬುದ್ಧಿಯೇ. ಬುದ್ಧಿಯ ಅಂಕೆಯಲ್ಲಿ ಮನಸ್ಸಿದ್ದು, ಮನಸ್ಸು ಇಂದ್ರಿಯಗಳನ್ನು ಸರಿಯಾಗಿ ನಡೆಯಿಸಿದರೆ ಪ್ರಯಾಣ ಸುಖಕರವಾದೀತು. ಬುದ್ಧಿಯು ಮನಸ್ಸನ್ನು ಅದರಿಚ್ಛೆಯಂತೆ ಹರಿಯಬಿಟ್ಟರೆ, ಇಂದ್ರಿಯಗಳು ದಾರಿತಪ್ಪಿ ಓಡುತ್ತವೆ. ಬಂಡಿಯು ಸಿಕ್ಕಾಪಟ್ಟೆ ಪೇಚಿನಲ್ಲಿ ಸಿಕ್ಕು ಹಾಳಾಗುತ್ತದೆ. ಬಂಡಿಯು ದಾರಿಹಿಡಿದು ನೆಮ್ಮದಿಯಿಂದ ಮುಂದೆ ಸಾಗಬೇಕಾದರೆ ಕುದುರೆಗಳು ಒಳ್ಳೆಯವಾಗಿರಬೇಕಲ್ಲವೆ? ಹುಚ್ಚುಕುದುರೆಗಳನ್ನು ಕಟ್ಟದರೆ ಬಂಡಿಯ ಗತಿಯೇನಾಗಬೇಕು?

> ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು।
> ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
> ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್।
> ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ॥

ನಮ್ಮಲ್ಲಿ ಒಬ್ಬೊಬ್ಬರಿಗೂ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ ಇರುತ್ತವೆಯಲ್ಲವೆ? ಈ ಒಕ್ಕೂಟವೇ ಬದುಕು. ಇದರಲ್ಲಿ ಬುದ್ಧಿಯೇ ಮುಖ್ಯವಾದ ವಿವರ; ಅದೇ

ಸಾರಥಿಯಲ್ಲವೆ? ಅರ್ಜುನನೇನೋ ರಥದ ಒಡೆಯ; ರಥ ಅವನದ್ದೇ ದಿಟ. ಆದರೆ ಕೃಷ್ಣ ರಥದ ಸಾರಥಿ; ಅವನ ಸ್ಥಾನ ಬುದ್ಧಿಯದು. ಕೃಷ್ಣನ ಮಾತೇ ನಮ್ಮ ಬುದ್ಧಿಗೆ ಬೆಳಕಾದರೆ, ನಮ್ಮ ಬಂಡಿಯನ್ನು ನಡೆಸುವವನೂ ಅವನೇ ಎಂದಾಯಿತು. ಅರ್ಜುನ ಅವನ ಮಾರ್ಗದರ್ಶನವನ್ನು ಬಯಸಿ 'ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ' ಎಂದು ಮೊರೆಹೊಕ್ಕಾಗ ಕೃಷ್ಣ ಅವನಿಗೆ ಗುರುವಾದ. ನಾವೂ ಹಾಗೆಯೇ ಗೀತೆಯನ್ನು ಮೊರೆಹೊಕ್ಕರೆ, ನಮ್ಮ ದಾರಿಯೂ ಸುಗಮವಾದೀತು. ನಮಗೂ ಅವನೇ ಗುರುವಾದಾನು.

ಭಗವದ್ಗೀತೆಯು ಭಗವಂತನೆನಿಸಿದ ಕೃಷ್ಣನದೇ ಮಾತೆಂದು ಅದರ ಹಿರಿಮೆ. ರಾಘವೇಂದ್ರಸ್ವಾಮಿಗಳು ಈ ಗ್ರಂಥವನ್ನು ಶ್ರೀಕೃಷ್ಣಗೀತೆಯೆಂದೇ ಕರೆದಿದ್ದಾರೆ. ಗೀತೆಯ ವಾಕ್ಯಗಳನ್ನು ಭಗವದ್ವಾಣಿಯೆಂದೇ ಎಣಿಸುತ್ತೇವೆ. ಆದರೆ ಇಲ್ಲಿನದು ಸಂಕೇತಪ್ರಧಾನವಾದ ವಿವರ. ಕುರುಕ್ಷೇತ್ರ ಯುದ್ಧವೆಂದರೆ ಎಲ್ಲಿಯೋ ಎಂದೋ ನಡೆದ ಪ್ರಸಂಗವಲ್ಲ. ನಮ್ಮ ಒಡಲಲ್ಲಿ ಅನುಗಾಲವೂ ನಡೆಯುತ್ತಿರುವ ಹಗರಣ. ಪಾಂಡವರೆಂದರೆ ಒಳಿತಿಗೆ ಒಲಿದವರು; ಕೌರವರು ಕೇಡಿಗರು. ನಮ್ಮಲ್ಲೇ ಇವೆರಡೂ ಪ್ರವೃತ್ತಿಗಳಿಲ್ಲವೆ? ಹಗರಣದಲ್ಲಿ ತೊಡಗಿದ ಅರ್ಜುನ ಹೇಳಿಕೇಳಿ ನರ; ಎಂದರೆ ಮನುಷ್ಯ. ನಮ್ಮಲ್ಲಿ ಒಬ್ಬೊಬ್ಬರೂ ಅರ್ಜುನರೇ. ಅಲ್ಲಿ ಅರ್ಜುನನಿಗೆ ಒದಗಿದ ವಿಷಾದ ನಮ್ಮನ್ನೂ ಬಗೆಬಗೆಯಾಗಿ ಕಾಡುತ್ತದೆ. ಈ ವಿಷಾದದಿಂದ ನಮ್ಮನ್ನು ಪಾರುಮಾಡುವವನೇ ಕೃಷ್ಣ, ಎಂದರೆ ನಾರಾಯಣ. ನರರಿಗೆ ದಾರಿ ತೋರಿ, ಆಸರೆಯಾದವನು ನಾರಾಯಣ. ನಾರಾಯಣನೆಂಬ ಮಾತಿನ ಅರ್ಥ ಅದೇ (ನರಾಣಾಂ ಅಯನಂ). ನರನ ಹತ್ತಿರವೇ ನಾರಾಯಣನಿದ್ದಾನೆ. ನಮ್ಮ ಒಡಲೊಳಗೇ ಇರುವವನು ನಾರಾಯಣನೇ; ಅವನನ್ನು ನಾವು ಗುರುತಿಸಿಕೊಂಡು, ಬದುಕುವ ದಾರಿಯನ್ನು ಅವನಿಂದ ಅರಿತುಕೊಂಡರೆ ಗೀತೆಯ ಪ್ರಯೋಜನ ಕೈಗೂಡಿದಂತೆ.

ಎಂದರೆ ಗೀತೆಯ ಆದೇಶ-ಉಪದೇಶಗಳನ್ನು ಕುರುಡು ನಂಬಿಕೆಯಿಂದ ಚಾ-ಚು ತಪ್ಪದಂತೆ, ದಣಿಯ ಆಣತಿಯಂತೆ ಪಾಲಿಸಬೇಕೆಂದರ್ಥವಲ್ಲ. ಗೀತೆಯಲ್ಲಿ ಕೃಷ್ಣನೇ ಅರ್ಜುನನಿಗೆ ಹೇಳಬೇಕಾದುದನ್ನೆಲ್ಲ ಹೇಳಿ, ಕಡೆಯ ಮಾತಾಗಿ ಹೇಳಿದ್ದೇನು? ''ನಾನು ಹೇಳಿದ್ದನ್ನೆಲ್ಲ ವಿಚಾರಮಾಡಿನೋಡು. ಆಮೇಲೆ ನಿನ್ನ ಮನಸ್ಸಿಗೆ ಬಂದಂತೆ ಮಾಡು'' ('ವಿಮೃಶ್ಯ ಏತದಶೇಷೇಣ ಯಥೇಚ್ಛಸಿ ತಥಾಕುರು', 18, 63). ಇದನ್ನೇ ಮಾಡು, ಅದನ್ನೇ ಮಾಡು, ಹೀಗೆಯೇ ಮಾಡು, ಹಾಗೆಯೇ ಮಾಡು ಎಂದೇನು ಕೃಷ್ಣ ನಿರ್ಬಂಧ ಮಾಡಲಿಲ್ಲ; ಕೆಲಸ ಮಾಡುವ ಮುಂಚೆ ವಿಚಾರಮಾಡು ಎಂದಷ್ಟೆ ಅವನು ಹೇಳಿದ್ದು. ವಿಚಾರ ಮಾಡಬೇಕಾದುದು ಹೇಗೆ ಎಂದು ತಿಳಿಸಿಕೊಟ್ಟದ್ದು ಗೀತೆಯ ಸ್ವಾರಸ್ಯ.

ಗೀತೆಯಲ್ಲಿ ನಮಗೆ ಕಾಣಿಸುವ ಕೃಷ್ಣ ಮಹಾಭಾರತದಲ್ಲಿ ಕಾಣಿಸುವಂತೆಯೂ ಇಲ್ಲ, ಭಾಗವತ ಮತ್ತಿತರ ಪುರಾಣಗಳಲ್ಲಿ ಕಾಣುವಂತೆಯೂ ಇಲ್ಲ. ಇಲ್ಲಿನ ಕೃಷ್ಣ ಯೋಗೇಶ್ವರ; ತಾನೇ ಯೋಗದ ದಾರಿಯನ್ನು ಹಿಡಿದು, ಅದರಲ್ಲೆ ನಡೆದು ಗುರಿಯನ್ನು ಮುಟ್ಟಿದವನು. ಅವನು ಮಾಡಲೇಬೇಕಾದ ಯಾವುದೇ ಕೆಲಸವಿರದಿದ್ದರೂ, ಲೋಕಸಂಗ್ರಹದ ದೃಷ್ಟಿಯಿಂದ ವ್ಯವಹಾರಪ್ರಪಂಚದಲ್ಲಿ ತೊಡಗಿರುವವನು. ಅವನಲ್ಲಿ ಆಚಾರಕ್ಕೂ ವಿಚಾರಕ್ಕೂ ಅಂತರವಿರದು. ಬದುಕಿನ ಒಟ್ಟಾರೆ ಕಾಣ್ಕೆ ಅವನಿಗಿರುವುದರಿಂದ, ಮೇಲ್ನೋಟಕ್ಕೆ ಅಸಂಗತವೆಂದು ಕಂಡದ್ದನ್ನೂ ಸಮನ್ವಯಮಾಡುವ ಕೌಶಲ ಅವನಿಗಿದೆ. ಯೋಗೇಶ್ವರನಾದ ಕೃಷ್ಣನಿರುವ ಕಡೆ ಪಾರ್ಥ (ಎಂದರೆ ಅರ್ಜುನ) ಧನುರ್ಧರನಾಗಿರಬೇಕು; ಎಂದರೆ ತನ್ನ ಕರ್ತವ್ಯವನ್ನು ನಿರ್ವಹಿಸಲು ಸಿದ್ಧನಾಗಿರಬೇಕು, ಸನ್ನದ್ಧನಾಗಿರಬೇಕು-

'ಯತ್ರ ಯೋಗೇಶ್ವರಃ ಕೃಷ್ಣೋ ತತ್ರ ಪಾರ್ಥೋ ಧನುರ್ಧರಃ'

ಯೋಗದ ಪ್ರಯೋಜನವಿರುವುದು ಇದರಲ್ಲೇ. 'ನೀನು ಯೋಗಿಯಾಗು' ಎಂಬುದೇ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶ - 'ತಸ್ಮಾತ್ ತ್ವಂ ಯೋಗೀ ಭವಾರ್ಜುನ'.

ದಿಟವಾಗಿ ಗೀತೆ ಕಾಣಿಸುವುದು, ನಮ್ಮ ಅಂತಃಕರಣದಲ್ಲಿ ನೆಲೆಗೊಂಡು, ಅಂತರ್ಯಾಮಿಯಾಗಿರುವ ಕೃಷ್ಣನನ್ನು. 'ಹೃದ್ದೇಶೇಽರ್ಜುನ ತಿಷ್ಠತಿ' ಎಂಬ ಮಾತು ಅಲ್ಲಿದೆ (18,61). ಪ್ರತಿಯೊಬ್ಬರ ಒಡಲೊಳಗೆ ಅಡಗಿರುವ ಕೃಷ್ಣನೇ ನಮ್ಮ ಬದುಕನ್ನು ನೇರ್ಪಡಿಸಿ ನಡೆಸುವ ಗುರು. ಅವರವರಿಗೆ ಅವರವರ ಗುರುವಾದುದರಿಂದ ಜಗದ್ಗುರು, ಜಗತ್ತಿನಲ್ಲಿರುವ ಎಲ್ಲರಿಗೂ ಬೇರೆಬೇರೆಯಾಗಿ ಗುರು. ಗುರುವಿನ ಕೆಲಸವೇನು? ಶಿಷ್ಯನಾದವನಿಗೆ ದಾರಿ ತೋರಿಸುವುದು. ಶಿಷ್ಯನಲ್ಲದವನಿಗೆ ಗುರುವೇನು ದಾರಿ ತೋರಿಸಬೇಕಾದುದಿಲ್ಲ. ಶಿಷ್ಯನಾಗುವುದು ಬಿಡುವುದು ನಮಗೆ ಬಿಟ್ಟದ್ದು.

ಗೀತೆಯಲ್ಲಿ ಅರ್ಜುನನ್ನು ಶಿಷ್ಯನಾಗಿ ಕಾಣಿಸಿರುವುದು ಸಾಂಕೇತಿಕವಾಗಿ; ನೆಪಮಾತ್ರಕ್ಕೆ. ಗೀತೆಯನ್ನು ಅಧ್ಯಯನಮಾಡಲು ಹೊರಡುವ ಯಾರಾಗಲಿ ಅರ್ಜುನನೇ. ರಾಮಾನುಜಾಚಾರ್ಯರು 'ಪಾರ್ಥಂ ರಥಿನಂ ಆತ್ಮಾನಂ ಚ ಸಾರಥಿಂ ಸರ್ವಲೋಕಸಾಕ್ಷಿಕಂ ಚಕಾರ' ಎಂದು ಹೇಳಿರುವುದು ಇದೇ ಅರ್ಥದಲ್ಲಿಯೇ. ಸರಿ, ಆದರೆ ಗುರುವಾದ ಕೃಷ್ಣನನ್ನು ಕಂಡುಕೊಳ್ಳುವುದು ಹೇಗೆ? ಭಗವದ್ಗೀತೆಯಲ್ಲಿಯೆ ಇದರ ವಿವರಣೆ ದೊರಕುತ್ತದೆ. ನಿರ್ಮಲವಾದ ಬುದ್ಧಿಗೆ ಸಿಗುವವನು (6,21); ಬುದ್ಧಿಯಿಂದ ಕೂಡಿದಾಗ ಮಾತ್ರ ಬದುಕು ಹಸನಾದೀತು (2,39); ಬುದ್ಧಿಯಲ್ಲಿಯೇ ಗುರುವನ್ನು ಕಂಡುಕೊಳ್ಳಬೇಕು (2,49) ಮುಂತಾದ ಮಾತುಗಳಿಂದ ಬುದ್ಧಿಯ ಹೆಗ್ಗಳಿಕೆಯನ್ನು ಹೇಳಲಾಗಿದೆ. ಭಗವದ್ಗೀತೆಯ ಸಂದೇಶವು ವಾಸ್ತವವಾಗಿ ಬುದ್ಧಿಯೋಗವೇ (ನೋಡಿ 2, 49).

ಸಾಮಾನ್ಯವಾಗಿ ನಮ್ಮ ಬುದ್ಧಿಯು ಮನಸ್ಸಿಗೆ ಅಧೀನವಾಗಿರುತ್ತದೆ; ಕಡಿವಾಣಕ್ಕೆ ಸಾರಥಿಯು ವಶವಾದಂತೆ; ವಿಕೃತವಾದ ಬುದ್ಧಿ ಇದು. ಇದು ಬದುಕನ್ನು ಕತ್ತಲೆಯಲ್ಲಿ ಮುಳುಗಿಸುತ್ತದೆ. ಹೀಗಾದಾಗಲೇ ಕಾಮ, ಕ್ರೋಧಗಳೆಂಬ ಶತ್ರು ನಮ್ಮನ್ನು ಕಾಡುವುದು (3, 43). ಮನಸ್ಸು ಬುದ್ಧಿಗೆ ಅಧೀನವಾಗಿರಬೇಕು; ಆಗ ಬುದ್ಧಿಯು ತನಗಿಂತ ಉತ್ತಮನಾದ ಅಂತರ್ಯಾಮಿಯನ್ನು ಕಂಡುಕೊಳ್ಳುತ್ತದೆ. ಸಾರಥಿಯು ಬಂಡಿಯ ಒಡೆಯನಿಗೆ ಅಧೀನನಾಗಿರಬೇಕಷ್ಟೆ?

ಬುದ್ಧಿಯೆಂದರೆ ವಿವೇಚನೆ; ಅದರಿಂದಲೇ ಜ್ಞಾನ ಒದಗಿಬರುವುದು. ಜ್ಞಾನವೆನ್ನುವುದು ಬುದ್ಧಿವೃತ್ತಿಯೇ. ಮನಸ್ಸು ಅದಕ್ಕೆ ಅಧೀನವಾಗಿದ್ದುಕೊಂಡು ವಿವರಗಳನ್ನು ಸಂಗ್ರಹಿಸಿದಾಗ, ಬುದ್ಧಿಯು ವಸ್ತುಗಳ ಸ್ವರೂಪ, ಸ್ವಭಾವಗಳನ್ನೂ, ಮಾಡುವ ಕೆಲಸ ಸರಿಯೋ ತಪ್ಪೋ ಎನ್ನುವುದನ್ನೂ, ಏನನ್ನು ಮಾಡಬೇಕು, ಹೇಗೆ ಮಾಡಬೇಕು ಎನ್ನುವುದನ್ನೂ ನಿರ್ಧರಿಸುತ್ತದೆ. ಮನಸ್ಸು, ಬುದ್ಧಿಗಳಿಂದ ಪ್ರಚೋದಿತವಾದದ್ದೇ ಕರ್ಮವೆನಿಸಿಕೊಳ್ಳುತ್ತದೆ. ಬುದ್ಧಿಗಿಂತ ಮಿಗಿಲಾದ ಪರತತ್ತ್ವದಲ್ಲಿ ಬುದ್ಧಿಯೂ ಮನಸ್ಸೂ ಪಾಲುಗೊಂಡಾಗ ಅದು ಭಕ್ತಿ. ಬುದ್ಧಿಯೇ ಎಚ್ಚೆತ್ತಾಗ ಅದು ಜ್ಞಾನ; ಈ ಪರತತ್ತ್ವ (ಆತ್ಮ) ಎಚ್ಚೆತ್ತಾಗ ಅದು ವಿಜ್ಞಾನ. ಜ್ಞಾನ ವಿಜ್ಞಾನಗಳನ್ನು ಗೀತೆ ಒಟ್ಟಿಗೆ ಹೇಳುವುದುಂಟು.

ಹೀಗೆ ಗೀತೆಯಲ್ಲಿ ಬುದ್ಧಿಯೋಗದ ಅಂಗಗಳಾಗಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳನ್ನು ಹೇಳಲಾಗಿದೆ. ಆದರೆ ಈ ಹೆಸರುಗಳನ್ನು ಬೇರೆಬೇರೆಯಾಗಿ ಎಲ್ಲಿಯೂ ನಿರ್ದೇಶಿಸಿಲ್ಲ. ಬುದ್ಧಿಯೋಗವೆಂಬುದು ಮಾತ್ರ ಮತ್ತೆ ಮತ್ತೆ ಬರುತ್ತದೆ. ಬುದ್ಧಿಯು ಮೇಲೆ ಹೇಳಿದ ಈ ಮೂರೂ ಯೋಗಗಳಿಗೆ ಅಗತ್ಯವಾದ ಹಿನ್ನೆಲೆ. ಬುದ್ಧಿಯೋಗದ ಮುಖ್ಯ ಲಕ್ಷಣಗಳು ಚಿತ್ತದ ಸಮತೆ ('ಸಮತ್ವಂ ಯೋಗ ಉಚ್ಯತೇ'), ನಿರ್ವಿಕಾರತೆ ('ನಾಭಿನಂದತಿ ನ ದ್ವೇಷ್ಟಿ'), ನಿಃಸಂಗತ್ವ ('ಸಂಗಂ ತ್ಯಕ್ತ್ವಾ'), ಸಾತ್ತ್ವಿಕಗುಣದ ಉತ್ಕರ್ಷ.'ಬುದ್ಧೌ ಶರಣಮನ್ವಿಚ್ಛ' (ಬುದ್ಧಿಯನ್ನು ನಿನ್ನ ಆಸರೆಯಾಗಿ ಮಾಡಿಕೋ) ಎನ್ನುವುದೇ (92,49) ಗೀತೆಯ ಸಂದೇಶ. ಬದುಕಿಗೆ ಬೇಕಾದ ಬೆಳಕನ್ನು ನೀಡುವುದು ಬುದ್ಧಿಯೇ. ಈ ಬೆಳಕನ್ನು ಬಳಸಿಕೊಂಡು ಬದುಕುವ ಕಲೆಯನ್ನೆ ಗೀತೆ ಯೋಗವೆಂದು ಕರೆದಿದೆ. ಯೋಗವೆಂದರೆ ಉಪಾಯವೆಂದೂ ಅರ್ಥ, ಕೂಡಿಕೊಳ್ಳುವುದೆಂದೂ ಅರ್ಥ. ಬುದ್ಧಿಯೋಗದಲ್ಲಿ ಬುದ್ಧಿಯನ್ನೇ ಉಪಾಯವಾಗಿ ಬಳಸಿಕೊಳ್ಳುವುದೂ ಇದೆ; ಬುದ್ಧಿಯು ಪರತತ್ತ್ವದೊಂದಿಗೆ ಕೂಡಿಕೊಳ್ಳುವುದೂ ಇದೆ.

ಗೀತೆಯ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿರುವ ಪುಷ್ಪಿಕೆಯು ಕಾಣಿಸುವ ಒಕ್ಕಣೆಯಂತೆ ಇದು ಶ್ರೀಮದ್ ಭಗವದ್ಗೀತೆಯೆಂಬ ಉಪನಿಷತ್ತು, ಬ್ರಹ್ಮವಿದ್ಯೆ, ಯೋಗಶಾಸ್ತ್ರ, ಗ್ರಂಥದ ಸ್ವರೂಪ ಕೃಷ್ಣಾರ್ಜುನ ಸಂವಾದ. ಕೃಷ್ಣನು ಭಗವಾನನಾದುದರಿಂದ, ಇದು ಅವನ ಮಾತಾದುದರಿಂದ ಇದು ಭಗವದ್ಗೀತೆ.

ಭಗವಾನನೆಂದರೆ ಜ್ಞಾನ (ಎಲ್ಲವನ್ನೂ ತಿಳಿಯುವುದು), ಬಲ (ಎಲ್ಲಕ್ಕೂ ಆಸರೆಯಾಗಿರುವುದು), ಐಶ್ವರ್ಯ (ಎಲ್ಲದರ ಒಡೆತನ), ವೀರ್ಯ (ಏನೊಂದು ವಿಕಾರವಿಲ್ಲದೆ ಎಲ್ಲವನ್ನೂ ನಿಯಮಿಸುವುದು), ಶಕ್ತಿ (ಬೇರೆ ಯಾರಿಗೂ ಸಾಧ್ಯವಿರದ, ಎಲ್ಲವನ್ನೂ ಮಾಡುವುದು) ಮತ್ತು ತೇಜಸ್ಸು (ಯಾರ ನೆರವನ್ನೂ ಕೋರದಿರುವುದು, ಯಾರಿಗೂ ಅಧೀನನಾಗದಿರುವುದು) ಈ ಆರು ಗುಣಗಳನ್ನು (ಇದೇ ಭಗ) ಹೊಂದಿರುವವನು. ಇದು ರಹಸ್ಯವಾದ ಉಪದೇಶವಾದುದರಿಂದ, ಅವಿದ್ಯೆಯನ್ನು ತೊಲಗಿಸುವುದರಿಂದ ಉಪನಿಷತ್ತು. ಬುದ್ಧಿ ನಿರ್ಮಲವಾದಾಗ ಅದರಲ್ಲಿ ಪ್ರಕಟಗೊಳ್ಳುವ ಪರತತ್ತ್ವವೇ ಬ್ರಹ್ಮ; ಇದನ್ನು ತಿಳಿಸುವುದು ಬ್ರಹ್ಮವಿದ್ಯೆ. ಬುದ್ಧಿಯೋಗದ ದಾರಿಯನ್ನು ಯುಕ್ತಿಯುಕ್ತವಾಗಿ ಸ್ಪಷ್ಟಪಡಿಸುವುದರಿಂದ ಯೋಗಶಾಸ್ತ್ರ.

ಇದನ್ನು ಅಧ್ಯಾತ್ಮವಿದ್ಯೆ, ಅಧ್ಯಾತ್ಮಶಾಸ್ತ್ರ ಎಂದೂ ನಿರ್ದೇಶಿಸುವುದುಂಟು. ಆತ್ಮನನ್ನು ಕುರಿತದ್ದು ಅಧ್ಯಾತ್ಮ. ಇಲ್ಲಿ ಆತ್ಮನೆಂದರೆ ದೇಹ, ಇಂದ್ರಿಯ, ಮನಸ್ಸುಗಳಿಂದ ಕೂಡಿದ ಜೀವನೂ ಹೌದು. ಇವನ ಸ್ವರೂಪವೂ ಗೀತೆಯಲ್ಲಿ ವಿವರಿಸಲ್ಪಟ್ಟಿದೆ. ಇದು ಆತ್ಮಾವಲೋಕನ ಎನಿಸಿಕೊಳ್ಳುತ್ತದೆ. ಇವನ ಅಂತರ್ಯಾಮಿಯಾದ ಪರತತ್ತ್ವವೂ ಆತ್ಮನೇ, ಪರಮಾತ್ಮ . ಇದರ ವಿಚಾರವೂ ಗೀತೆಯಲ್ಲಿ ಪ್ರಧಾನವಾಗಿಯೆ ಬಂದಿದೆ. ಹೀಗಾದುದರಿಂದ ಇದು ಅಧ್ಯಾತ್ಮ ವಿದ್ಯೆ. ಆತ್ಮನ ತತ್ತ್ವ ಮತ್ತು ಹಿತ ಎರಡನ್ನೂ ಯಥಾರ್ಥದೃಷ್ಟಿಯಿಂದ ತಿಳಿಯಹೇಳುವುದು ಅಧ್ಯಾತ್ಮಶಾಸ್ತ್ರ.

ಈ ಗ್ರಂಥದಲ್ಲಿರುವ ಹದಿನೆಂಟು ಅಧ್ಯಾಯಗಳಲ್ಲಿ ಒಂದೊಂದರ ಹೆಸರಿನ ಕೊನೆಯಲ್ಲೂ ಯೋಗವೆಂಬ ಮಾತು ಸೇರುತ್ತದೆ. ಒಟ್ಟಾರೆ ಯೋಗಶಾಸ್ತ್ರವೆಂದೇ ಆಯಿತು. ಪ್ರಾಚೀನ ಸಂಪ್ರದಾಯದ ಎಣಿಕೆಯಲ್ಲಿ ಹದಿನೆಂಟು ಅಧ್ಯಾಯಗಳನ್ನು ಮೂರು ವಿಭಾಗಗಳಲ್ಲಿ ಅಡಕ ಮಾಡಿದ್ದಾರೆ. ಒಂದೊಂದು ವಿಭಾಗದಲ್ಲೂ ಆರಾರು ಅಧ್ಯಾಯಗಳಿದ್ದು ಷಟ್ಕಗಳೆನಿಸಿಕೊಳ್ಳುತ್ತದೆ. ಮೊದಲನೆಯದು ಪೂರ್ವಷಟ್ಕ, ಎರಡನೆಯದು ಮಧ್ಯಷಟ್ಕ, ಕಡೆಯದು ಅಂತಿಮ (ಅಥವಾ ಉತ್ತರ) ಷಟ್ಕ. ಒಂದೊಂದು ಷಟ್ಕದಲ್ಲೂ ಕರ್ಮ, ಭಕ್ತಿ, ಜ್ಞಾನಗಳ ವಿಚಾರ ಕೂಡಿಕೊಂಡೇ ಬರುವುದರಿಂದ ಷಟ್ಕಗಳ ವ್ಯವಸ್ಥೆಯಾಗಿರುವುದು ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳಿಂದ ಎಂದು ಹೇಳಬರುವುದಿಲ್ಲ.

ರಾಘವೇಂದ್ರಸ್ವಾಮಿಗಳ ಪ್ರಕಾರ ಮೊದಲನೆಯ ಷಟ್ಕವು ಜ್ಞಾನದ ಉಪಾಯವನ್ನು ತಿಳಿಯಪಡಿಸುತ್ತದೆ (ಜ್ಞಾನೋಪಾಯೋಕ್ತಿ). ಎರಡನೆಯದು ಈ ಉಪಾಯದಿಂದ ಸಾಧ್ಯವಾಗುವ ಜ್ಞಾನದ ವಿಚಾರವನ್ನು ಕುರಿತದ್ದು (ತತ್ಸಾಧ್ಯಜ್ಞಾನ ಕಥನಂ). ಮೂರನೆಯದು ಹಿಂದೆ ಹೇಳಿದ ಎಲ್ಲ ವಿಚಾರವನ್ನೂ ವಿವರಿಸುತ್ತದೆ (ಪೂರ್ವೋಕ್ತ ಸರ್ವಪ್ರಪಂಚನಂ). ಇಲ್ಲಿ ಜ್ಞಾನವೆಂದರೆ ಜೀವಾತ್ಮನ ಜ್ಞಾನವೂ ಹೌದು, ಪರಮಾತ್ಮನ ಜ್ಞಾನವೂ ಹೌದು. ಜ್ಞಾನದ ಎರಡು ಮುಖಗಳು ಇವು; ಇವನ್ನು ಬೇರ್ಪಡಿಸಲು

ಬರುವುದಿಲ್ಲ. ಜ್ಞಾನದಲ್ಲಿ ಇವೆರಡೂ ಪಾಲುಗೊಂಡಾಗ ಭಕ್ತಿಯಾಯಿತು. ಭಕ್ತಿಯೆನ್ನುವ ಮಾತಿನ ಮೂಲದಲ್ಲಿ 'ಭಜ್' ಎಂಬ ಧಾತುವಿಗೆ ಪಾಲುಗೊಳ್ಳುವುದು, ಸೇವೆಮಾಡುವುದು ಎಂಬರ್ಥಗಳಿವೆ.

ಧರ್ಮವೇ ಗೀತೆಯ ಮುಖ್ಯವಿಚಾರ ಎಂದು ಶಂಕರಾಚಾರ್ಯರು ಹೇಳುತ್ತಾರೆ. ಧರ್ಮವೆಂದರೆ ವೇದೋಕ್ತವಾದ ಪ್ರವೃತ್ತಿ-ನಿವೃತ್ತಿ. ಮನುಷ್ಯನು ಎಲ್ಲಿ ತೊಡಗಬೇಕು, ಯಾವುದನ್ನು ಬಿಡಬೇಕು ಎನ್ನುವ ವಿವೇಕವೇ ಧರ್ಮ. ಇದರಿಂದ ಜೀವನಕ್ಕೆ ಸುಖ ಒದಗಿಬರುವುದು ಅಭ್ಯುದಯ; ಜೀವದ ಹಿತವನ್ನು ಸಾಧಿಸಿಕೊಳ್ಳುವುದು ನಿಃಶ್ರೇಯಸ. ಅಭ್ಯುದಯದಲ್ಲಿ ಪ್ರಾಪಂಚಿಕ ಪ್ರಗತಿ; ನಿಃಶ್ರೇಯಸದಲ್ಲಿ ಬಂಧನದಿಂದ ಬಿಡುಗಡೆ. ಎರಡೂ ಇದ್ದರೇ ಲೋಕಸಂಸ್ಥಿತಿ. ಮೋಕ್ಷವನ್ನು ಬಯಸುವವರಿಗೆ ಮಾತ್ರ ಗೀತೆಯ ಪ್ರಯೋಜನ ಎನ್ನುವುದು ತಪ್ಪು; ಸಂಸಾರಿಗಳಿಗೇ ಅದರ ಪ್ರಯೋಜನ ಹೆಚ್ಚಿನದು.

ಧರ್ಮಶಾಸ್ತ್ರಗಳು ಪ್ರವೃತ್ತಿ-ನಿವೃತ್ತಿಗಳನ್ನು ಹೇಳುವಾಗ ಒಮ್ಮತವಿರದು; ಕರ್ಮದ ಜಾಡಿನಲ್ಲೇ ಧರ್ಮದ ವಿಧಿನಿಷೇಧಗಳು ಬರುತ್ತವೆ. ಆದರೆ ಇವು ಮುಖ್ಯವಲ್ಲವೆಂದು ಗೀತೆಯ ಎಣಿಕೆ. ಅರ್ಜುನನಿಗೆ ಧರ್ಮಾಧರ್ಮಗಳ ಬಗ್ಗೆ ಗೊಂದಲವುಂಟಾಯಿತು (ಧರ್ಮಸಮ್ಮೂಢಚೇತಾಃ). ಆದರೆ ಅವನು ಗೊಂದಲಗೊಂಡ ಧರ್ಮ ಸಾಮಾನ್ಯವಾಗಿ ಜನರು ವಾಡಿಕೆಯಂತೆ ನಂಬಿಕೊಂಡು ಬಂದ ಧರ್ಮ; ತನ್ನ ವಿಚಾರದಿಂದ ಸಿದ್ಧವಾದುದಲ್ಲ, ತನ್ನ ಸ್ವಭಾವಕ್ಕೂ ಸರಿಹೊಂದುವುದಲ್ಲ. ಮೇಲಾಗಿ, ಧರ್ಮ ಬೇರೊಂದು ಗುರಿಗೆ ದಾರಿಯೇ ಹೊರತು ಅದೇ ಗುರಿಯಲ್ಲ. ಧರ್ಮದ ಈ ಪರತಂತ್ರನೆಲೆಯನ್ನು ತೋರಿಸಲೆಂದೇ ಕೃಷ್ಣ ಕಡೆಯಲ್ಲಿ-

'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂದು ಹೇಳಿಬಿಟ್ಟ! ಬದುಕಿಗಾಗಿ ಧರ್ಮವಿರಬೇಕು; ಧರ್ಮಕ್ಕಾಗಿ ಬದುಕಲ್ಲ. ಬದುಕಿನ ಚರಿತಾರ್ಥವಿರುವುದು ಬೇರೆ ಕಡೆ. ಇದರಲ್ಲಿ ಸ್ವಭಾವವೂ ಕೆಲಸಮಾಡುತ್ತದೆ. ಗೀತೆ ಇದನ್ನು ಒತ್ತಿಹೇಳುತ್ತದೆ. ಸ್ವಭಾವಕ್ಕೆ ಅನುರೂಪವಾದ ಧರ್ಮ ಸ್ವಧರ್ಮ.

ಗೀತೆ ತೋರಿಸುವ ದಾರಿ ವಿರಕ್ತಿಯದಲ್ಲ; ಸ್ವಧರ್ಮದ್ದು, ಕರ್ತವ್ಯನಿಷ್ಠೆಯದು, ಲೋಕಸಂಗ್ರಹದ್ದು. ಗೀತೆಯಲ್ಲಿ ಹೊಸದಾಗಿ ಕಂಡು ಬರುವ ಪರಿಭಾಷೆಗಳಲ್ಲಿ ಸ್ವಧರ್ಮ ಮತ್ತು ಲೋಕಸಂಗ್ರಹ ಇವೆರಡೂ ಮುಖ್ಯವಾದುವು. ವ್ಯಕ್ತಿಯು ತನ್ನ ಹಿತವನ್ನು ಮಾತ್ರ ಸಾಧಿಸಿಕೊಂಡರೆ ಸಾಲದು; ಸುತ್ತಮುತ್ತಲವರ, ಪರಿವಾರದ, ಸಮುದಾಯದ ಹಿತವನ್ನೂ ಸಾಧಿಸಬೇಕು. ಇದು ಲೋಕಸಂಗ್ರಹ. ಅದಕ್ಕಾಗಿ ತನಗೆ ವಿಹಿತವಾದ ಕರ್ಮಗಳನ್ನು ಮಾಡುತ್ತಲೆ ಇರಬೇಕು; ಬಿಡಬಾರದು. ಇದು ಸ್ವಧರ್ಮ. ಆದರೆ ಕರ್ಮ ಮಾಡುವಾಗ ತಾನು ಮಾಡುತ್ತಿದ್ದೇನೆಂಬ ಕರ್ತೃತ್ವಾಭಿಮಾನವನ್ನು ಬಿಡಬೇಕು; ಪ್ರಯೋಜನದ

ಸಲುವಾಗಿಯೇ ಮಾಡುತ್ತಿದ್ದೇನೆಂಬ ಎಣಿಕೆಯನ್ನೂ ಬಿಡಬೇಕು. ಇದನ್ನು ಅನಾಸಕ್ತಿಯೋಗ ಎಂದೋ ನಿಷ್ಕಾಮಕರ್ಮವೆಂದೋ ಕರೆಯಬಹುದು. ಸಂನ್ಯಾಸವೆಂಬುದು ದಿಟವಾದ ಅರ್ಥದಲ್ಲಿ ಈ ಬಗೆಯ ಸಂಕಲ್ಪಸಂನ್ಯಾಸವೇ.

ಯಜ್ಞವೆಂಬ ಮಾತಿಗೂ ಗೀತೆಯು ವಿಶಾಲವಾದ ಅರ್ಥವನ್ನು ಕೊಟ್ಟಿದೆ. ಅಹಂಕಾರ, ಮಮಕಾರ, ಸ್ವಾರ್ಥ, ಸಂಕಲ್ಪ, ಕಾಮನೆ, ಫಲಾಪೇಕ್ಷೆಗಳನ್ನು ಬಿಟ್ಟು ಯಾವ ಕೆಲಸವನ್ನು ಮಾಡಿದರೂ ಅದು ಯಜ್ಞವೇ. ಯಜ್ಞವು ನಾನಾಬಗೆಯದಿರಬಹುದು. ದ್ರವ್ಯ, ದಾನ, ತಪಸ್ಸು (ದೇಹದಂಡನೆ), ಯೋಗ (ಕರ್ಮಯೋಗ, ನಮಗೆ ವಿಹಿತವಾದ ಕೆಲಸವನ್ನು ಫಲಾಸಕ್ತಿಯಿಲ್ಲದೆ ಮಾಡುವುದು), ಸ್ವಾಧ್ಯಾಯ (ಶಾಸ್ತ್ರ ಗ್ರಂಥಗಳ ಅಧ್ಯಯನ), ಜ್ಞಾನ (ಶ್ರವಣ, ಮನನ, ನಿದಿಧ್ಯಾಸನ, ಪ್ರವಚನ), ಇಂದ್ರಿಯ ನಿಗ್ರಹ, ಭಗವದುಪಾಸನೆ, ಮನಃಸಂಯಮ ಇವೆಲ್ಲ ಯಜ್ಞಗಳೇ.

ಯಾವುದು ಧರ್ಮ, ಯಾವುದು ಅಧರ್ಮ ಎಂಬ ವಿವೇಕವಿಲ್ಲದೆ ಒದ್ದಾಡುತ್ತಿದ್ದ ಅರ್ಜುನನಿಗೆ ಕೃಷ್ಣನು ತಿಳಿಯಹೇಳಿದ್ದು ಈ ಯಜ್ಞವೆಂಬ ಧರ್ಮವನ್ನೇ; ಪ್ರವೃತ್ತಿ (ಕರ್ಮವನ್ನು ಮಾಡುವುದು), ನಿವೃತ್ತಿ (ಸಂಗವನ್ನು, ಅಭಿಮಾನವನ್ನು, ಫಲಕಾಮನೆಯನ್ನು ಬಿಡುವುದು) ಎರಡರ ರಹಸ್ಯವನ್ನೂ ಬಯಲುಮಾಡಿದ. ಇಷ್ಟು ಮಾಡಿದ್ದರಿಂದ ಗೀತೆಯನ್ನು ಧರ್ಮಶಾಸ್ತ್ರವೆಂದು ಯಾರೂ ಎಣಿಸುವುದಿಲ್ಲ. ಅದು ಹೇಳಿಕೇಳಿ ಯೋಗಶಾಸ್ತ್ರವೇ. ಯೋಗವೆಂದರೆ ಉಪಾಯವೆಂದು ಮೊದಲೇ ಹೇಳಿದೆವಲ್ಲ? ಅವರವರ ಸ್ವಭಾವಕ್ಕೆ ಅನುಗುಣವಾಗಿ ಉಪಾಯಗಳನ್ನು ಹಿಡಿಯಬೇಕು. ಯೋಗದ ನೆಲೆಯಲ್ಲೇ ಯಜ್ಞಗಳ ವಿಚಾರವೂ ಬರುವುದು.

ಗೀತೆಯಲ್ಲಿ ಬದುಕಿನ ಗುರಿಯನ್ನು ಮೋಕ್ಷವೆಂದು ಕಾಣಿಸುವುದಕ್ಕಿಂತ ಹೆಚ್ಚಾಗಿ ಯೋಗವೆಂದು ಕಾಣಿಸಿರುವುದು ಸ್ವಾರಸ್ಯ. ಮೋಕ್ಷವೆನ್ನುವ ಮಾತು ನಿಷೇಧಾತ್ಮಕವಾದದ್ದು; ಸಂಸಾರದಿಂದ ಬಿಡುಗಡೆ, ಮಾಯೆಯ ಹಿಡಿತದಿಂದ ತಪ್ಪಿಸಿಕೊಳ್ಳುವುದು ಎಂದು ಅದರ ಅರ್ಥ. ಗೀತೆಯಲ್ಲಿ ಸಂಸಾರದಿಂದ ದೂರವಾಗುವ ಹವಣಿಕೆಯೇನು ಎದ್ದು ಕಾಣುವುದಿಲ್ಲ. 'ಇರಬೇಕು, ಇದ್ದು ಜಯಿಸಬೇಕು'; 'ಇರಬೇಕು, ಇರದಿರಬೇಕು', 'ನೀನಿಟ್ಹಾಂಗೆ ಇರುವೆನೋ ದೊರೆಯೆ' ಇಂಥ ದೃಷ್ಟಿಯೇ ಇಲ್ಲಿರುವುದು. ಜ್ಞಾನಿಯೇ ಆದರೇನಂತೆ, ಸಂಸಾರವನ್ನು ತೊರೆಯಬಹುದೆ? ಲೋಕ ಸಂಗ್ರಹಕ್ಕಾದರೂ ಸಂಸಾರದಲ್ಲಿ ಇರಲೇಬೇಕಲ್ಲ? ಕಾಮದ ಕಟ್ಟುಪಾಡಿಗೆ, ಗುಣಗಳ ಹಿಡಿತಕ್ಕೆ ಸಿಲುಕಿಕೊಳ್ಳದಿರುವ ಉಪಾಯವನ್ನು ಗೀತೆ ಸೂಚಿಸುತ್ತದೆ. ಇದೇ ಯೋಗ. ಮೋಕ್ಷವೆನ್ನುವ ಕಲ್ಪನೆಗಿಂತ ಯೋಗದ ಕಲ್ಪನೆಗೆ ಇಲ್ಲಿ ಬಲ ಹೆಚ್ಚು.

ಇಲ್ಲಿ ಯೋಗವೆಂದರೆ ಪಾತಂಜಲಯೋಗವೆಂದೋ, ಹಠಯೋಗ-ರಾಜಯೋಗ-ಲಯಯೋಗ ಗಳೆಂದೋ ಬಗೆಯಬಾರದು. ಇಲ್ಲಿ ಈ ಬಗೆಯ ಯೋಗಗಳ ಪ್ರಸ್ತಾಪ

ಬರುವುದಿಲ್ಲ. ಗೀತೆಯಲ್ಲಿ ಯೋಗವೆಂದರೆ ಚೆನ್ನಾಗಿ ಬದುಕುವ ಬಗೆ. ಯಾರಾಗಿರಲಿ, ಎಲ್ಲಿಯೇ ಇರಲಿ, ಎಂತೇ ಇರಲಿ, ಬುದ್ಧಿ ನೆಟ್ಟಗಿದ್ದರೆ ಆಯಿತಲ್ಲ? ಅದಕ್ಕೆ ಅಭ್ಯಾಸ ಬೇಕು, ವೈರಾಗ್ಯ ಬೇಕು. ಹರಿದಾಡುವ ಹುಚ್ಚು ಮನಸ್ಸನ್ನು ಹಿಡಿದಿಡುವುದು ಇದರ ಉದ್ದೇಶ. ಈ ಯೋಗವೇ ಇಲ್ಲಿನ ಬುದ್ಧಿಯೋಗ.

ಇದನ್ನು ಕರ್ಮಕ್ಕೆ ಅನ್ವಯಿಸಿಕೊಂಡರೆ ಕರ್ಮಯೋಗವಾಯಿತು; ತಿಳಿವಳಿಕೆಗೆ ಹೊಂದಿಸಿಕೊಂಡರೆ ಜ್ಞಾನಯೋಗ; ಭಾವದ ಚೌಕಟ್ಟಿನಲ್ಲಿ ಬಂದರೆ ಭಕ್ತಿಯೋಗ. ಆದರೆ ಇವನ್ನು ಬೇರೆಬೇರೆಯಾಗಿ ಕಾಣುವುದು ಗೀತೆಯ ಧೋರಣೆಯಲ್ಲ. ಅದರದ್ದು ಸಮಗ್ರವಾದ ದೃಷ್ಟಿ. ಎಲ್ಲರಿಗೂ ಎಲ್ಲಕಾಲಕ್ಕೂ ನೆರವಾಗಬಲ್ಲ ಬೆಳಕು ಹರಿದುಬಂದಿರುವುದು ಇದರಿಂದಲೇ.

ನನ್ನ ಮಾನ್ಯ ಮಿತ್ರರಾದ ಶ್ರೀ ವೆಂಕಟೇಶ ಬಾಬು ಅವರ ತೀರ್ಥರೂಪರಾದ ಶ್ರೀ ಸುಬ್ಬರಾಜು ಅವರು ಸುಸಂಸ್ಕೃತರಾದ, ಸಂಪನ್ನರಾದ ಸಜ್ಜನ; ಅಧ್ಯಾತ್ಮದಲ್ಲಿ ಆಸಕ್ತರು; ಸಮುದಾಯದ ಹಿತಕ್ಕೆಂದು ಶ್ರಮಿಸುತ್ತಿರುವವರು. ಅವರಿಗೆ ಎಪ್ಪತ್ತು ವರ್ಷಗಳು ತುಂಬುವ ಸುಸಂದರ್ಭದಲ್ಲಿ ಅವರಿಗೆ ಪ್ರಿಯವಾದ ವಿಚಾರವನ್ನು ಕುರಿತಂತೆ ಬರಹವೊಂದನ್ನು ಹೊರತರುವ ಬಯಕೆಯನ್ನು ಶ್ರೀ ಬಾಬು ನನ್ನೆದುರು ಇರಿಸಿದಾಗ, ಪ್ರಸ್ತುತ ಪುಸ್ತಕವನ್ನು ಸೂಚಿಸಿದೆ. ಅವರ ಹಿರಿಯರಿಗೆ ಭಗವದ್ಗೀತೆ ತುಂಬ ಪ್ರಿಯವಾದ ಗ್ರಂಥ. ಏಳುನೂರು ಶ್ಲೋಕಗಳಿರುವ ಅದರಲ್ಲಿ ಅವರ ವಯೋಮಾನದ ಎಣಿಕೆಯನ್ನನುಸರಿಸಿ ಎಪ್ಪತ್ತು ಶ್ಲೋಕಗಳನ್ನು, ಯಾವುದಾದರೊಂದು ನಿರ್ದಿಷ್ಟ ಪ್ರಮೇಯವನ್ನು ಹಿಡಿದು, ಆರಿಸಿಕೊಂಡು ಸರಳ ಭಾವಾನುವಾದ, ಲಘುವಿವರಣೆಯೊಂದಿಗೆ ಬರೆದುಕೊಡಲು ಒಪ್ಪಿಕೊಂಡೆ. ಒಪ್ಪಿಕೊಂಡದ್ದು ಸಂತೋಷದಿಂದ. ಶ್ರೀ ಬಾಬು ನನಗೆ ತುಂಬ ಬೇಕಾದವರು; ಅವರ ಹಿರಿಯರನ್ನು ಕುರಿತಂತೆ ನನಗೆ ತುಂಬ ಆದರ, ಗೌರವ. ಮತ್ತೆ, ಗೀತೆಯೆಂದರೆ ನನ್ನ ಬಾಳ ಬೆಳಕೇ! ಸಂತೋಷಕ್ಕೆ ಇನ್ನೇನು ಕಾರಣ ಬೇಕು?

ನಾನು ಆರಿಸಿಕೊಂಡ ವಿಚಾರ ಸಾಮಾನ್ಯವಾಗಿ ಎಲ್ಲರೂ ಚೆನ್ನಾಗಿ, ಒಪ್ಪಾಗಿ, ಓರಣವಾಗಿ ಬದುಕಲು ಬೇಕಾದ ಬೆಳಕು. ಗೀತೆಯುದ್ದಕ್ಕೂ ಬರುವುದು ಇದೇ ವಿಚಾರವಾದರೂ, ಕೆಲವೊಂದು ವಿವರಗಳು ಸರಳವಾಗಿ ಮೌಲಿಕವಾಗಿ ಬಂದಿವೆ. ಅವನ್ನು ಇಲ್ಲಿ ಸಂಗ್ರಹ ಮಾಡಿದ್ದೇನೆ. ನಿರೂಪಣೆಯಲ್ಲಿ ಏಕತಾನತೆ ಇರುವಂತೆ, ಅನುಕ್ರಮವಾಗಿ ಜೋಡಿಸಿದ್ದೇನೆ.

ಇದನ್ನು ಶ್ರೀ ಸುಬ್ಬರಾಜು ಅವರ ಎಪ್ಪತ್ತನೆಯ ಹುಟ್ಟು ಹಬ್ಬದ ನೆನಪಿಗಾಗಿ ಸಮರ್ಪಿಸಿ, ಸರ್ವಾಂತರ್ಯಾಮಿಯಾದ ಭಗವಂತನು ಅವರಿಗೆ ದೀರ್ಘಾಯುಸ್ಸನ್ನೂ, ಸಕಲ ಸಂಪತ್ತನ್ನೂ, ಸಂತೋಷವನ್ನೂ ಸಮೃದ್ಧಿಯಾಗಿ ಕರುಣಿಸಲೆಂದು ಮನಸಾರೆ ಬೇಡಿಕೊಳ್ಳುತ್ತೇನೆ.

ಸಾ. ಕೃ. ರಾಮಚಂದ್ರರಾವ್



ಕಲ್ಯಾಣಾದ್ಭುತಗಾತ್ರಾಯ । ಕಾಮಿತಾರ್ಥ ಪ್ರಧಾಯಿನೇ ।
ಶ್ರೀಮದ್ವೇಂಕಟನಾಥಾಯ । ಶ್ರೀನಿವಾಸಾಯ ಮಂಗಲಂ ॥

(ಕಲ್ಯಾಣಕರವಾದ ಅದ್ಭುತ ಶರೀರವುಳ್ಳವನಿಗೆ, ಇಷ್ಟಾರ್ಥಗಳನ್ನು ದಾನಮಾಡುವವನಿಗೆ
ಶ್ರೀ ಮದ್ವೇಂಕಟನಾಥನಿಗೆ, ಶ್ರೀನಿವಾಸನಿಗೆ ಮಂಗಲವು)

ಶ್ರೀ ಸಂಜೀವರಾಯ ಸ್ವಾಮಿ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿಯವರು

1

ಮಾಡುವ ಕೆಲಸಕ್ಕೆ ಹೊಣೆ ಯಾರು?

'ಮನುಷ್ಯನಾದವನು ಕೆಲಸಗಳಲ್ಲಿ ತೊಡಗಿರುತ್ತಲೆ ನೂರು ವರ್ಷ ಕಾಲ ಬದುಕಲು ಬಯಸಬೇಕು' 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'. ಇದು ಈಶಾವಾಸ್ಯ ಉಪನಿಷತ್ತಿನದೊಂದು ಮಾತು. ಭಗವದ್ಗೀತೆಯೆಲ್ಲ ಈ ಮಾತಿನ ವ್ಯಾಖ್ಯಾನವೆ ಎಂದರೂ ನಡೆದೀತು. ಆದರೆ ಈ ಮಾತಿನ ಇಂಗಿತವೇನು? ಕೆಲಸಮಾಡದೆ ಯಾರಿರುತ್ತಾರೆ? ಕೆಲಸವೆಂದರೆ ದೊಡ್ಡದೊಂದು ಉದ್ದಿಮೆಯನ್ನು ನಡೆಸುವುದು, ದೇಶವನ್ನಾಳುವುದು ಇಂಥ ಕೆಲಸವೇ ಕೆಲಸವೆ? ಕಣ್ಣಿನ ರೆಪ್ಪೆ ಮಿಟುಕಿಸುವುದೂ ಕೆಲಸವಲ್ಲವೆ? ಕೈಕಾಲುಗಳನ್ನಾಡಿಸುವುದು, ಮಾತನಾಡುವುದು, ಊಟಮಾಡುವುದು, ಮಲಗುವುದು ಇವೆಲ್ಲ ಕೆಲಸಗಳಲ್ಲವೆ? ಉಪನಿಷತ್ತಾಗಲಿ, ಗೀತೆಯಾಗಲಿ 'ಕರ್ಮ'ವೆನ್ನುವಾಗ ಇಂಥ ನಿಸರ್ಗಸಿದ್ಧವಾದ ಕ್ರಿಯೆಗಳನ್ನು ಸೂಚಿಸುವುದಿಲ್ಲ. ಮನಸ್ಸಿಟ್ಟು, ಪ್ರಯತ್ನಪೂರ್ವಕವಾಗಿ, ಶ್ರಮವಹಿಸಿ ಮಾಡುವ ಕ್ರಿಯೆ 'ಕರ್ಮ'ವೆನಿಸಿಕೊಳ್ಳುವುದು. ಯಾವುದನ್ನು ನಾವು ಮಾಡಬಹುದೋ, ಮಾಡದೆ ಬಿಡಬಹುದೋ, ಒಂದಲ್ಲ ಇನ್ನೊಂದು ರೀತಿಯಿಂದ ಮಾಡಬಹುದೋ ಅದು ಕರ್ಮ. ಯಾವುದಾದರೊಂದು ಪ್ರಯೋಜನವನ್ನು ಉದ್ದೇಶಿಸಿ ಮಾಡುವುದು ಕಾಮ್ಯಕರ್ಮ; ವಿಹಿತವಾದುದೆಂದು, ಮಾಡದಿದ್ದರೆ ದೋಷವಾದೀತೆಂದು, ಮಾಡುವುದು ನಿತ್ಯಕರ್ಮ. ಮಾಡಬಾರದ್ದನ್ನು ಮಾಡುವುದು ನಿಷಿದ್ಧಕರ್ಮ. ಎಲ್ಲವೂ ದಿಟವಾಗಿ ಕರ್ಮಗಳೇ. ಎಲ್ಲ ಮನುಷ್ಯರೂ ಇಂಥವನ್ನು ಮಾಡುತ್ತಲೆ ಇರುತ್ತಾರೆ. ಆದರೆ ಪರಿಭಾಷೆಯಾಗಿ, ಮಾಡಬೇಕಾದದ್ದನ್ನು ಮಾಡುವುದು ಕರ್ಮ; ಅದನ್ನು ಮಾಡದೆ ಬಿಡುವುದು ಅಕರ್ಮ; ಮಾಡಬಾರದ್ದನ್ನು ಮಾಡುವುದು ವಿಕರ್ಮ. ಇದು ಗೀತೆಯಲ್ಲಿ ಬರುವ ವಿಚಾರ.

(1)

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಂ ॥

.... *(18,13)*

ಮಾಡಬೇಕಾದ ಕೆಲಸವನ್ನು ಕರ್ಮವೆಂದೆವಲ್ಲ? ಇಂಥ ಒಂದು ಕೆಲಸ, ಅದು ಯಾವುದೇ ಆಗಲಿ, ಕೈಗೊಡಬೇಕಾದರೆ ಐದು ವಿವರಗಳು ಹಿನ್ನೆಲೆಯಲ್ಲಿರಬೇಕು. ಇದನ್ನು ಗೀತೆಯ ಮೂಲನೆಲೆಯಲ್ಲಿರುವ ಸಾಂಖ್ಯದರ್ಶನವೂ ವೇದಾಂತವೂ ತಿಳಿಯಹೇಳಿವೆ. ಯೋಗಶಾಸ್ತ್ರವೆನಿಸಿದ ಗೀತೆಯು ಸಾಂಖ್ಯಸಿದ್ಧಾಂತದ ಚೌಕಟ್ಟಿನಲ್ಲಿಯೆ ಮೈದಳೆದು, ವೇದಾಂತವನ್ನೂ ಒಳಗೊಂಡಿದೆ. ವೇದಾಂತದಂತೆ ಸಾಂಖ್ಯವೂ ಉಪನಿಷತ್ತಿನಿಂದಲೇ ಹೊರಹೊಮ್ಮಿದ್ದು. ಗೀತೆಯು ಉಪನಿಷತ್ತಿನ ಸಾರಸಂಗ್ರಹವೇ ತಾನೆ? ಸಾಂಖ್ಯದರ್ಶನದಲ್ಲಿ ಪ್ರಕೃತಿ, ಪುರುಷ ಎನ್ನುವ ವಿಭಾಗ; ವೇದಾಂತದಲ್ಲಿ ಮಾಯೆ, ಈಶ್ವರ ಎನ್ನುವ ವಿಭಾಗ. ಎರಡೂ ಕೂಡಿಕೊಂಡಾಗಲೆ ಕೆಲಸ; ಕರ್ಮ. ಯಾವುದಾದರೂ ಗುರಿಯಿಲ್ಲದಿದ್ದರೆ ಕೆಲಸ ಹೇಗೆ? ಗುರಿಯನ್ನು ಮುಟ್ಟಿದಾಗ ಕೆಲಸ ಕೈಗೂಡಿತೆಂದರ್ಥ. ಅದನ್ನೇ ಸಿದ್ಧಿಯೆನ್ನುವುದು. ಅದಕ್ಕೆ ಸಾಧನವಾಗುವುದು ಕರ್ಮ. ಹೀಗೆ ಕರ್ಮಸಿದ್ಧಿಯಾಗಬೇಕೆಂದರೆ ಐದು ವಿವರಗಳು ಒಟ್ಟುಗೂಡಬೇಕು. ಅವು ಯಾವುವೆಂಬುದನ್ನು ಮುಂದಿನ ಶ್ಲೋಕ ಹೇಳುತ್ತದೆ.

(2)

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ।
ವಿವಿಧಾಶ್ಚ ಪೃಥಕ್ ಚೇಷ್ಟಾ ದೈವಂ ಚೈವಾತ್ರ ಪಂಚಮಂ॥

.... *(18,14)*

ಯಾವ ಕರ್ಮದ ಸಿದ್ಧಿಯಾಗಬೇಕಾದರೂ (ಎಂದರೆ ಹಿಡಿದ ಯಾವುದೇ ಕೆಲಸ ಕೈಗೂಡಲು) ಒಟ್ಟುಗೂಡಬೇಕಾದ ಐದು ವಿವರಗಳಲ್ಲಿ ಮೊದಲನೆಯದು ಅಧಿಷ್ಠಾನ, ಎಂದರೆ ಕೆಲಸ ಮಾಡಲು ನೆಲೆ, ಆಸರೆ. ಶರೀರವಿಲ್ಲದೆ ಕೆಲಸಮಾಡಲು ಆಗುತ್ತದೆಯೆ? ಶರೀರವು ಅಧಿಷ್ಠಾನ. ಸುಖದುಃಖಗಳನ್ನು ಅನುಭವಿಸುವುದಕ್ಕೆ ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳಿಗೆ, ಬಂಧ-ಮೋಕ್ಷಗಳಿಗೆ ಆಸರೆಯಾಗಿರುವುದು

ಶರೀರವೇ. ನೆಲವಿಲ್ಲದೆ ಶರೀರವಿರುವುದು ಹೇಗೆ? ಕೆಲಸ ಸಾಗುವುದು ಹೇಗೆ? ಭೂಮಿಯೂ ಅಧಿಷ್ಠಾನ, ಅವ್ಯಕ್ತವಾದ ಪ್ರಕೃತಿಯೂ ಅಧಿಷ್ಠಾನವೇ.

ಎರಡನೆಯದು ಕೆಲಸ ಮಾಡುವವನು, ಕರ್ತಾ ಎಂದರೆ ಜೀವ. ಕೆಲಸದ ಉದ್ದೇಶವಿರುವುದು, ಪ್ರಯೋಜನವಿರುವುದು ಜೀವನಿಗೆ. ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನೆಲ್ಲ ಹೊಂದಿರುವವನು ಜೀವನೆನಿಸಿಕೊಳ್ಳುತ್ತಾನೆ. ದೇಹವೆಂಬ ಬಂಡಿಯ ಒಡೆಯ ಅವನು.

ಮೂರನೆಯದು ನಮ್ಮ ಇಂದ್ರಿಯಗಳು; ಕರಣಗಳು. ಕೆಲಸವನ್ನು ಆಗಮಾಡಿಸುವುದು ಇದು. ಕರ್ಮಕ್ಕೆ ಸಾಧನರೂಪವಾದುದು. ಕೆಲಸ ಮಾಡುವ ಮೊದಲು ತಿಳಿವಳಿಕೆ ಇರಬೇಡವೆ? ತಿಳಿವಳಿಕೆ ಒಂದೇ ಆದರೂ ಅದು ನಮಗೆ ಒದಗುವುದು ಐದು ಬಗೆಗಳಲ್ಲಿ. ನೋಡಲು ಕಣ್ಣು, ಕೇಳಲು ಕಿವಿ, ಮೂಸಿ ನೋಡಲು ಮೂಗು, ರುಚಿ ಸವಿಯಲು ನಾಲಗೆ, ಮುಟ್ಟಿದ್ದನ್ನರಿತುಕೊಳ್ಳಲು ಚರ್ಮ ಇವೆಲ್ಲ ಕರಣಗಳು. ಇವನ್ನು ಬುದ್ಧೀಂದ್ರಿಯಗಳೆಂದೂ ಕರೆಯುತ್ತಾರೆ. ಜೀವನ ಮುಖ್ಯವಾದ ವಿವರ ಬುದ್ಧಿಯೆ; ಅದಕ್ಕೆ ಸಾಧನವಾಗುವ, ನೆರವಾಗುವ ಇಂದ್ರಿಯಗಳು ಇವು.

ನಾಲ್ಕನೆಯದು ಕೆಲಸ ಮಾಡಲು ನೇರವಾಗಿ ನೆರವಾಗುವ ಮನಸ್ಸು ಅಥವಾ ಬೇರೆ ಬೇರೆ ಕರ್ಮೇಂದ್ರಿಯಗಳು; ಮಾತನಾಡಲು ಬಾಯಿ, ಹಿಡಿಯಲು ಕೈ, ನಡೆಯಲು ಕಾಲು ಹೀಗೆ. ಇವಿಲ್ಲದಿದ್ದರೆ ಯಾವ ಕೆಲಸವೂ ಸಾಧ್ಯವಿಲ್ಲ. ಇವನ್ನು ಇಲ್ಲಿ ಚೇಷ್ಟೆಯೆಂದು ಕರೆದಿದ್ದಾರೆ; ಸಂಸ್ಕೃತದಲ್ಲಿ 'ಚೇಷ್ಟಾ' ಎಂದರೆ ಕೆಲಸ ಎಂದಷ್ಟೇ ಅರ್ಥ. ಐದು ವಿಧವಾದ ಪ್ರಾಣವಾಯುಗಳು ಮಾಡುವ ಕೆಲಸವೂ ಚೇಷ್ಟೆಯೆ. ಕಂಠದಲ್ಲಿ ಪ್ರಾಣ, ಗುದದಲ್ಲಿ ಅಪಾನ, ಎದೆಯಲ್ಲಿ ಉದಾನ, ನಾಭಿಯಲ್ಲಿ ಸಮಾನ, ಶರೀರದಲ್ಲೆಲ್ಲ ವ್ಯಾನ. ಇವಲ್ಲದೆ ನಾವು ಮನಸ್ಸಿನಿಂದ ಮಾಡುವ ಧ್ಯಾನ ಮೊದಲಾದುವು ಇದರಲ್ಲೇ ಸೇರುತ್ತವೆ. ಕರಣ ಎಂಬುದರಲ್ಲಿ ಇಂದ್ರಿಯಗಳನ್ನೆಲ್ಲ ಸೇರಿಸಿದರೆ, ಚೇಷ್ಟಾ ಎಂದರೆ ಮಾನಸಿಕ ವ್ಯಾಪಾರ ಎಂದಾಗುತ್ತದೆ.

ಐದನೆಯದು ದೈವ. ನಮ್ಮ ಒಡಲಲ್ಲೆ ಎಲ್ಲ ಜೀವರ ಅಂತರ್ಯಾಮಿಯಾಗಿ ನೆಲೆಸಿ, ಎಲ್ಲ ಕರ್ಮಗಳಿಗೂ ಪ್ರೇರಕನೆನಿಸಿದ ಪರಮಾತ್ಮ. ಅವನೇ ಮುಖ್ಯಕಾರಣ. ಅವನಿಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿಯಾಗಲಿ ಅಲುಗಲಾದೀತೆ? ಉಳಿದ ನಾಲ್ಕು ವಿವರಗಳಿಗೂ ಇವನೇ ಆಸರೆ. ದೈವವೆಂದರೆ ಅದೃಷ್ಟವೂ ಹೌದು. ಕಣ್ಣಿಗೆ ಕಾಣದಿದ್ದರೂ, ಸಂಸ್ಕಾರಗಳ ಬಲದಿಂದ, ಆಗಬೇಕಾದುದನ್ನು ಆಗಮಾಡಿಸುವ, ನಿಯಮದಿಂದ ಸದಾ ನಮ್ಮನ್ನು ಆಳುತ್ತಿರುವ ಶಕ್ತಿ. ಇದಕ್ಕೆ ಎದುರಾಗಬಲ್ಲುದು ಯಾವುದೂ ಇರದು.

ಕಾಣಿಸಿಕೊಳ್ಳುತ್ತದೆ. ದಿಟವಾಗಿ ಇದು ಎಲ್ಲೂ ಇರದು. ಇನ್ನು ಮಾಡಬೇಕೆಂದು ಹೊರಡುವ ಕರ್ಮಗಳೂ ಹಾಗೆಯೆ. ಆಯಾ ಜೀವರಿಗೆ ಆಯಾ ಸಂದರ್ಭಗಳಲ್ಲಿ ಪ್ರಸಕ್ತವಾಗುತ್ತವೆ ಅಷ್ಟೆ. ಅವೇನು ಲೋಕಧರ್ಮಗಳಲ್ಲ; ಎಲ್ಲರಿಗೆ ಏಕಪ್ರಕಾರವಾಗಿ ಇರುವುವೂ ಅಲ್ಲ. ಕರ್ಮಕ್ಕೂ ಅದರ ಪ್ರಯೋಜನಕ್ಕೂ ಇರುವ ನಂಟಾಗಲಿ ತತ್ತ್ವವೆನ್ನುವಂತಿಲ್ಲ. ಆತ್ಮನಿಗೆ ಇದು ಏತರ ಗೊಂದಲವೂ ಇಲ್ಲ.

ಆದರೂ ಇವು ಕಾಣುತ್ತಿವೆಯಲ್ಲ? ಕೆಲಸ ಮಾಡುವಾಗ ಕರ್ತೃತ್ವ ಯಾರಿಗಿರುವುದಿಲ್ಲ? ಕರ್ಮದ ಎಣಿಕೆ ಯಾರಿಗಿಲ್ಲ? ಕರ್ಮ-ಫಲಗಳ ನಂಟು ಹುಸಿಯೆ? ಇವೆಲ್ಲ ಇವೆ, ನಿಜ. ಆದರೆ ಇವು ಆತ್ಮನಿಗೆ ಸೇರಿದವಲ್ಲ. ಸ್ವಭಾವಕ್ಕೆ ಸೇರಿದವು. ಸ್ವಭಾವವೆಂದರೆ ಪ್ರಕೃತಿ. ಕೆಲಸಮಾಡುವ ಶರೀರಕ್ಕೆ (ಇಂದ್ರಿಯ-ಮನಸ್ಸುಗಳಿಂದ ಕೂಡಿರುವ ಶರೀರಕ್ಕೆ) ತಾನು ಕೆಲಸ ಮಾಡುತ್ತಿರುವ ಅರಿವು ಇದ್ದೇ ಇರುತ್ತದೆ; ಇರುವುದು ಶರೀರ ಧರ್ಮವಲ್ಲ, ಶರೀರದೊಂದಿಗೆ ಸೇರಿಕೊಂಡ ಮನಸ್ಸಿನ ಧರ್ಮ. ಇದನ್ನೆ ಅಭಿಮಾನವೆನ್ನುವುದು. ಅಭಿಮಾನವಿದ್ದಾಗ ಕರ್ತೃತ್ವವೂ ತೋರಿಕೊಳ್ಳುತ್ತದೆ. ಬೆಂಕಿ ಉರಿಯುವಾಗ ಕಾವು ಇರುವುದಿಲ್ಲವೆ? ಹೀಗೆಯೇ ನಾವು ತೊಡಗುವ ಕೆಲಸಗಳೂ ಪ್ರಕೃತಿಯಿಂದಲೇ ಸಿದ್ಧವಾದುವು. ಕರ್ಮ-ಪ್ರಯೋಜನಗಳ ಎಣಿಕೆಯೂ ಅಷ್ಟೇ.

ಎಂದರೆ, ಇವನ್ನು ತತ್ತ್ವಗಳು ಎನ್ನುವಂತಿಲ್ಲ. ಸ್ವತಂತ್ರವಾಗಿ ಇವು ಯಾವುವೂ ಇರಲಾರವು. ಶರೀರ-ಇಂದ್ರಿಯಗಳು-ಮನಸ್ಸು ಇದ್ದರೆ ಕರ್ತೃತ್ವ, ಕರ್ಮಗಳು, ಕರ್ಮಫಲಸಂಯೋಗ. ಶರೀರಾಭಿಮಾನವಿದ್ದಾಗ ಮಾತ್ರ ಆತ್ಮನಿಗೆ ಇವು ಹೊಂದಿಕೊಳ್ಳುತ್ತವೆ. ನಿದ್ರೆಯಲ್ಲಿ ಆತ್ಮನಿದ್ದಾನೆ; ಆದರೆ ಕರ್ತೃತ್ವವೂ ಇಲ್ಲ. ಕರ್ಮವೂ ಇಲ್ಲ, ಕರ್ಮಫಲ ಸಂಯೋಗವೂ ಇಲ್ಲ; ಏಕೆಂದರೆ ಅಲ್ಲಿ ಶರೀರಾಭಿಮಾನವಿರದು. ಎಲ್ಲರ ಆತ್ಮವೂ ಒಂದೇ; ಆದರೆ ಎಲ್ಲರ ಕರ್ತೃತ್ವವಾಗಲಿ, ಕರ್ಮಗಳಾಗಲಿ, ಕರ್ಮಫಲಸಂಯೋಗವಾಗಲಿ ಸಮಾನವಾಗಿರುತ್ತದೆಯೆ? ಅವರವರ ಸ್ವಭಾವದಂತೆ ಇವು ತೋರಿಕೊಳ್ಳುತ್ತವೆ.

2

ಮೂರು ಗುಣಗಳು ಮಾಡುವ ಕೆಲಸ

ಹಿಂದೆ ಹೇಳಿದ ಸ್ವಭಾವ (ಪ್ರಕೃತಿ) ಎಂದರೆ ಮೂರು ಗುಣಗಳ ಒಕ್ಕೂಟ. ಸತ್ತ್ವ (ಇರವು, ಬೆಳಕು, ತಿಳಿವಳಿಕೆ, ಒಳ್ಳೆಯತನ), ರಜಸ್ಸು (ಕೆಲಸ, ಉತ್ಸಾಹ, ಸುಖದುಃಖ, ಭಾವ) ಮತ್ತು ತಮಸ್ಸು (ಕತ್ತಲೆ, ಆಲಸಿಕೆ, ಅಜ್ಞಾನ, ತಡೆ, ಕೆಟ್ಟತನ) ಇವು ಮೂರು ಗುಣಗಳು. ಮೂಲಪ್ರಕೃತಿಯಲ್ಲಿ ಇವು ಮೂರೂ ಸಮವಾಗಿರುತ್ತವೆ (ಗುಣಸಾಮ್ಯ); ವ್ಯವಹಾರದಲ್ಲಿ ಪ್ರಕೃತಿಯು ಗುಣ ವೈಷಮ್ಯವನ್ನು ಕಾಣಿಸುತ್ತದೆ. ಒಂದು ಇನ್ನೆರಡನ್ನು ಹಿಂದಕ್ಕೆ ತಳ್ಳಿ ತಾನು ಮುಂದೆ ಬರುವುದು ಮೇಲೇಳುವುದು ನಡೆಯುತ್ತಲೆ ಇರುತ್ತದೆ. ರಜಸ್ಸು ಮುಂದಾದರೆ ಪ್ರವೃತ್ತಿ, ತಮಸ್ಸು ಮುಂದಾದರೆ ನಿವೃತ್ತಿ ಅಥವಾ ಸ್ಥಿತಿ, ಇದ್ದಂತೆಯೆ ಇರುವುದು. ಎರಡರ ಹಿನ್ನೆಲೆಯಲ್ಲೂ ಸತ್ತ್ವ ಇರಲೇಬೇಕು. ಆದರೆ ಅದನ್ನು ಅಡಗಿಸಿ ಇನ್ನೆರಡು ಗುಣಗಳು ತೋರಿಕೊಳ್ಳುತ್ತವೆ.

ನಮ್ಮ ಶರೀರ ತಮಸ್ಸು, ಇಂದ್ರಿಯಗಳು ರಜಸ್ಸು, ಮನಸ್ಸು ಸತ್ತ್ವ. ಈ ಗುಣಗಳನ್ನು ದಾಟಿದವನು ಆತ್ಮ, ಪುರುಷ. ಗುಣಗಳ ಅಧಿಕಾರವಿರುವುದು ಪ್ರಕೃತಿಯಲ್ಲೇ; ಪುರುಷ ಗುಣಾತೀತ. ಆದರೆ ದೇಹಾಭಿಮಾನವಿದ್ದು ದೇಹಿಯೆನಿಸಿಕೊಂಡ ಆತ್ಮನಿಗೆ ಗುಣಗಳ ನಂಟು ಸಹಜವಲ್ಲದಿದ್ದರೂ ಆಗಂತುಕವಾಗಿ ಕೂಡಿಕೊಳ್ಳುತ್ತದೆ. ಆಗ ಅವನ ಆಹಾರ, ಶ್ರದ್ಧೆ, ಕರ್ಮ, ದಾನ, ಯಜ್ಞ, ತಪಸ್ಸು, ಜ್ಞಾನ, ಕರ್ತೃತ್ವ, ಸುಖ ಎಲ್ಲವೂ ಮೂರು ಗುಣಗಳಿಗೆ ಅನುಸಾರವಾಗಿ ಬೇರ್ಪಡುತ್ತವೆ. ಭಗವದ್ಗೀತೆಯ ಕಡೆಯ ಎರಡು ಅಧ್ಯಾಯಗಳಲ್ಲಿ ಈ ವಿಚಾರ ಬರುತ್ತದೆ.

ರಜಸ್ಸು ಹೆಚ್ಚಾಗಿದ್ದರೆ ವ್ಯಕ್ತಿಯು ಆತಂಕಗೊಂಡು ಅಸ್ಥಿರನಾಗಿರುತ್ತಾನೆ; ಅವನ ಮನಸ್ಸು ಒಂದೆಡೆ ನಿಲ್ಲದೆ ಹರಿದಾಡುತ್ತಲೆ ಇರುತ್ತದೆ; ಚಪಲಚಿತ್ತ. ಉತ್ಸಾಹವಿದ್ದರೂ ನೆಮ್ಮದಿಯೆಂಬುದು ಎಂದೂ ಇರದು. ಇದು ಕ್ಷಿಪ್ತವೆನಿಸಿಕೊಳ್ಳುವ ಚಿತ್ತವೃತ್ತಿ. ತಮಸ್ಸು ಹೆಚ್ಚಾಗಿದ್ದರೆ ಮೂಢ. ತಿಳಿವಳಿಕೆ ಇರುವುದಿಲ್ಲ; ಮೊಂಡಾಟ ಇರುತ್ತದೆ. ಮನಸ್ಸಿನಲ್ಲಿ ತಳಮಳ, ಕಳವಳ. ವಿವೇಕವಂತೂ ಕನಸು. ಇವೆರಡು ಚಿತ್ತವೃತ್ತಿಗಳಿದ್ದವರಿಗೆ ಅಧ್ಯಾತ್ಮದಲ್ಲಿ ಒಲವೂ ಇರದು, ಯೋಗ ಅವರಿಗೆ ಸಾಧ್ಯವೂ ಇಲ್ಲ. ರಜಸ್ಸು-ತಮಸ್ಸು ಆಗಾಗ ತಮ್ಮತಮ್ಮ

ಮೇಲಾಟ ಮಾಡುತ್ತಿರುವುದೂ ಉಂಟು. ಇದು ವಿಕ್ಷಿಪ್ತವೆಂಬ ಸ್ಥಿತಿ. ಇಂಥವರಿಗೆ ಒಮ್ಮೊಮ್ಮೆ ಉತ್ಸಾಹ, ಒಮ್ಮೊಮ್ಮೆ ಆಲಸ್ಯ. ಚಪಲಚಿತ್ತನೇ ಆದರೂ ಆಗಾಗ ಅಲಸಿಕೆ. ರಜಸ್ಸಿನ ವೇಗವನ್ನು ತಡೆಯುವಂತೆ ತಮಸ್ಸು; ತಮಸ್ಸಿನ ಮೋಹವನ್ನು ಮರೆಮಾಡುವಂತೆ ರಜಸ್ಸು. ಯೋಗಕ್ಕೆ ಅಧಿಕಾರಿಗಳು ಇವರು. ಅವರಿಗೆ ಎಂದೋ ಒಮ್ಮೆ ತೋರಿಕೊಂಡ ಅಧ್ಯಾತ್ಮವನ್ನು ಕುದುರಿಸಿಕೊಂಡರೆ ಸತ್ತ್ವದ ಕಡೆಗೆ ಸಾಗುವುದು ಸಾಧ್ಯ; ಯಾವಾಗಲೋ ಯೋಗದ ದಾರಿಯನ್ನು ಹಿಡಿದರೂ ಅವರಿಗೆ ಅನುಕೂಲವಿದ್ದೇ ಇರುತ್ತದೆ.

ಏಕಾಗ್ರ ಚಿತ್ತವಿರುವವರಲ್ಲಿ ಸತ್ತ್ವಗುಣ ಬಲವಾಗಿರುತ್ತದೆ; ರಜಸ್ಸು, ತಮಸ್ಸುಗಳನ್ನು ಹಿಮ್ಮೆಟ್ಟಿಸಿ ದೋಷಗಳನ್ನು ತೊಡೆದುಹಾಕಿ, ಪ್ರಸಾದ (ಮನಸ್ಸಿನ ನೆಮ್ಮದಿ)ವನ್ನು ಪಡೆದುಕೊಳ್ಳುತ್ತಾರೆ. ಹೀಗಾದರೂ ಪ್ರವೃತ್ತಿಯಿರುತ್ತದೆ, ವ್ಯವಹಾರದಲ್ಲಿ ತೊಡಗಿರುತ್ತಾರೆ. ವಿರುದ್ಧವೆಂಬ ಚಿತ್ತವೃತ್ತಿಯಲ್ಲಾದರೋ ಸತ್ತ್ವಗುಣವೂ ಬಲಹೀನವಾಗಿ, ಯಾವ ಪ್ರವೃತ್ತಿಗೂ ಅವಕಾಶವಿರದು; ಮೂರೂ ಗುಣಗಳು ನಿವೃತ್ತವಾಗಿಬಿಡುತ್ತವೆ. ಇದು ಗುಣಾತೀತಸ್ಥಿತಿ; ಇದನ್ನೆ ಸಮಾಧಿಯೆನ್ನಬಹುದು. ಯೋಗದ ಗುರಿ ಇದೇ.

(6)

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ॥

(14,5)

ಮನುಷ್ಯರು ತಮಗೆ ಬಂಧವೆಂಬ ಅರಿವಾಗಿ ದುಃಖಪಡುತ್ತಾರೆ; ಇದರಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಾರೆ, ಸಾಧನೆಗಳನ್ನು ಕೈಗೊಳ್ಳುತ್ತಾರೆ. ಅಂಥವರಿಗೆ ಬಂಧನದ ಪ್ರಕಾರ ಏನು, ಗುಣಗಳು ಹೇಗೆ ಬಂಧಿಸುತ್ತವೆ ಎಂಬುದು ತಿಳಿದಿರಬೇಕು. ಹಾಗೆ ತಿಳಿಯದೆ ಬಿಡುಗಡೆ ಹೇಗೆ ಸಾಧ್ಯವಾದೀತು?

ಸೃಷ್ಟಿಯ ಸಮಯದಲ್ಲೇ ಚಿತ್‌ಪ್ರಕೃತಿಯಿಂದ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಬೇರ್ಪಟ್ಟು ಹೊರಹೊಮ್ಮಿದುವು. ಈ ಚಿತ್‌ಪ್ರಕೃತಿಯ ಮೂಲಸ್ಥಿತಿಯಲ್ಲಿ ಗುಣಸಾಮ್ಯ; ಮೂರು ಗುಣಗಳು ಸಮನಾಗಿ ಸೇರಿಕೊಂಡು ಒಂದಾಗಿರುತ್ತವೆ. ಬೇರೆ ಬೇರೆಯಾಗಿರುವುದಿಲ್ಲ. ಆದರೆ ಬೇರ್ಪಡುವುದೇ, ಸೆಣಸಾಡುವುದೇ ಗುಣಗಳ ಸ್ವಭಾವ. ಇದನ್ನು ಗುಣವೈಷಮ್ಯವೆನ್ನುತ್ತಾರೆ. ಇದರಿಂದಲೇ ಮಹತ್ತು, ಅಹಂಕಾರ, ತನ್ಮಾತ್ರಗಳು, ಸ್ಥೂಲಭೂತಗಳು ಎಲ್ಲವೂ ಸೃಷ್ಟಿಯ ಕ್ರಮದಲ್ಲಿ ಕಾಣಿಸಿಕೊಳ್ಳುತ್ತವೆ. ಇವೆಲ್ಲ ವಿಕಾರಗಳೆನಿಸಿಕೊಳ್ಳುತ್ತವೆ; ಪ್ರಕೃತಿಯ ಆಸರೆಯಲ್ಲಿಯೇ ಈ ವಿಕಾರಗಳು ಮೈದಳೆಯುವುವು. ವಿಕಾರಗಳು ಗುಣಗಳ ಮೂಲಕವಾಗಿಯೇ.

ಪುರುಷನಲ್ಲಿ (ಎಂದರೆ ಆತ್ಮನಲ್ಲಿ) ಈ ಬಗೆಯ ವಿಕಾರಗಳಿರವು; ಪ್ರಕೃತಿಯಿಂದ ಬೇರೆಯಾದ ತತ್ತ್ವ ತಾನೆ ಅದು? ಗುಣಗಳ ಸಾಮ್ಯವಾಗಲಿ ವೈಷಮ್ಯವಾಗಲಿ ಪ್ರಕೃತಿಯಲ್ಲಿಯೇ. ದೇಹ, ಇಂದ್ರಿಯ, ಮನಸ್ಸು, ಇವೆಲ್ಲ ಪ್ರಕೃತಿಯ ಗುಣವೈಷಮ್ಯದಿಂದ ಉಂಟಾದುವು. ದೇಹದಲ್ಲಿ ತಮಸ್ಸಿನ ಅಂಶ ಹೆಚ್ಚು, ಇಂದ್ರಿಯಗಳಲ್ಲಿ ರಜಸ್ಸಿನದು; ಮನಸ್ಸಿನಲ್ಲಿ ಸತ್ತ್ವದ್ದು. ದೇಹವನ್ನು ಹೊಂದಿರುವ ಆತ್ಮನನ್ನು ದೇಹಿಯೆನ್ನುತ್ತಾರೆ. ಆತ್ಮನಿಗೆ ಸ್ವರೂಪದಲ್ಲಿ ಏನೊಂದೂ ಗುಣವಿಕಾರವಿಲ್ಲದಿರುವುದರಿಂದ ಅವನು 'ಅವ್ಯಯ' (ನಿರ್ವಿಕಾರ). ಆದರೆ ದೇಹಿಯೆಂದಾದಾಗ ದೇಹಾಭಿಮಾನ ಸ್ವಭಾವಸಿದ್ಧವಾಗಿ ಅವನಿಗೆ ಬಂದೊದಗುತ್ತದೆ; ಪ್ರಕೃತಿಯ ಸಂಸರ್ಗದಿಂದ ತೋರಿಕೊಂಡದ್ದು ಸ್ವಭಾವ.

ದೇಹಾಭಿಮಾನವುಳ್ಳವನಿಗೆ ಮೂರು ಗುಣಗಳ ನಂಟು ಎಡೆಬಿಡದೆ ತಾಕಿಕೊಳ್ಳುತ್ತವೆ. ಇದನ್ನೆ ಬಂಧನವೆನ್ನುವುದು. ಗುಣಗಳು ತಮ್ಮ ತಮ್ಮ ಕೆಲಸಗಳಿಂದ ದೇಹಿಗೆ ಸುಖ, ದುಃಖ, ಮೋಹಗಳನ್ನು ತರುತ್ತವೆ. ಸತ್ತ್ವದ ಮೇಲಾಟವಿದ್ದಾಗ ಸುಖ, ರಜಸ್ಸಿನ

ಏರಾಟವಿದ್ದಾಗ ದುಃಖ, ತಮಸ್ಸಿನ ಹಿಡಿತವಿದ್ದಾಗ ಮೋಹ. ಗುಣಗಳು ಕೆಲಸಮಾಡುವುದು ದೇಹ, ಇಂದ್ರಿಯ, ಮನಸ್ಸುಗಳಲ್ಲೇ.

ಮೇಲಿನ ಶ್ಲೋಕದಲ್ಲಿ 'ದೇಹದಲ್ಲಿ (ದೇಹೇ) ದೇಹಾಭಿಮಾನಿಯಾದವನನ್ನು (ದೇಹಿನಂ) ಈ ಗುಣಗಳು ಕಟ್ಟಿ ಹಾಕುತ್ತವೆ (ನಿಬಧ್ನಂತಿ)' ಎನ್ನುವಾಗ ದೇಹವೆಂಬ ಮಾತಿನಲ್ಲಿ ದೇಹ, ಇಂದ್ರಿಯ, ಮನಸ್ಸು ಮೂರೂ ಸೇರುತ್ತವೆ. ಆತ್ಮನನ್ನು (ದೇಹಾಭಿಮಾನವಿಲ್ಲದವನನ್ನು) ಅವು ಕಟ್ಟಿಹಾಕಲಾರವು ಎನ್ನುವ ಧ್ವನಿಯಿದೆ.

(7)

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಮನಾಮಯಂ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ॥

(14,6)

ಈ ಮೂರು ಗುಣಗಳಲ್ಲಿ ಮೊದಲನೆಯದು ಸತ್ತ್ವ. ಇತರ ಎರಡು ಗುಣಗಳಿಗೂ ಇದು ಆಸರೆಯಾಗಿ ಇದ್ದೇ ಇರಬೇಕು; ಮನುಷ್ಯನು ಕೈಗೊಳ್ಳುವ ಯಾವ ಕೆಲಸದಲ್ಲಾದರೂ ಇದು ಸ್ವಲ್ಪಮಟ್ಟಿಗಾದರೂ ಇರುತ್ತದೆ. ಪ್ರವೃತ್ತಿಗೆ ಇದೇ ಕಾರಣವೆಂದೂ ಹೇಳಬಹುದು. ಆದ್ದರಿಂದಲೇ ಇದನ್ನು ಮೊದಲಲ್ಲೆ ಎಣಿಸುವುದು. ಅಷ್ಟು ಮಾತ್ರವಲ್ಲ. ಗುಣಬಂಧನದಿಂದ ಬಿಡುಗಡೆಯಾಗಬೇಕಾದರೂ ಸತ್ತ್ವವನ್ನೇ ಹಿಡಿಯಬೇಕು, ಅದನ್ನು ಬಲಪಡಿಸಬೇಕು. ಅದರ ನೆರವನ್ನು ಪಡೆದುಕೊಳ್ಳಬೇಕು. ಪುರುಷನಿಗೆ (ಆತ್ಮನಿಗೆ, ದೇಹಾಭಿಮಾನಿಗೆ) ತುಂಬ ಹತ್ತಿರದಲ್ಲಿರುವ ಪ್ರಕೃತಿಯ ಅಂಶ ಇದು.

ಸತ್ತ್ವದ ಕೆಲಸ ತಿಳಿವಳಿಕೆ; ಇದ್ದುದನ್ನು ಇದ್ದಂತೆಯೆ ತಿಳಿಸಿಕೊಡುವುದು. ಇದರಲ್ಲಿ ತಮಸ್ಸಿನ ತೆರೆಯಿಲ್ಲದಿದ್ದಾಗ, ಅದು ವಿವೇಕವನ್ನು ಬೆಳಗುತ್ತದೆ; ರಜಸ್ಸಿನ ವೇಗವಿಲ್ಲದಿದ್ದಾಗ ನೆಮ್ಮದಿಯಿಂದಿರುತ್ತದೆ. ಇವೆರಡೂ ಗುಣಗಳ ನಂಟಿಲ್ಲದಿದ್ದಾಗ, ತಿಳಿಯಾಗಿದ್ದು ಪುರುಷನ ಪ್ರತಿಬಿಂಬವನ್ನು ತಳೆದುಕೊಳ್ಳುತ್ತದೆ. ಹೀಗಿರುವುದರಿಂದಲೇ ಅದು ಯೋಗಕ್ಕೆ ನೆರವಾಗಬಲ್ಲುದು. ಆತ್ಮಾವಲೋಕನಕ್ಕೆ ಸತ್ತ್ವಗುಣವೇ ದಾರಿಮಾಡಿಕೊಡುವುದು.

ಇಂಥ ಸತ್ತ್ವವನ್ನೆ 'ನಿರ್ಮಲ'ವೆಂದು ಕರೆದಿರುವುದು. ರಜಸ್ಸು, ತಮಸ್ಸುಗಳಿಗೆ ಒಳಪಡದೆ ತನ್ನಷ್ಟಕ್ಕೆ ತಾನು ಇರುವುದು ಎಂದರ್ಥ. ಆಗ ತನ್ನ ಕೆಲಸವನ್ನು ತಾನು ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ. ಅದರ ಕೆಲಸವೇನು ಎಂದರೆ ಬೆಳಗುವುದು (ಪ್ರಕಾಶ). ಬೆಳಗುವಾಗ ಉಪದ್ರವವಿಲ್ಲದೆ, ಶಾಂತವಾಗಿರುವುದು 'ಅನಾಮಯ' (ಆಮಯವೆಂದರೆ ರೋಗ,

ವ್ಯಾಧಿ, ಉಪದ್ರವ; ಇದಿಲ್ಲದಿರುವುದು ಅನಾಮಯ). ಈ ಸ್ಥಿತಿಯಲ್ಲಿಯೇ ಜ್ಞಾನ ಹೊರಹೊಮ್ಮುವುದು; ಜ್ಞಾನವೂ ಸುಖವೂ ಒಂದುಗೂಡುವುದು ಸತ್ತ್ವಗುಣದಲ್ಲಿಯೇ. ಅದರಲ್ಲಿ ಸುಖಸಂಗವೂ ಇದೆ, ಜ್ಞಾನಸಂಗವೂ ಇದೆ.

ಸಂಗ ಎಂದರೆ ಕೂಡಿಕೊಳ್ಳುವುದು, ಸೇರಿಕೊಳ್ಳುವುದು, ಬಯಸುವುದು, ಆಸಕ್ತಿಹೊಂದುವುದು. ಸುಖಸಂಗವೆಂದಾಗ ಸುಖವನ್ನು ಬಯಸುವುದು; ಜ್ಞಾನದೊಂದಿಗೆ ಸೇರಿಕೊಂಡಾಗ, ಸುಖದ ಸಾಧನೆಗಳಿಗೆ, ಜ್ಞಾನದ ಸಾಧನೆಗಳಿಗೆ ಕಟ್ಟುಬೀಳುತ್ತಾನೆ. ಸುಖದ ಹಿಂದೆ ಓಡುತ್ತಾನೆ, ಜ್ಞಾನವನ್ನು ಅರಸುತ್ತಾನೆ. ಸುಖವಿರದಿದ್ದರೆ, ಜ್ಞಾನವಿಲ್ಲದಿದ್ದರೆ ಅವನಿಗೆ ನೆಮ್ಮದಿಯಿರದೆಂಬ ಕಲ್ಪನೆ. ತಾನು ಸುಖಿ, ಜ್ಞಾನಿ ಎಂಬ ಅನಿಸಿಕೆಗಳು ಅಭಿನಿವೇಶಗಳು; ಬದುಕುವ ಬಯಕೆಗೆ ಅಭಿನಿವೇಶವೇ ತಳಪಾಯ.

(8)

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಂ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ॥

(14,7)

ರಜೋಗುಣದ ಸ್ವರೂಪದಲ್ಲಿ ರಾಗ ಎದ್ದುನಿಲ್ಲುತ್ತದೆ. ರಾಗವೆಂದರೆ ಬಯಕೆ, ಇಚ್ಛೆ, ವಿಷಯಸುಖಗಳಲ್ಲಿ ಆಸೆ. ರಾಗಕ್ಕೆ 'ಗರ್ಧ' ವೆಂಬ ಪರ್ಯಾಯಪದವಿದೆ; ಇಂಗ್ಲೀಷಿನ 'ಗ್ರೀಡ್' ಇದರಿಂದಲೇ ಬಂದದ್ದು; ಅತಿ ಆಸೆಯೆಂದರ್ಥ. ಇರುವುದರಲ್ಲಿ ತೃಪ್ತಿಪಡದೆ, ಎಷ್ಟು ಬಂದರೂ ಮತ್ತಷ್ಟು ಬೇಕೆಂಬಾಸೆ. ಈ ರಜೋಗುಣವು ಹುಟ್ಟಿಕೊಳ್ಳುವುದಾದರೂ ಹೇಗೆ? ತೃಷ್ಣೆ ಮತ್ತು ಸಂಗ ಇವುಗಳಿಂದ. ತೃಷ್ಣೆಯೆಂದರೆ ಈವರೆಗೆ ದೊರೆಯದಿದ್ದದ್ದು ದೊರಕಬೇಕೆಂಬ ಬಯಕೆ (ಅಪ್ರಾಪ್ತಾಭಿಲಾಷೆ); ಸಂಗವೆಂದರೆ ದೊರೆತ ವಸ್ತುಗಳಲ್ಲಿ ಮಿತಿಮೀರಿದ ಆಸಕ್ತಿ (ಪ್ರಾಪ್ತೇಷು ಪ್ರೀತಿಃ). ಎರಡೂ ಬಯಕೆಗಳೇ (ಸ್ಪೃಹಾ). ಮನುಷ್ಯನನ್ನು ರಜೋಗುಣವು ಕಟ್ಟಿಹಾಕುವುದು ಈ ಬಯಕೆಗಳ ಮೂಲಕವಾಗಿ. ಬಯಕೆಯಿರುವಾಗ ಅದನ್ನು ಈಡೇರಿಸಿಕೊಳ್ಳಲು ಕೆಲಸ ಮಾಡಬೇಡವೆ? ಕೆಲಸವೂ ಬಯಕೆಯನ್ನು ತೀರಿಸುವಂತಿರಬೇಕು. ಕೆಲಸದಿಂದ ಒಂದು ಬಯಕೆ ತೀರಿತೆನ್ನಿ. ಅಷ್ಟಕ್ಕೆ ಮುಗಿಯಿತೆ? ಮತ್ತೊಂದು ಬಯಕೆ ಎದ್ದುಕೊಳ್ಳುತ್ತದೆ; ಅದನ್ನು ಪೂರಯಿಸಿಕೊಳ್ಳಲು ಇನ್ನೊಂದು ಕೆಲಸದಲ್ಲಿ ತೊಡಗಬೇಕು. ಹೀಗೆ ರಜಸ್ಸು ಎಂದರೆ ಕೆಲಸದಲ್ಲಿ ಪ್ರವೃತ್ತಿ ಎಂದೇ ಅರ್ಥ. ಕೆಲಸಮಾಡಲು ಬೇಕಾದ ಬಲ, ಗೆಲುವು, ಉತ್ಸಾಹ, ಆತಂಕ ಎಲ್ಲವೂ ರಜೋಗುಣದ ಅಂಶಗಳೇ. ಇವೆಲ್ಲ ಇರುವಾಗ ಬಂಧನವಲ್ಲವೆ? ನೆಮ್ಮದಿಯಿಂದ ಇರಲಾಗುತ್ತದೆಯೆ?

(9)

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥

(14,8)

ಮೂರನೆಯ ಗುಣ ತಮಸ್ಸು. ಅದು ಅಜ್ಞಾನವನ್ನುಂಟುಮಾಡುತ್ತದೆ. ಎಲ್ಲ ಜೀವಿಗಳನ್ನೂ ಮೋಹಗೊಳಿಸುತ್ತದೆ; ಮನುಷ್ಯನನ್ನು ಅದು ಕಟ್ಟಿಹಾಕುವುದು ಅದರ ಲಕ್ಷಣಗಳಾದ ಪ್ರಮಾದ, ಆಲಸ್ಯ, ನಿದ್ರೆಗಳಿಂದ.

ಜ್ಞಾನವೆಂದರೆ ಇರುವುದನ್ನು ಇದ್ದಂತೆಯೆ ಅರಿತುಕೊಳ್ಳುವುದು; ಅದಲ್ಲದ್ದು ಅಜ್ಞಾನ. 'ಅಜ್ಞಾನಜ' ಎನ್ನುವಾಗ ಅಜ್ಞಾನದಿಂದ ಹುಟ್ಟಿದ್ದು ಎಂದರ್ಥವಲ್ಲ; ಅಜ್ಞಾನವನ್ನು ಹುಟ್ಟಿಸುವುದು ಎಂದರ್ಥ. ತಮಸ್ಸಿನಲ್ಲಿ ಆವರಣ ಶಕ್ತಿಯಿದೆ; ಎಂದರೆ ತಿಳಿವಳಿಕೆಗೆ ತೆರೆ ಹಾಕಿದಂತೆ, ತಿಳಿವಳಿಕೆಯನ್ನು ಮರೆಮಾಡಿದಂತೆ. ವಸ್ತು ಇದ್ದಂತೆ ಅರಿವಿಗೆ ಬರುವುದಿಲ್ಲ; ಇರುವುದಕ್ಕಿಂತ ಬೇರೆಯಾಗಿ ತೋರಿಕೊಳ್ಳುತ್ತದೆ. ವಸ್ತುವಿನ ಬಗ್ಗೆ ಮೋಸಹೋಗುತ್ತೇವೆ. ಇದಕ್ಕೆ ವಿಪರ್ಯಯ ಜ್ಞಾನವೆಂದೂ ಹೆಸರಿದೆ. ಒಳ್ಳೆಯದನ್ನು ಕೆಟ್ಟದು ಎಂದು ತಿಳಿಯುತ್ತೇವೆ; ಕೆಟ್ಟದ್ದನ್ನು ಒಳ್ಳೆಯದು ಎಂದು ಬಗೆಯುತ್ತೇವೆ. ಧರ್ಮವನ್ನು ಅಧರ್ಮದಂತೆ ಕಂಡುಕೊಳ್ಳುತ್ತೇವೆ; ಅಧರ್ಮವನ್ನು ಧರ್ಮವೆಂದು ತಿಳಿಯುತ್ತೇವೆ. ಇದು ತಮಸ್ಸಿನಿಂದುಂಟಾದ ಅಜ್ಞಾನ.

ಮೋಹಗೊಳಿಸುವುದೂ ವಿಪರ್ಯಯಜ್ಞಾನದ ಇನ್ನೊಂದು ಮುಖ. ಇದು ಅಂತಃಕರಣದ ಮಾತು; ಮನಸ್ಸಿನಲ್ಲಿ ಒದಗುವ ಭ್ರಮೆ, ಭ್ರಾಂತಿ. ಯಾವುದು ಹಿತ, ಯಾವುದು ಅಹಿತ ಎಂಬ ವಿವೇಕವನ್ನೇ ಇದು ಮುಚ್ಚಿಬಿಡುತ್ತದೆ. ಬುದ್ಧಿ ಕೆಲಸ ಮಾಡುವುದೇ ಇಲ್ಲ. ಎಲ್ಲ ಮನುಷ್ಯರನ್ನೂ ದಿಕ್ಕು ಕೆಟ್ಟಂತೆ, ದಾರಿ ಕಾಣದಂತೆ ಮಾಡಿಬಿಡುತ್ತದೆ. ಮೋಹ ಎಂಬ ಮಾತಿನ ಮೂಲ 'ಮುಹ್' ಎಂಬ ಧಾತುವಿನ ಅರ್ಥ ಗೊಂದಲಕ್ಕೀಡು ಮಾಡುವುದು, ಪ್ರಜ್ಞೆ ತಪ್ಪುವುದು, ದಾರಿ ತಪ್ಪುವುದು, ವಸ್ತುಸ್ಥಿತಿಯನ್ನು ಮರೆಮಾಡುವುದು, ಏನು ಮಾಡಬೇಕೆಂದು ತೋಚದಂತೆ ಮಾಡಿಬಿಡುವುದು.

ಹೀಗೆ ಮಾಡುವ ತಮಸ್ಸು ಮನುಷ್ಯನನ್ನು ಕಟ್ಟಿಹಾಕುವುದು ಹೇಗೆಂದರೆ ಮೊದಲು ಪ್ರಮಾದದಿಂದ. ಪ್ರಮಾದ ಎಂದರೆ ಎಚ್ಚರ ತಪ್ಪುವುದು, ಮನವಿಡದೆ ಇರುವುದು, ತಪ್ಪು ಮಾಡುವುದು, ವಿವೇಚನೆಯಿಲ್ಲದೆ ತೋಚಿದಂತೆ ಮಾಡಿಬಿಡುವುದು, ಅವಧಾನವಿಲ್ಲದೆ ಇರುವುದು. ತಮಸ್ಸಿನ ಒಂದು ಮುಖ್ಯವಾದ ಲಕ್ಷಣ ಇದು. ಆಲಸ್ಯವೆಂದರೆ ಆಸಕ್ತಿಯಾಗಲಿ

ಉತ್ಸಾಹವಾಗಲಿ ಇಲ್ಲದೆ, ಮಾಡಬೇಕಾದ ಕೆಲಸವನ್ನು ಮಾಡದೆ ಇರುವುದು, ಕೆಲಸವನ್ನು ಮೊದಲು ಮಾಡುವ ಇಚ್ಛೆಯೂ ಇಲ್ಲದಿರುವುದು. ಯಾವ ಪ್ರವೃತ್ತಿಗಾದರೂ ಅಡ್ಡಿಬರುವ ಸೋಮಾರಿತನ, ಜಡತೆ. ನಿದ್ರೆಯೆನ್ನುವ ಮಾತಿನ ಅರ್ಥ ಇಂದ್ರಿಯಗಳಾಗಲಿ ಮನಸ್ಸಾಗಲಿ ಕೆಲಸಮಾಡದೆ ಇರುವ ಸ್ಥಿತಿ. ಮಾಡಬೇಕಾದ ಕೆಲಸವನ್ನು ಕೈಬಿಟ್ಟು, ಯಾವ ಚಿಂತೆಯೂ ಇಲ್ಲದೆ ಮಲಗಿ ನಿದ್ದೆ ಹೋಗುವುದು ತಮಸ್ಸಲ್ಲವೆ? ತಮಸ್ಸಿನ ಪರಮಾವಧಿ ಅದು.

(10)

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ ವಿವೃದ್ಧಂ ಸತ್ತ್ವಮಿತ್ಯುತ ॥

(14,11)

ಗುಣಗಳು ಇಟ್ಟಂತೆ ಇರುವುದಿಲ್ಲ, ಗಳಿಗೆಗಳಿಗೆಗೂ ಬದಲಾಗುತ್ತವೆ. ಒಮ್ಮೆ ಸತ್ತ್ವ ಮೇಲೆದ್ದುಕೊಂಡರೆ, ಇನ್ನೊಮ್ಮೆ ರಜಸ್ಸು, ಮತ್ತೊಮ್ಮೆ ತಮಸ್ಸು. ಹೀಗೆ ಗುಣವು ಮೇಲೆದ್ದುಕೊಳ್ಳುವುದನ್ನು, ಹೆಚ್ಚುವುದನ್ನು, ಬಲಗೊಳ್ಳುವುದನ್ನು 'ವೃದ್ಧಿ' (ಅಥವಾ ವಿವೃದ್ಧಿ) ಎಂದು ಕರೆದಿದ್ದಾರೆ. ಯಾವ ಗುಣ ವೃದ್ಧಿಗೊಂಡಿತು ಎಂದು ತಿಳಿಯಲು ಕೆಲವು ಲಕ್ಷಣಗಳು ನೆರವಾಗುತ್ತವೆ.

ಸತ್ತ್ವಗುಣ ಹೆಚ್ಚಿತೆಂದು, ಬಲಗೊಂಡಿತೆಂದು, ಬೆಳೆಯಿತೆಂದು ಹೇಳುವುದು ಹೇಗೆ? ಮನುಷ್ಯನು ಹೊರಗಣ ಪ್ರಪಂಚವನ್ನು ತಿಳಿದುಕೊಳ್ಳಲು ಶರೀರದಲ್ಲಿ ಕೆಲವು ಹವಣಿಕೆಗಳಿರುತ್ತವೆ. ಮನೆಗೆ ಬಾಗಿಲು, ಕಿಟಕಿಗಳಿರುವಂತೆ. ಇಂದ್ರಿಯಗಳು ಶರೀರದ ಬಾಗಿಲುಗಳಿದ್ದಂತೆ; ಅದಕ್ಕೇ ದ್ವಾರಗಳೆನ್ನುವುದು. ಐದು ಇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ) ಮತ್ತು ಮನಸ್ಸು ಇಲ್ಲಿ ಹೇಳಿರುವ ದ್ವಾರಗಳು. ತಾಂತ್ರಿಕ ಪರಿಭಾಷೆಯಲ್ಲಿ 'ನವದ್ವಾರ'ಗಳ ಎಣಿಕೆಯಿದೆ. ದೇಹವು ಒಂಭತ್ತು ಬಾಗಿಲುಗಳಿರುವ ಪಟ್ಟಣವೆಂದು ಅಲ್ಲಿನ ಎಣಿಕೆ (ಶ್ವೇತಾಶ್ವತರೋಪನಿಷತ್ತಿನಲ್ಲಿಯೂ 'ನವದ್ವಾರೇ ಪುರೇ ದೇಹೀ' ಎಂಬ ಒಕ್ಕಣೆಯಿದೆ). ಆದರೆ ಇವು ಒಂಬತ್ತು ರಂಧ್ರಗಳು-ಕಣ್ಣುಗಳೆರಡು, ಕಿವಿಗಳೆರಡು, ಮೂಗಿನ ಹೊಳ್ಳೆಗಳೆರಡು, ಬಾಯಿ, ಗುದ ಮತ್ತು ಉಪಸ್ಥಾ. ಇಲ್ಲಿ ಹೇಳಿರುವ 'ಸರ್ವದ್ವಾರ' ಗಳೆಂದರೆ ಇವು ಆಗಲಾರವು; ಬೆಳಕು (ಎಂದರೆ ತಿಳಿವಳಿಕೆ)

ಒದಗಿ ಬರುವ ಬಾಗಿಲುಗಳು ಎಂದು ಸ್ಪಷ್ಟವಾಗಿಯೇ ಹೇಳಿದೆ. ಎಂದರೆ ಮೇಲೆ ಹೇಳಿದ ಐದು ಇಂದ್ರಿಯಗಳು ಮತ್ತು ಅವುಗಳೊಂದಿಗೆ ಇರಲೇ ಬೇಕಾದ ಮನಸ್ಸು (ಉಪಲಬ್ಧಿ ದ್ವಾರಗಳು).

ಯಾವಾಗ ನಮ್ಮ ಇಂದ್ರಿಯಗಳಿಂದಾಗಲಿ ಮನಸ್ಸಿನಿಂದಾಗಲಿ ವಿಷಯಗಳನ್ನು ಇದ್ದುದು ಇದ್ದಂತೆಯೇ ತಿಳಿಯುವೆವೋ ಆದು ಸತ್ತ್ವಗುಣ ಕೆಲಸಮಾಡುತ್ತಿರುವುದರ ಲಕ್ಷಣ; ರಜಸ್ಸಾಗಲಿ ತಮಸ್ಸಾಗಲಿ ಹಿಂದೆ ಬಿದ್ದಿತೆಂದೇ ಅರ್ಥ.

(11)

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥

(14,12)

ರಜೋಗುಣ ಹೆಚ್ಚಿತೆಂದು ತಿಳಿಯುವುದು ಹೇಗೆ? ಲೋಭ ಕಾಣಿಸಿಕೊಂಡಾಗ, ಯಾವುದಾದರೂ ಕೆಲಸದಲ್ಲಿ ತೊಡಗಿದಾಗ, ಮಾಡಿದ ಕೆಲಸದಿಂದ ನೆಮ್ಮದಿ ಕಾಣದಾದಾಗ, ಬಯಕೆಗಳು ತೋರಿಕೊಂಡಾಗ ರಜಸ್ಸು ಹೆಚ್ಚಿತೆಂದು ಕಂಡುಕೊಳ್ಳಬಹುದು. ರಜಸ್ಸಿನಿಂದ ಹುಟ್ಟುವುವೇ ಇವೆಲ್ಲ.

ಲೋಭವೆಂದರೆ ಅತ್ಯಾಶೆ. ಬೇರೆಯವರ ಸ್ವತ್ತನ್ನು ತನಗಾಗಿ ಬಯಸುವುದು, ತನ್ನಲ್ಲಿರುವುದನ್ನು ಬೇರೆಯವರಿಗೆ ಒಂದಿಷ್ಟೂ ಕೊಡಲು ಹಿಂಜರಿಯುವುದು,ತಾನೇ ತನ್ನದನ್ನು ಬಳಸಿಕೊಳ್ಳಲು ಹಿಂದೆಮುಂದೆ ನೋಡುವುದು, ಇವೆಲ್ಲ ಲೋಭವೆನಿಸಿಕೊಳ್ಳುತ್ತವೆ. ಕಾರ್ಪಣ್ಯ, ಗರ್ಧ ಎಂದೂ ಪರ್ಯಾಯ ಪದಗಳು. ಬೇರೆಯವರದ್ದನ್ನು ತಾನು ಪಡೆದುಕೊಳ್ಳುವ ಆಸೆಯಿದ್ದಾಗ, ತನ್ನದನ್ನು ತಾನು ತನ್ನಲ್ಲೇ ಉಳಿಸಿಕೊಳ್ಳುವ ಹಟವಿದ್ದಾಗ ಅದಕ್ಕಾಗಿ ಪ್ರಯತ್ನಪಡಬೇಡವೆ? ಪ್ರಯತ್ನವೆಂದರೆ ಕೆಲಸ. ಕೆಲಸದಲ್ಲಿ ತೊಡಗದೆ ಇರುವುದು ಲೋಭಿಗೆ ಸಾಧ್ಯವಿಲ್ಲ. ಕೆಲಸವೆನ್ನುವುದು ರಜಸ್ಸಿನ ಲಕ್ಷಣವೇ.

ಇಲ್ಲಿ ಪ್ರವೃತ್ತಿಯನ್ನು ಆರಂಭದಿಂದ ಬೇರೆಯಾಗಿ ಕಾಣಿಸಿದ್ದಾರೆ. ಪ್ರವೃತ್ತಿಯೆಂದರೆ ಯಾವುದಾದರೊಂದು ಸದ್ಯದ ಪ್ರಯೋಜನವನ್ನು ಮನಸ್ಸಿನಲ್ಲಿರಿಸಿಕೊಂಡು ಕೆಲಸಮಾಡುವುದು. ಹಾಗಲ್ಲದೆ ಸಾಮಾನ್ಯವಾಗಿ ಎಂದಿನ ಕೆಲಸದಲ್ಲಿ ತೊಡಗುವುದು

ಆರಂಭ. ಬೇಸಾಯ, ಅಗ್ನಿಹೋತ್ರ ಇವೆಲ್ಲ ಆರಂಭಗಳು; ಅವುಗಳಲ್ಲಿ ಕಣ್ಣಿನಿಂದ ಕಾಣುವ, ನಿರ್ದಿಷ್ಟ ಪ್ರಯೋಜನ ಇದೆ; ಆದರೆ ಅದು ಒಡನೆಯೇ ಫಲ ಕೊಡುವ ಕೆಲಸಗಳಲ್ಲ. ಕಾಲಾನುಕಾಲಕ್ಕೆ ಫಲ ಬಂದೀತು, ಅಲ್ಲಿಯವರೆಗೆ ಅದು ಅ-ದೃಷ್ಟವೇ (ಎಂದರೆ ಕಣ್ಣಿಗೆ ಕಾಣಿಸದಿದ್ದರೂ, ಇದ್ದುಕೊಂಡಿರುವ, ಮುಂದೆ ಮಾಗಿ ಫಲಕೊಡುವಂಥವು). ಪ್ರವೃತ್ತಿಯದಾದರೆ 'ದೃಷ್ಟ' ಫಲ. ಎರಡೂ ಕೆಲಸಗಳೇ; ಕಾಮನೆಗಳಿರುವಂಥವೇ.

ಕೆಲಸದಲ್ಲಿ ತೊಡಗಿದನೆನ್ನಿ; ಆಶೆ ಅಷ್ಟರಿಂದ ತೀರಿಹೋದರೆ ಮತ್ತೆ ಕೆಲಸ ಮಾಡಬೇಕಾದುದಿಲ್ಲ. ಕೆಲಸವನ್ನು ನಿಲ್ಲಿಸಿಬಿಟ್ಟರೆ ಅದು ತಮಸ್ಸಾಯಿತು. ರಜೋಗುಣವಿದ್ದವನು ಕೆಲಸ ಮಾಡುತ್ತಲೆ ಇರಬೇಕು ಎಂದ ಮೇಲೆ, ಮಾಡಿದ ಕೆಲಸದಿಂದ ನೆಮ್ಮದಿಯಿರದೆಂದೇ ಅರ್ಥ. ಇದು 'ಕರ್ಮಗಳ ಅಶಮಃ' ಶಮವೆಂದರೆ ಮನಸ್ಸಿನ ನೆಮ್ಮದಿ; ಅದಿಲ್ಲದಿರುವುದು ಅಶಮ. ಇದು ಬೇಕು, ಅದು ಬೇಕು; ಹೀಗಿರಬೇಕು, ಹಾಗಿರಬೇಕು ಎಂಬ ಮನಸ್ಸಿನ ಮಂಡಿಗೆಗಳಿದ್ದರೇ ಕೆಲಸದಲ್ಲಿ ತೊಡಗುವುದು. ಇವೆಲ್ಲ ಇದ್ದಲ್ಲಿ ನೆಮ್ಮದಿಯೆಲ್ಲಿಯದು? 'ಚಿತ್ತದ ಅನುಪರತಿ' ಎಂಬ ಅರ್ಥವನ್ನು ಸೂಚಿಸಿದ್ದಾರೆ. ಸಂತೋಷ, ಸಿಟ್ಟು, ಬೇಸರ, ಬೇಗುದಿ.

'ಸ್ಪೃಹಾ' ಎನ್ನುವ ಮಾತಿಗೆ ಬಯಕೆಗಳು, ಆಶೆಗಳು ಎಂದೇ ಅರ್ಥ. ಆವರೆಗೆ ಇರದ ವಿಷಯಗಳನ್ನೋ ಅವುಗಳಿಂದ ಸುಖವನ್ನೋ ಪಡೆದುಕೊಳ್ಳುವ ಕಾತರವನ್ನು ಸ್ಪೃಹೆಯೆನ್ನುತ್ತಾರೆ (ಅಪ್ರಾಪ್ತಾಭಿಲಾಷ). ಇದೂ ಕೆಲಸದಲ್ಲಿ ತೊಡಗಲು ಹಿನ್ನೆಲೆಯೇ. ಅಂತೂ ಮೇಲೆ ಹೇಳಿದ ನಾಲ್ಕೂ ಲಕ್ಷಣಗಳು ಬಯಕೆ-ಕೆಲಸಗಳನ್ನು ಸೂಚಿಸುತ್ತವೆ.

(12)

ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥

(14,13)

ಇನ್ನು ತಮಸ್ಸು ಹೆಚ್ಚಿತೆಂದು ಹೇಳುವಾಗ, ಸತ್ತ್ವದ ಲಕ್ಷಣಗಳಾಗಲಿ ರಜಸ್ಸಿನ ಲಕ್ಷಣಗಳಾಗಲಿ ಇರುವುದಿಲ್ಲ. ಸತ್ತ್ವವೆಂದರೆ ಬೆಳಕು, ತಿಳಿವಳಿಕೆ; ರಜಸ್ಸೆಂದರೆ ಕೆಲಸದಲ್ಲಿ ತೊಡಗುವುದು. ತಮಸ್ಸು ಹೆಚ್ಚಾಗಿರುವಾಗ ತಿಳಿವಳಿಕೆಯೂ ಇರುವುದಿಲ್ಲ; ಕೆಲಸ ಮಾಡುವ ಉತ್ಸಾಹವೂ ಇರುವುದಿಲ್ಲ. ಇದು 'ಅಪ್ರಕಾಶ', 'ಅಪ್ರವೃತ್ತಿ'. ಗುರುಗಳಿದ್ದರೂ, ಉಪದೇಶವನ್ನು ಪಡೆದುಕೊಳ್ಳುವ ಅವಕಾಶವಿದ್ದರೂ ತಾಮಸಿಗೆ ತಿಳಿವಳಿಕೆಯ ಕಡೆ ಮನಸ್ಸು ಹೋಗುವುದಿಲ್ಲ; ಜ್ಞಾನವನ್ನು ಒದಗಿಸುವ ಸನ್ನಿವೇಶಗಳೆಷ್ಟೇ ಇರಲಿ, ಇವನು ಅವುಗಳಿಂದ ಎಳ್ಳಷ್ಟೂ ಲಾಭವನ್ನು ಪಡೆದುಕೊಳ್ಳುವುದಿಲ್ಲ. ಒಂದು ವೇಳೆ ಒಳ್ಳೆಯ ನಡತೆ, ಕೆಲಸಗಳ ವಿಚಾರ ತಿಳಿದಿದ್ದರೂ ಅವನ್ನು ಕಾರ್ಯಗತ ಮಾಡಲು ಇವನು ಹೊರಡುವುದಿಲ್ಲ; ಕೆಲಸವೆಂದರೆ ಇವನಿಗೆ ಆಗದು.

ಪ್ರಮಾದವೆಂದರೆ ಯಾವುದು ಸರಿ, ಯಾವುದು ತಪ್ಪು, ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬ ವಿವೇಕವಿಲ್ಲದೆ ಇರುವುದು; ತನ್ನ ಕರ್ತವ್ಯವೇನೆಂಬ ಅರಿವಿಲ್ಲದಿರುವುದು. ತಾನು ಮಾಡಿದ ಕೆಲಸದಿಂದ, ಅಥವಾ ತಾನು ಮಾಡಬೇಕಾದ ಕೆಲಸವನ್ನು ಮಾಡದೆ ಇದ್ದುದರಿಂದ ಇತರರಿಗೆ ತೊಂದರೆಯಾದೀತೆಂಬ ಎಣಿಕೆಯೂ ಇಲ್ಲದಿರುವುದು.

ಮೋಹವೆಂದರೆ ಎಚ್ಚರ ತಪ್ಪುವುದು; ಪ್ರಜ್ಞೆಯಿಲ್ಲದಿರುವುದು, ನಿದ್ರೆ, ಆಲಸ್ಯಗಳು ಮೋಹವೇ. ಹಣದ ಮೇಲೆ ಮೋಹ, ಹೆಂಡಿರು ಮಕ್ಕಳ ಮೇಲೆ ಮೋಹ, ಯಶಸ್ಸಿನ ಮೇಲೆ ಮೋಹ, ಭೋಗಜೀವನ ಬೇಕೆಂಬ ಮೋಹ, ಊಟ ತಿಂಡಿಯ ಮೇಲೆ ಮೋಹ, ಉಡುಗೆ-ತೊಡುಗೆಗಳ ಮೇಲೆ ಮೋಹ ಇವೆಲ್ಲ ಸಂಸಾರದಲ್ಲಿನ ಆಸಕ್ತಿಯನ್ನು ತೋರಿಸುತ್ತವೆಯಲ್ಲವೆ? ಕರ್ತವ್ಯವನ್ನು ಕಡೆಗಾಣಿಸಿದಾಗ, ಇತರರ ಆಗತ್ಯವನ್ನು ಅಸಡ್ಡೆಯಿಂದ ಕಂಡಾಗ, ತನ್ನ ಉದ್ಧಾರವನ್ನೆ ತಾನು ಉಪೇಕ್ಷೆಮಾಡಿದಾಗ, ಮಿತಿಯನ್ನು ಮರೆತಾಗ, ಅದು ಮೋಹವೆನಿಸಿಕೊಳ್ಳುತ್ತದೆ.

(13)

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋಗಚ್ಛಂತಿ ತಾಮಸಾಃ ॥

(14,18)

ಮೂರು ಗುಣಗಳು ಮನುಷ್ಯರನ್ನು ಕ್ರಮವಾಗಿ ಎಲ್ಲಿಗೆ ಒಯ್ಯುತ್ತವೆ ಎಂಬುದು ಈ ಶ್ಲೋಕದ ವಸ್ತು. ಸತ್ತ್ವಗುಣವುಳ್ಳವರು ಮೇಲೆ ಏರುತ್ತಾರೆ; ರಜೋಗುಣವುಳ್ಳವರು ನಡುವೆ, ಎಂದರೆ ಇದ್ದಲ್ಲಿಯೆ, ಇರುತ್ತಾರೆ; ತಮೋಗುಣವುಳ್ಳವರು ಕೆಳಗೆ ಇಳಿಯುತ್ತಾರೆ.

ಮೇಲೆ (ಊರ್ಧ್ವ) ಎಂದರೆ ಸ್ವರ್ಗ ಎಂದಾಗಬಹುದು; ಬಂಧನದಿಂದ ಬಿಡುಗಡೆ ಎಂದಾಗಬಹುದು; ಸುಖ ಎಂದಾಗಬಹುದು; ನೆಟ್ಟಗೆ ನಿಲ್ಲುವುದು ಎಂದಾಗಬಹುದು. ಸತ್ತ್ವಗುಣವನ್ನೆ ಹೆಚ್ಚಾಗಿ ಬೆಳೆಸಿಕೊಂಡವರು (ಸಾತ್ತ್ವಿಕರು), ಸತ್ತ್ವಗುಣದಲ್ಲೇ ಗಟ್ಟಿಯಾಗಿ ನಿಂತವರು (ಸತ್ತ್ವಸ್ಥರು) ಮೇಲೆ ಸಾಗುತ್ತಾರೆ ಎನ್ನುವಾಗ ಇವೆಲ್ಲ ಅರ್ಥಗಳೂ ಹೊಂದುತ್ತವೆ. ಬರುಬರುತ್ತ, ಉತ್ತರೋತ್ತರವಾಗಿ, ಅವರು ಮೇಲುಮೇಲಕ್ಕೆ ಏರುತ್ತಾರೆ. ಪುರುಷಾರ್ಥಗಳಲ್ಲಿ ಮೇಲಿನದು ಎಂದರೆ ಧರ್ಮ. ಸಾತ್ತ್ವಿಕರು ಒಲಿಯುವುದು ಧರ್ಮಕ್ಕೆ. ಇದರಿಂದ ಅಭ್ಯುದಯ-ನಿಃಶ್ರೇಯಸಗಳೆರಡನ್ನೂ ಪಡೆದುಕೊಳ್ಳುತ್ತಾರೆ.

ರಜೋಗುಣವನ್ನೇ ಹೆಚ್ಚಾಗಿ ಬೆಳೆಸಿಕೊಂಡವರು ನಡುವೆ ನಿಲ್ಲುತ್ತಾರೆ. ನಡುವೆ ಇರುವುದು ಎಂದರೆ ವ್ಯವಹಾರ ಪ್ರಪಂಚದಲ್ಲಿ ತೊಡಗಿರುತ್ತ, ಒಳ್ಳೆಯದು ಕೆಟ್ಟದ್ದು ಎರಡನ್ನೂ ಹಿಡಿದು, ಸುಖ-ದುಃಖಗಳೆರಡನ್ನೂ ಅನುಭವಿಸುತ್ತ, ಮೇಲೂ ಏರದೆ ಕೆಳಗೂ ಇಳಿಯದೆ, ಇದ್ದಲ್ಲಿಯೇ ಇದ್ದಂತೆಯೇ ಇರುವುದು. ಅವರು ಮುಂದರಿಯುವುದೂ ಇಲ್ಲ ಹಿಂದೆ ಸರಿಯುವುದೂ ಇಲ್ಲ. ನಡುವೆ ಎಂದರೆ ಸಂಸಾರ. ಪುರುಷಾರ್ಥಗಳಲ್ಲಿ ನಡುವೆ ಇರುವ ಅರ್ಥವನ್ನೆ ಅರಸುತ್ತ, ಅದಕ್ಕಾಗಿ ದುಡಿಯುತ್ತ ಬಾಳನ್ನು ಸವೆಸುವರು.

ತಮೋಗುಣವನ್ನು ಬೆಳೆಸಿಕೊಂಡವರು ಇರುವ ಬಗೆಯನ್ನು 'ಜಘನ್ಯ' ಎಂದು ಕರೆದಿದ್ದಾರೆ. ನಿಂದ್ಯ, ಎಂದರ್ಥ. ಇವರು ಹಿಡಿಯುವ ದಾರಿ ಕೆಳಗೆ ಜಾರುತ್ತದೆ. ಅವರ ಬಯಕೆ, ಅಲಸಿಕೆ, ಅಜ್ಞಾನ, ಮೋಹ ಇವೆಲ್ಲ ಅವರನ್ನು ಇದ್ದಲ್ಲಿಯೂ ಇರಗೊಡುವುದಿಲ್ಲ; ಮೇಲೇರುವುದಂತೂ ಹಗಲುಗನಸು. ಪುರುಷಾರ್ಥಗಳಲ್ಲಿ ಅಧಮವೆ - ನಿಸಿದ ಕಾಮವನ್ನು ಇವರು ಅವಲಂಬಿಸಿ ಕೆಳಗೆ ಇಳಿಯುತ್ತಾರೆ. ಕೆಳಗೆ ಎಂದರೆ ನರಕ ಎಂದಾಗಬಹುದು, ಬಂಧನ ಎಂದಾಗಬಹುದು; ದುಃಖ ಎಂದಾಗಬಹುದು; ಬಗ್ಗುವುದು ಎಂದಾಗಬಹುದು.

ಛಂದೋಗಪರಿಶಿಷ್ಟದಲ್ಲಿ ಆಸೀನ, ಊರ್ಧ್ವ, ಪ್ರಹ್ವ ಎಂಬ ವಿಭಾಗ ಕಂಡುಬರುತ್ತದೆ. ಆಸೀನವೆಂದರೆ ನೆಮ್ಮದಿಯಿಂದ ಕುಳಿತವನು (ಉಪವಿಷ್ಟಃ), ಊರ್ಧ್ವನೆಂದರೆ ನೆಟ್ಟಗೆ ಕಟ್ಟಿಗೆಯಂತೆ ನಿಂತವನು (ದಂಡವತ್‌ಸ್ಥಿತಃ); ಪ್ರಹ್ವನೆಂದರೆ ಮುಂದಕ್ಕೆ ಮೈಚಾಚಿದವನು, ಬಾಗಿದವನು (ಅವನತ ಪೂರ್ವಕಾಯಃ). 'ತದಾಸೀನೇನ ಕರ್ತವ್ಯಂ ನ ಪ್ರಹ್ವೇನ ನ ತಿಷ್ಠತಾ'. ಇವರಲ್ಲಿ ಆಸೀನನು ಸಾತ್ತ್ವಿಕ; ಊರ್ಧ್ವ ಎಂದರೆ ನಿಂತವನು, ಕೆಲಸಕ್ಕೆ ಸಿದ್ಧನಾಗಿರುವವನು, ರಾಜಸ; ಪ್ರಹ್ವ ಎಂದರೆ ಬಗ್ಗಿದವನು ತಾಮಸ. ಈ ಮೂವರಲ್ಲಿ ಮೊದಲನೆಯವನೇ ಉತ್ತಮನೆಂದೂ, ಅವನೇ ಪುರುಷಾರ್ಥಗಳನ್ನೆಲ್ಲ ಪಡೆದುಕೊಳ್ಳುವನೆಂದೂ ಈ ಗ್ರಂಥದಲ್ಲಿ ಹೇಳಿದೆ.

(14)

ಯತ್ತದಗ್ರೇ ವಿಷಮವ ಪರಿಣಾಮೇಽಮೃತೋಪಮಂ ।
ತತ್ ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಂ ॥

(18,37)

ಸುಖವನ್ನು ಎಲ್ಲರೂ ಅಪೇಕ್ಷಿಸುತ್ತಾರೆ. 'ನನಗೆ ಸುಖ ಇರಬೇಕು; ದುಃಖವೂ ಸ್ವಲ್ಪವು ಇರಬಾರದು' ಎಂದೇ ಎಲ್ಲರ ಬಯಕೆಯಲ್ಲವೆ? ಮನುಷ್ಯರು ಮಾತ್ರವಲ್ಲ, ಪ್ರಾಣಿಗಳೂ ಇದನ್ನೇ ಬಯಸುವುದು. ಆದರೆ ಸುಖದಲ್ಲಿ ಸಾತ್ತ್ವಿಕ, ರಾಜಸ, ತಾಮಸ ಎಂಬ ವಿಭಾಗವಿದೆ. ಆಯಾ ಗುಣಗಳು ಉತ್ಕರ್ಷೆಯಲ್ಲಿದ್ದಾಗ ಆಯಾ ಬಗೆಯ ಸುಖ.

ಸಾತ್ತ್ವಿಕವಾದ ಸುಖ ಎಂದರೇನು? ಅದು 'ಆತ್ಮಬುದ್ಧಿಪ್ರಸಾದಜ', ಎಂದರೆ ತನ್ನ (ಆತ್ಮನಃ) ಬುದ್ಧಿಯ ನೈರ್ಮಲ್ಯದಿಂದ (ಪ್ರಸಾದ) ಉಂಟಾದದ್ದು (ಜ, ಜಾತ). ತನ್ನ ಬುದ್ಧಿಯು ರಜಸ್ಸು ಮತ್ತು ತಮಸ್ಸು ಎಂಬ ಕೊಳೆಗಳಿಂದ ದೂರವಿದ್ದಾಗ ನಿರ್ಮಲವಾಗಿರುತ್ತದೆ, ಸ್ವಚ್ಛವಾಗಿರುತ್ತದೆ. ಇದನ್ನೆ ವ್ಯವಸಾಯಾತ್ಮಿಕವಾದ ಬುದ್ಧಿ ಎಂದು ಗೀತೆ ಕರೆದಿದೆ. ಅದು ವಿಷಯಗಳ ಸೆಳೆತದಿಂದ ನುಚ್ಚುನೂರಾಗಿ ಅತ್ತಿತ್ತ ಹರಿದಾಡುವುದಿಲ್ಲ; ಒಂದೆಡೆ ನೆಮ್ಮದಿಯಿಂದ ನಿಂತಿರುತ್ತದೆ. ಇದರಿಂದ ಉಂಟಾದ ಸುಖ ಸಾತ್ತ್ವಿಕಸುಖ. ಆತ್ಮನೆಂದರೆ ಅಂತರ್ಯಾಮಿಯಾದ ಪರಮಾತ್ಮನೆಂದೂ, ಅವನಲ್ಲಿ ನೆಟ್ಟ ಬುದ್ಧಿ ಅಂತರ್ಮುಖವಾಗಿರುವುದೆಂದೂ, ಇದರಿಂದಾಗಿ ಪ್ರಸನ್ನತೆ-ಯುಂಟಾಗುವುದೆಂದೂ, ಈ ಪ್ರಸನ್ನತೆಯಿಂದ ಹೊರಹೊಮ್ಮಿದ ಸುಖ ನಿರತಿಶಯಾನಂದರೂಪವಾದುದೆಂದೂ ಇನ್ನೊಂದು ವಿವರಣೆಯಿದೆ.

ಏನಾಗಲಿ, ಇದು ವಿಷಯಾನುಭವದಿಂದ ಉಂಟಾದ ಸುಖವಲ್ಲ; ಸ್ವಾಭಾವಿಕವಾಗಿ ಬರುವುದೂ ಅಲ್ಲ. ಇದನ್ನು ಪಡೆದುಕೊಳ್ಳಲು ಪ್ರಯತ್ನಪಡಬೇಕು, ಸಾಧನೆ ಮಾಡಬೇಕು. ಸಾಧನೆ ಮಾಡುವಾಗ ಲೋಕಸಹಜವಾದ ಸುಖಗಳನ್ನು ಬಿಡಬೇಕಾಗುತ್ತದೆ. ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿಯಬೇಕಾಗುತ್ತದೆ. ಇದರಿಂದ ಶ್ರಮ, ಆಯಾಸಗಳು ತಪ್ಪಿದ್ದಲ್ಲ. 'ಅಗ್ರೇ' ಎಂದರೆ ಮೊದಲಲ್ಲಿ, ಯೋಗಸಾಧನೆಯಲ್ಲಿ ಅಡಿಯಿಡುವಾಗ, ತೊಡಗುವಾಗ, ಲೌಕಿಕಸುಖಗಳನ್ನು ಕೈಬಿಟ್ಟದ್ದರಿಂದ ವಿಷದಂತೆಯೆ ಕಹಿಯಾಗಿ ಕಟುವಾಗಿ ತೋರಿಕೊಳ್ಳುತ್ತದೆ. ಆದರೆ ಕಡೆಯಲ್ಲಿ, ಎಂದರೆ ಯೋಗಸಾಧನೆಯು ಮುಗಿಯುವಾಗ ಅದರ ಫಲವಾಗಿ (ಪರಿಣಾಮೇ) ಬರುವ ಸುಖ ಅಮೃತದಂತೆ ಆಪ್ಯಾಯಮಾನವಾಗಿರುತ್ತದೆ; ಏಕೆಂದರೆ, ಸಾಧನೆಯ ಫಲವಾಗಿ ದೇಹ, ಇಂದ್ರಿಯ, ಮನಸ್ಸುಗಳಿಂದ ಬೇರೆಯಾದ, ಮೂರು ಗುಣಗಳ ಆಡಳಿತಕ್ಕೆ ಸೇರದ, ಆತ್ಮನನ್ನು (ವಿವಿಕ್ತಾತ್ಮನನ್ನು) ನೇರಾಗಿ ಕಂಡುಕೊಳ್ಳುವುದಾಗುತ್ತದೆ.

(15)

ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಂ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಂ ॥

(18,38)

ರಾಜಸವೆಂಬಂಥ ಸುಖವಾದರೋ ಹೊರಗಣ ವಿಷಯಗಳು ಮತ್ತು ನಮ್ಮ ಇಂದ್ರಿಯಗಳು ಜೊತೆಗೂಡಿದಾಗ ಉಂಟಾಗುತ್ತದೆ. ಇದು ಲೋಕದ ಜನರಿಗೆ ಪರಿಚಿತವಾದ ಸುಖವೇ. ವ್ಯವಹಾರದಲ್ಲಿ ಸುಖವೆಂದರೆ ಈ ಬಗೆಯದೇ ತಾನೆ? ಮೇಲೆ ಹೇಳಿದಂತೆ 'ಆತ್ಮಬುದ್ಧಿಪ್ರಸಾದ' ದಿಂದ ಉಂಟಾದದ್ದಲ್ಲ.

ಈ ಬಗೆಯ ಲೌಕಿಕ ಸುಖವನ್ನು ಅನುಭವಿಸುವಾಗ ಅಮೃತದಂತೆಯೇ ಆಪ್ಯಾಯಮಾನವಾಗಿರುತ್ತದೆ. ಆದರೆ ಪರಿಣಾಮದಲ್ಲಿ ಈ ಪ್ರೀತಿ ಉಳಿಯುವುದಿಲ್ಲ; ವಿಷದಂತೆ ಆಗಿಬಿಡುತ್ತದೆ. ಭೋಗದಿಂದ ರೋಗ ತಪ್ಪಿದ್ದಲ್ಲ. ಎಷ್ಟು ಸುಖವನ್ನುಂಡರೂ ತೃಪ್ತಿಯೆಂಬುದಿದೆಯೆ? ಬೆಂಕಿ ಎಷ್ಟು ಕಟ್ಟಿಗೆಯನ್ನೊಡ್ಡಿದರೂ ಸುಟ್ಟು ಇನ್ನೂ ಬೇಕೆಂದು ಹಾತೊರೆಯುವುದಿಲ್ಲವೆ? ಹಾಗೆ ಸುಖದ ಅನುಭವದ ಬೆನ್ನಲ್ಲೇ ಬಯಕೆಯಿರುತ್ತದೆ. ಆತಂಕವೂ ತೋರಿಕೊಳ್ಳುವುದು ಸಹಜ. ಇದು ರಾಜಸಸುಖದ ಸ್ವರೂಪ.

(16)

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯಪ್ರಮಾದೋತ್ಥಂ ತತ್ ತಾಮಸಮುದಾಹೃತಂ ॥

(18,39)

ತಾಮಸಸುಖವು ಇನ್ನೂ ವಿಲಕ್ಷಣವಾದುದು. ಅದು ಮೊದಲಾಗುವಾಗಲೂ ಎಚ್ಚರ ತಪ್ಪಿಸುತ್ತದೆ; ಕಡೆಯಲ್ಲೂ ಎಚ್ಚರ ತಪ್ಪಿಸುತ್ತದೆ. ಮೊದಲಿಂದ ಕಡೆಯವರೆಗೂ ಮನುಷ್ಯನ ಬುದ್ಧಿಯನ್ನು ಮಂಕುಕವಿಸುತ್ತದೆ. ಯಾವುದು ಹಿತ; ಯಾವುದು ಅಹಿತ; ಎಷ್ಟು ಮಿತ, ಎಷ್ಟು ಅತಿ ಎಂಬ ವಿವೇಕವೇ ತಾಮಸ ಗುಣವುಳ್ಳವರಿಗೆ ಇರುವುದಿಲ್ಲ.

ಈ ತಾಮಸಸುಖ ಎಲ್ಲಿಂದ ಒದಗಿಬರುತ್ತದೆ? ನಿದ್ರೆಯಿಂದ, ಆಲಸ್ಯದಿಂದ, ಪ್ರಮಾದದಿಂದ. ನಿದ್ರೆಯಲ್ಲಿ ಇಂದ್ರಿಯಗಳೂ ಮನಸ್ಸೂ ಕೆಲಸಮಾಡುವುದಿಲ್ಲ; ಹೊರಗೂ ಕತ್ತಲೆ ಒಳಗೂ ಕತ್ತಲೆ. ಯಾವ ತಿಳಿವಳಿಕೆಯೂ ಇಲ್ಲ, ಯಾವ ಕೆಲಸವೂ ಇಲ್ಲ. ತಾಮಸಗುಣವಿದ್ದವರಿಗೆ ಇದೇ ಸುಖ. ಆಲಸ್ಯವೆಂದರೆ ಸೋಮಾರಿತನ, ಅಲಸಿಕೆ. ಶರೀರದಲ್ಲಿ ಲವಲವಿಕೆಯಲ್ಲದಿರುವುದು, ಇಂದ್ರಿಯಗಳು ಮಂಕಾಗಿರುವುದು, ಮನಸ್ಸು ಮುದುಡಿಕೊಂಡಿರುವುದು. ಪ್ರಮಾದವೆಂದರೆ ಇಲ್ಲಿ ಅಧರ್ಮದಲ್ಲಿಯೇ ಆಸಕ್ತಿ. ಇವುಗಳಿಂದ ಬುದ್ಧಿಯು ಮೋಹಗೊಂಡಿತು. ನಿದ್ರೆಯೇ ಸುಖ, ಆಲಸ್ಯದಿಂದ ಸುಖ, ಅಧರ್ಮದಲ್ಲಿ ಸುಖ ಎಂಬುದು ತಾಮಸ ಬಗೆಯ ಸುಖ.



(17)

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೆ ಭಯಾಭಯೆ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ॥

(18,30)

ಇನ್ನು ಬುದ್ಧಿಯ ವಿಚಾರದಲ್ಲಿಯೂ ಸಾತ್ತ್ವಿಕ, ರಾಜಸ, ತಾಮಸ ಎಂಬ ವಿಂಗಡಣೆ ಸಾಧ್ಯ. ಬುದ್ಧಿಯೆಂದರೆ ಯಾವುದರಿಂದ ನಾವು ಎಲ್ಲವನ್ನೂ ತಿಳಿಯುವೆವೋ ಅದು; ಅದು ವಿವೇಚನೆಯ ರೂಪದ್ದು. ಅದರಿಂದ ಉಂಟಾಗುವುದು ಜ್ಞಾನ. ಇದನ್ನು ಮನೀಷೆ, ಧೀ, ಧಿಷಣೆ, ಪ್ರಜ್ಞೆ, ಪ್ರೇಕ್ಷಾ (ಕಂಡುಕೊಳ್ಳುವುದು), ಜ್ಞಪ್ತಿ, ಚಿತ್, ಸಂವಿತ್, ಪ್ರತಿಪತ್ತಿ, ಮನನ ಎಂಬೆಲ್ಲ ಮಾತುಗಳಿಂದ ಗುರುತಿಸುತ್ತಾರೆ. ತನಗೆ ಬೇಕಾದುದು (ಇಷ್ಟ), ಬೇಡವಾದುದು (ಅನಿಷ್ಟ), ಇವನ್ನು ತಿಳಿಯುವುದು, ತನ್ನನ್ನು ತಾನೆ ನೀಗಿಸಿಕೊಳ್ಳುವುದು (ವಿಪತ್ತಿ, ನಿದ್ರೆ), ಉತ್ಸಾಹಗೊಳ್ಳುವುದು (ವ್ಯವಸಾಯ), ಏಕಾಗ್ರತೆಯಿಂದ ಇರುವುದು (ಸಮಾಧಿ, ಚಿತ್ತಸ್ಥೈರ್ಯ ಅಥವಾ ಚಿತ್ತವೃತ್ತಿ ನಿರೋಧ), ಅದೋ ಇದೋ, ಹಾಗೋ ಹೀಗೋ ಎಂದು ಸಂದೇಹ ಪಡುವುದು (ಸಂಶಯ), ಪ್ರತ್ಯಕ್ಷ-ಅನುಮಾನಗಳನ್ನು ಬಳಸಿಕೊಂಡು ಸರಿಯಾಗಿ ತಿಳಿದುಕೊಳ್ಳುವುದು (ಪ್ರತಿಪತ್ತಿ) ಇವು ಬುದ್ಧಿಯ ಗುಣಗಳೆಂದು ಮಹಾಭಾರತದಲ್ಲಿ (ಮೋಕ್ಷಧರ್ಮಪರ್ವ) ಹೇಳಿದೆ. ಗೀತೆಯು ಬುದ್ಧಿಯನ್ನು ಶರೀರವೆಂಬ ರಥದ ಸಾರಥಿಯೆಂದು ಕರೆದಿದೆ. ಇಂದ್ರಿಯಗಳನ್ನು ಮೀರಿದುದು ಮನಸ್ಸು; ಮನಸ್ಸಿಲ್ಲದೆ ಇಂದ್ರಿಯಗಳ ಕೆಲಸ ಕೈಗೂಡಲಾರದು. ಮನಸ್ಸಿಗಿಂತ ಮಿಗಿಲಾದುದು ಬುದ್ಧಿ; ಬುದ್ಧಿಯ ಬೆಳಕಿನಲ್ಲಿಯೇ ಮನಸ್ಸು ಕೆಲಸಮಾಡಬೇಕು. ಆದರೆ ಬುದ್ಧಿಯನ್ನು ಸತ್ತ್ವ, ರಜಸ್ಸು, ತಮಸ್ಸು ಎಂಬ ಗುಣಗಳು ಆಳುತ್ತವೆ. ಒಂದೊಂದು ಗುಣ ಆಳುವಾಗ ಬುದ್ಧಿಯ ಬಣ್ಣ ಬದಲಾಗುತ್ತದೆ.

ಸತ್ತ್ವಗುಣವು ಬುದ್ಧಿಯ ಮೇಲೆ ಒಡೆತನವನ್ನು ಇರಿಸಿಕೊಂಡಾಗ ಯಾವುದರಲ್ಲಿ ತೊಡಗಬೇಕು, ಯಾವುದರಿಂದ ಹಿಂಜರಿಯಬೇಕು, ಯಾವುದು ಮಾಡತಕ್ಕ ಕೆಲಸ, ಯಾವುದು ಮಾಡಬಾರದ್ದು, ಯಾವುದಕ್ಕೆ ಹೆದರಬೇಕು, ಯಾವುದರಿಂದ ಹೆದರುವ ಕಾರಣವಿಲ್ಲ, ಯಾವುದು ಬಂಧಕವಾದೀತು, ಯಾವುದು ಮೋಚಕವಾದೀತು ಎಂಬುದನ್ನು ಬುದ್ಧಿಯು ಸರಿಯಾಗಿ ಅರಿತುಕೊಳ್ಳುತ್ತದೆ.

ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳಿವೆಯಲ್ಲ? ಅವನ್ನು ಶಾಸ್ತ್ರವಿಹಿತವಾದ, ಸಮಾಜಸಮ್ಮತವಾದ ರೀತಿಯಲ್ಲಿ ಪಡೆದುಕೊಳ್ಳಲು ತೊಡಗುವುದು ಪ್ರವೃತ್ತಿ. ಇದೇ ಧರ್ಮವೆನಿಸಿಕೊಳ್ಳುತ್ತದೆ. ಅದರಿಂದ ನಿವೃತ್ತಿ; ಎಂದರೆ ಅಧರ್ಮದಿಂದ

ನಿಷಿದ್ಧವಾದದ್ದರಿಂದ ನಿವೃತ್ತಿ, ಧರ್ಮದಲ್ಲಿ ವಿಹಿತವಾದುದರಲ್ಲಿ ಪ್ರವೃತ್ತಿ. ಹಾಗೆಯೆ ಸಂಸಾರದಲ್ಲಿ ಕಾಲುಜಾರದಂತೆ, ತನ್ನ ಹೊಣೆಯನ್ನು ಹೊರುವಂತೆ, ತನ್ನ ಮತ್ತು ಇತರರ ಹಿತವನ್ನು ಸಾಧಿಸುವಂತೆ ಮಾಡುವ ಕೆಲಸಗಳು ಕಾರ್ಯ ಎಂದರೆ ಕರ್ತವ್ಯ. ಹಾಗೆಯೇ ಕಾಲು ಜಾರುವಂತೆ, ಕುಸಿದು ಬೀಳುವಂತೆ ಮಾಡುವ ಕೆಲಸಗಳೂ ಇರುತ್ತವೆ; ಅವನ್ನು ಮಾಡಬಾರದು. ಇದು ಅಕಾರ್ಯ. ಇಷ್ಟಸಾಧನೆ, ಅನಿಷ್ಟನಿವೃತ್ತಿ ಎಂಬೆರಡೂ ಗುರಿಗಳನ್ನು ಬುದ್ಧಿ ಸಾಧಿಸಬೇಕು. ಇದು ವೈದಿಕವೆಂಬಂಥ (ಅಗ್ನಿಹೋತ್ರ, ಹೋಮ, ಹವನ, ಯಜ್ಞ ಇತ್ಯಾದಿ) ವಿಧಿಗಳಿಗೂ ಅನ್ವಯಿಸುತ್ತದೆ; ಲೌಕಿಕವಾದ ಕ್ರಿಯೆಗಳಿಗೂ (ದ್ರವ್ಯಾರ್ಜನೆ, ಗೃಹನಿರ್ಮಾಣ, ವ್ಯಾಪಾರ, ಉದ್ಯೋಗ, ಕುಟುಂಬಭರಣ ಇತ್ಯಾದಿ) ಅನ್ವಯಿಸುತ್ತದೆ.

ಕಾರ್ಯಾಕಾರ್ಯಗಳಿಂದಾಗಿ ಭಯಾಭಯಗಳು ಒದಗುತ್ತವೆ. ಕಾರ್ಯದಿಂದ ಅಭಯ; ಮಾಡಬೇಕಾದದ್ದನ್ನು ಮಾಡಿದಾಗ ಭಯವೆಲ್ಲಿಯದು? ಮಾಡಬೇಕಾದದನ್ನು ಮಾಡದೆ ಇರುವುದೂ ಅಕಾರ್ಯವೆ, ಮಾಡಬಾರದ್ದನ್ನು ಮಾಡುವುದೂ ಅಕಾರ್ಯವೇ. ಅಕಾರ್ಯದಿಂದ ಭಯ ಇದ್ದದ್ದೇ. ಕೆಡುಕು ಯಾವಾಗ ತಟ್ಟುವುದೋ, ಯಾವ ರೂಪದಲ್ಲಿ ಬರುವುದೋ, ಅದರ ಪರಿಣಾಮ ಏನೋ ಎಂಬ ಭಯ. ಭಯವನ್ನು ಸಂಸಾರವೆಂದೂ ಅಭಯವನ್ನು ಕೆಲವರು ಮೋಕ್ಷವೆಂದೂ ನಿರ್ದೇಶಿಸುವುದುಂಟು. ಆದರೆ ಮುಂದಿನ ಜೋಡಿಯೇ ಬಂಧ-ಮೋಕ್ಷ. ಬಂಧವೆಂದರೆ ಸಂಸಾರದ ಬಂಧನವೇ. ಅವಿದ್ಯೆಗೆ ಒಳಗಾಗಿ, ಆತ್ಮನನ್ನು ಅರಿಯದೆ, ಶರೀರೇಂದ್ರಿಯಮನಸ್ಸುಗಳೇ ತಾನೆಂದು ತಿಳಿದು, ಪ್ರಾಪಂಚಿಕ ವಸ್ತುಗಳು ತನ್ನವೆಂದು ಬಗೆದು, ತೊಳಲಾಡುವುದು ಬಂಧನ. ಬುದ್ಧಿಯ ಬಲದಿಂದ ಬಂಧನದ ಕಾರಣವನ್ನೂ ಸ್ವರೂಪವನ್ನೂ ತಿಳಿದು, ಬಂಧನದಿಂದ ಬಿಡುಗಡೆ ಹೊಂದುವುದು ಹೇಗೆಂಬುದನ್ನು ತಿಳಿಯಬಹುದು. ಇದು ಮೋಕ್ಷೋಪಾಯದ ಅರಿವು.

ಹೀಗೆ ಸಾತ್ತ್ವಿಕವಾದ ಬುದ್ಧಿ ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸುತ್ತದೆ. ಮನುಷ್ಯನಿಗೆ ಬೇಕಾದ ಲೌಕಿಕಸುಖಸಂಪತ್ತು (ಅಭ್ಯುದಯ) ಮತ್ತು ಪಾರಮಾರ್ಥಿಕಹಿತ (ನಿಃಶ್ರೇಯಸ) ಎರಡನ್ನೂ ಕೈಗೂಡಿಸುತ್ತದೆ.

(18)

ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥

(18,31)

ರಜಸ್ಸು ಹೆಚ್ಚಾಗಿರುವ ಬುದ್ಧಿಯಿಂದಾಗಿ ಮೇಲೆ ಹೇಳಿದ ಧರ್ಮ, ಅಧರ್ಮ, ಕಾರ್ಯ, ಅಕಾರ್ಯಗಳ ವಿಚಾರವಾಗಿ ಗೊಂದಲವುಂಟಾಗುತ್ತದೆ. ಇದ್ದದ್ದು ಇದ್ದಂತೆ ತಿಳಿಯುವುದಿಲ್ಲ; ಹೀಗೋ ಹಾಗೋ ಎಂಬ ಸಂಶಯವೇಳುತ್ತದೆ. ಯಾವುದು ಧರ್ಮ, ಯಾವುದು ಅಧರ್ಮ, ಏನನ್ನು ಮಾಡಬೇಕು, ಏನನ್ನು ಬಿಡಬೇಕು ಎಂದು ತಿಳಿಯದೆ ಪೇಚಾಡುವಂತಾಗುತ್ತದೆ. ಅರ್ಜುನನಿಗೆ ಇದ್ದದ್ದು ರಾಜಸ ಬುದ್ಧಿಯೇ. ಆದರಿಂದಲೇ ಅವನು ಧರ್ಮಸಮ್ಮೂಢನಾದದ್ದು. ಅವನು ಅನುಭವಿಸಿದ ವಿಷಾದಕ್ಕೆ ರಾಜಸಬುದ್ಧಿಯೇ ಕಾರಣ. ಸತ್ತ್ವದ ಉತ್ಕರ್ಷೆಯಿರುವಾಗ ಮನಸ್ಸಿನಲ್ಲಿ ಗೊಂದಲವಿರುವುದಿಲ್ಲ, ವಿಷಾದವೂ ಇರುವುದಿಲ್ಲ. ತಾಮಸ ಸ್ವಭಾವವಿದ್ದರಂತೂ ಧರ್ಮದ ಸೊಲ್ಲೇ ಇಲ್ಲ, ಅದರ ವಿಚಾರವಾಗಿ ಕುತೂಹಲವಾಗಲಿ ಇರಲಾರದು. ಸಾತ್ತ್ವಿಕರಿಗೆ ಉಪದೇಶದ ಅಗತ್ಯವಿಲ್ಲ; ತಾಮಸರಿಗೆ ಉಪದೇಶದಿಂದ ಪ್ರಯೋಜನವಿಲ್ಲ. ಅರ್ಜುನನ ಸ್ವಭಾವ ರಾಜಸವಾಗಿದ್ದುದರಿಂದ ಸತ್ತ್ವದ ಕಡೆಗಾಗಲಿ ತಮಸ್ಸಿನ ಕಡೆಗಾಗಲಿ ಒಲಿಯುವುದು ಸಾಧ್ಯವಿದ್ದಿತು. ಸತ್ತ್ವದ ಕಡೆಗೇ ತಿರುಗಿಸಬೇಕೆಂಬುದು ಕೃಷ್ಣನ ಉದ್ದೇಶ.

(19)

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾಽವೃತಾ ।
ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥

(18,32)

ತಾಮಸಗುಣವು ಬುದ್ಧಿಯನ್ನು ವಶಮಾಡಿಕೊಂಡಾಗ ಹೇಗಿರುತ್ತದೆ? ತಮಸ್ಸೆಂದರೆ ಕವಿಯುವ ಕತ್ತಲೆ; ಮುಸುಕುವ ಮಂಜು. ಅದು ಬಂದು ಮೇಲೆ ಮೂಡಿಕೊಂಡಾಗ, ಬುದ್ಧಿಯು ತನಗೆ ಸಹಜವಾದ ಕೆಲಸವನ್ನು ಹೇಗೆ ತಾನೆ ಮಾಡೀತು? ಬುದ್ಧಿಯ ಬೆಳಕೇ ಇರುವುದಿಲ್ಲವಲ್ಲ? ಸಾಮಾನ್ಯವಾಗಿ ಜನರ ಪರಿಸ್ಥಿತಿ ಹೀಗೆಯೆ ಇರುತ್ತದೆ. ಹೊರಗಣ ವಿಷಯಗಳಿಗೇ ಒಲಿದ ಮನಸ್ಸು ಬುದ್ಧಿಗೆ ಒದಗಿಸುವುದು ವಿಪರೀತವಾದ ನೋಟವನ್ನೇ.

ವಿಪರೀತವೆಂದರೆ ಸರಿಯಲ್ಲದುದು, ದಿಟದಿಂದ ದೂರವಾದುದು, ತಿರುಗುಮುರುಗಾಗಿರುವುದು. ಶಾಸ್ತ್ರವಾಗಲಿ, ಹಿರಿಯರಾಗಲಿ, ಹಿತೈಷಿಗಳಾಗಲಿ ಯಾವುದನ್ನು ಅಧರ್ಮವೆಂದೂ ಮಾಡಬಾರದ್ದೆಂದೂ ಹೇಳುವರೋ ಈ ಬುದ್ಧಿಯುಳ್ಳವರು ಅದನ್ನೆ ಧರ್ಮವೆಂದು ಬಗೆಯುತ್ತಾರೆ, ಅದನ್ನೆ ಮಾಡುತ್ತಾರೆ. ತಮೋಗುಣವು ಅವರ ಬುದ್ಧಿಯನ್ನು ಸುತ್ತರಿದು ಮರೆಮಾಚಿಬಿಟ್ಟಿರುವುದು ಕಾರಣ; ತಮಸ್ಸಿನ ಗುಣವೇ ಇದು: ಇಲ್ಲದಿರುವುದನ್ನು ಇದೆಯೆಂದೂ, ತಪ್ಪಾದುದನ್ನು ಸರಿಯೆಂದೂ, ಇರುವುದನ್ನು ಇಲ್ಲವೆಂದೂ, ಸರಿಯಾದುದನ್ನು ತಪ್ಪೆಂದೂ, ಗುಣವನ್ನು ದೋಷವೆಂದೂ, ದೋಷವನ್ನು ಗುಣವೆಂದೂ ಬಗೆಯುವುದು.

(20)

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥

(18,26)

ಕೆಲಸ ಮಾಡುವವನು ಕರ್ತೃ (ಅಥವಾ ಕರ್ತಾ) ಎನಿಸಿಕೊಳ್ಳುತ್ತಾನೆ. ಇವನು ಸತ್ತ್ವಗುಣದ ವಶವಾಗಿರಬಹುದು; ರಾಜಸಗುಣ ಇವನನ್ನು ಆಳುತ್ತಿರಬಹುದು; ಇಲ್ಲವೆ, ತಮಸ್ಸು ಇವನನ್ನು ಮುಸುಕಿರಬಹುದು. ಇವನ ಕೆಲಸ ಲೌಕಿಕವಾಗಿರಲಿ ವೈದಿಕವಾಗಿರಲಿ ಈ ಗುಣಗಳ ಪ್ರಭಾವ ಕೆಲಸ ಮಾಡುವವನ ಸಂವಿಧಾನ, ಸ್ವರೂಪ, ಸ್ವಭಾವಗಳ ಮೇಲೆ ಕಾಣಿಸಿಕೊಳ್ಳುತ್ತದೆ.

ಸತ್ತ್ವಗುಣವೇ ಹೆಚ್ಚಾಗಿರುವ ಕರ್ತೃವು ಕೆಲಸಮಾಡುವಾಗ 'ಮುಕ್ತಸಂಗ' ನಾಗಿರುತ್ತಾನೆ. ಎಂದರೆ ಸಂಗದಿಂದ ಬಿಡಲ್ಪಟ್ಟವನಾಗಿರುತ್ತಾನೆ. ಸಂಗವೆಂದರೆ ಕೆಲಸದ ಪ್ರಯೋಜನದಲ್ಲೇ ನೆಟ್ಟ ಮನಸ್ಸು, ತಾನು ಮಾಡುತ್ತಿದ್ದೇನೆಂಬ ಅನಿಸಿಕೆ. ಮೊದಲನೆಯದು ಫಲಾಭಿಸಂಧಿ; ಎರಡನೆಯದು ಕರ್ತೃತ್ವಾಭಿಮಾನ. ಎರಡನ್ನೂ ಬಿಟ್ಟವನು ಮುಕ್ತಸಂಗ. ತಾನು ಮಾಡಬೇಕಾದ ಕೆಲಸ ಎಂಬಷ್ಟು ಕಾರಣದಿಂದ ಮಾಡುತ್ತಾನೆ; ಫಲದ ಕಡೆ ಗಮನ ಕಡಮೆ. ಫಲಕ್ಕಾಗಿ ಕೆಲಸ ಮಾಡುವುದಲ್ಲ; ಕೆಲಸದಿಂದ ಫಲ ತಾನಾಗಿ ಬರಬೇಕು.

ಮತ್ತೆ ಅವನು 'ಅನಹಂವಾದಿ' ಯಾಗಿರುತ್ತಾನೆ. 'ಅಹಂ' ಎಂದರೆ ನಾನು; ನಾನು ಎಂಬ ಎಣಿಕೆ 'ಅಹಂವಾದ'. ಕೆಲಸ ಮಾಡುವಾಗ ತಾನೇ ಸಮರ್ಥ, ಗುಣವಂತ, ಯೋಗ್ಯ ಎಂಬ ಜಂಬವಿದ್ದರೆ ಅವನು ಅಹಂವಾದಿ; ಇದಿಲ್ಲದಿದ್ದರೆ 'ಅನಹಂವಾದಿ'. ಸ್ವಾಭಿಮಾನ

ಮಿತಿಮೀರಿದಾಗ ಗರ್ವವೆನಿಸಿಕೊಳ್ಳುತ್ತದೆ; ಇದೇ ಅಹಂವಾದ; ತನ್ನ ಹೆಗ್ಗಳಿಕೆಯನ್ನೇ ಎಲ್ಲರೆದುರು ಹೇಳಿಕೊಳ್ಳುತ್ತಿರುವುದು, ಎಲ್ಲರೂ ತನ್ನನ್ನು ಮೆಚ್ಚಿಕೊಳ್ಳಲೆಂದು ಹಾತೊರೆಯುತ್ತಿರುವುದು. ಇದು ಸಾತ್ತ್ವಿಕಗುಣವಲ್ಲ.

ಸಾತ್ತ್ವಿಕನಾದ ಕರ್ತೃವಿಗೆ ಧೃತಿ ಇರುತ್ತದೆ; ಅದನ್ನು ಧಾರಣೆಯೆನ್ನುತ್ತಾರೆ. ಎಂದರೆ ತನ್ನ ಕೆಲಸದ ನಡುವೆ ಅಡ್ಡಿ ಆತಂಕಗಳು ಬಂದರೂ, ದುಃಖ ಬಂದಡರಿದರೂ, ಅವನ್ನು ಧೈರ್ಯದಿಂದ ತಾಳಿಕೊಂಡು, ಹಿಡಿದ ಕೆಲಸವನ್ನು ಬಿಡದೆ ಮುಗಿಸುತ್ತಾನೆ. ಆವನಿಗೆ ಉತ್ಸಾಹವೂ ಇರುತ್ತದೆ. ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮುಗಿಸುವ ತವಕ, ಕೆಲಸ ಮಾಡುವಾಗ ಲವಲವಿಕೆ ಉತ್ಸಾಹದ ಲಕ್ಷಣಗಳು (ಚಿಕೀರ್ಷಾವೇಗ).

ಕೆಲಸ ಮಾಡುವವನನ್ನು ಸಾಮಾನ್ಯವಾಗಿ ಕಾಡುವ ಚಿಂತೆ, ಕೆಲಸ ಕೈಗೂಡುವುದೋ ಇಲ್ಲವೋ ಎಂಬುದು. ಕೈಗೂಡಿದರೆ ಸಿದ್ಧಿ, ಕೈಗೂಡದಿದ್ದರೆ ಅಸಿದ್ಧಿ. ಸಿದ್ಧಿಯಿಂದ ಸಮಾಧಾನ, ಸಂತೋಷ; ಅಸಿದ್ಧಿಯಿಂದ ನಿರಾಶೆ, ದುಗುಡ, ಬೇಗುದಿ. ಇವೆಲ್ಲ ವಿಕಾರಗಳು. ಸತ್ತ್ವಗುಣವೇ ಮೇಲಿರುವ ಕರ್ತೃವು ಕೆಲಸ ಮಾಡುವುದನ್ನು ಬಿಡುವುದಿಲ್ಲ ಮಾತ್ರವಲ್ಲ, ಕೆಲಸ ಕೈಗೂಡಲಿ ಬಿಡಲಿ ಅದರಿಂದ ಅವನ ಮನಸ್ಸು ವಿಕಾರಕ್ಕೆ ಒಳಗಾಗುವುದಿಲ್ಲ. ಎಂದಿನಂತೆಯೇ ನೆಮ್ಮದಿಯಿಂದಿರುತ್ತಾನೆ. ಕೆಲಸ ತನ್ನದು; ಅದರ ಸಿದ್ಧಿಯ, ಅಸಿದ್ಧಿಯ ಗೊಡವೆ ತನಗೇಕೆ? ಮಾಡಬೇಕಾದುದನ್ನು ತಾನು ಪ್ರಾಮಾಣಿಕವಾಗಿ ಮಾಡಿಬಿಟ್ಟರಾಯಿತು. ಕೆಲಸ ಕೈಗೂಡಲು ಐದು ಕಾರಣಗಳಿವೆಯಲ್ಲವೆ (18, 14)? ಫಲಾಫಲಗಳು ಈಶ್ವರೇಚ್ಛೆಯೆಂದಾದರೂ ಹೇಳಿ. ತನಗಂತೂ ಸಿದ್ಧಿಯಿಂದ ಸಂತೋಷವೂ ಇಲ್ಲ. ಅಸಿದ್ಧಿಯಿಂದ ವಿಷಾದವೂ ಇಲ್ಲ.

(21)

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥

(18,27)

ರಾಜಸಗುಣವೇ ಹೆಚ್ಚಾಗಿರುವ ಕರ್ತೃವು ಹೇಗಿರುತ್ತಾನೆ? ಅವನು 'ರಾಗಿ', ಎಂದರೆ ರಾಗವುಳ್ಳವನು. ಇಂದ್ರಿಯಗಳಿಂದ ಸುಖವನ್ನನುಭವಿಸಬೇಕೆಂಬ ತೀವ್ರವಾದ ಬಯಕೆ ರಾಗ ಅಥವಾ ಕಾಮ. ಅವನು ಕೆಲಸಮಾಡಲು ತೊಡಗುವುದೇ ಅದರಿಂದ ಒದಗಿಬರುವ ಸುಖವನ್ನನುಭವಿಸಲು; ಫಲಾಸಕ್ತಿಯಿಲ್ಲದೆ ಅವನು ಕೆಲಸಮಾಡುವುದೇ ಇಲ್ಲ. ಹೀಗಾಗಿ ಅವನು 'ಕರ್ಮಫಲ ಪ್ರೇಪ್ಸು' (ಕೆಲಸದ ಫಲವನ್ನು ಪಡೆದುಕೊಳ್ಳಲು ಕಾತರನಾಗಿರುವವನು). ಅಷ್ಟುಮಾತ್ರವಲ್ಲ, ಕೆಲಸ ಕಡಮೆಯಿದ್ದು ಫಲ ಹೆಚ್ಚಾಗಿದ್ದರೆ ಅವನಿಗೆ ಸಂತೋಷವೇ. ಅಲ್ಪವಾದ ಶ್ರಮ; ಬಹುವಾದ ಫಲ. ಹೀಗೆ ಆಲೋಚಿಸುವವನು 'ಲುಬ್ಧ'; ಅವನದ್ದು ಅತ್ಯಾಶೆ. ಈ ಮಾತಿನಲ್ಲಿ ಇನ್ನೂ ಒಂದು ಧ್ವನಿಯಿದೆ. ಅವನು ಲೋಭಿ. ಬೇರೆಯವರ ದ್ರವ್ಯವನ್ನು ಬಯಸುತ್ತಾನೆ, ತನ್ನದೇ ದ್ರವ್ಯವನ್ನು ಅಗತ್ಯವಾದುದಕ್ಕೆ ವೆಚ್ಚಮಾಡಲೂ ಹಿಂದೆಮುಂದೆ ನೋಡುತ್ತಾನೆ. ಬೇರೆಯವರ ಹಣವಾದರೆ ಇವನು ಪ್ರಯೋಜನದ ಕಡೆ ಗಮನವಿಡದೆ ಕೆಲಸಮಾಡಿಯಾನು, ತನ್ನದೇ ಹಣವಾದರೆ ಪ್ರಯೋಜನದ ಕಡೆಯೇ ಕಣ್ಣು.

ಇನ್ನು ತಾನು ಕೆಲಸಮಾಡುವಾಗ ಯಾರಿಗೆ ಏನು ತೊಂದರೆಯಾದೀತು ಎಂಬ ಎಣಿಕೆ ಇವನಿಗಿರದು. ಇತರರಿಗೆ ಹಿಂಸೆಯಾದರೆ ಇವನಿಗೇನು ಅಳುಕಿಲ್ಲ. ಮೇಲಾಗಿ, ಬೇರೆಯವರಿಗೆ ಕಷ್ಟಕೊಟ್ಟು ತನ್ನ ಕೆಲಸವನ್ನು ಮಾಡಿಕೊಳ್ಳುವುದು ಇವನಿಗೆ ವಾಡಿಕೆಯೇ. ಇತರರಿಗೆ ಶ್ರಮವಾದರೆ ತನಗೆ ಸುಖವಲ್ಲವೆ? ಇದರ ಜೊತೆಗೆ ಅವನು 'ಅಶುಚಿ'ಯೂ ಹೌದು. ಹಣದ ವಿಚಾರದಲ್ಲಿ, ನಡವಳಿಕೆಯ ವಿಚಾರದಲ್ಲಿ ಇವನು ಶುದ್ಧಿಗೆ ಅಷ್ಟು ಬೆಲೆ ಕಟ್ಟುವವನಲ್ಲ. ಹಣ ಬಂದರಾಯಿತು, ಹೇಗೆ ಬಂದಿತೆಂಬುದು ಮುಖ್ಯವಲ್ಲ. ಗುರಿ ಮುಟ್ಟಬೇಕಾದರೆ ಯಾವುದಾದರೂ ದಾರಿಯಾದೀತು! ದಾರಿ ಶುದ್ಧವಾಗಿದೆಯೆ ಎಂದು ನೋಡುತ್ತ ಹೊರಟರೆ ಗುರಿ ಮುಟ್ಟುವುದೇ ಇಲ್ಲ, ಎಂದಿವನ ಎಣಿಕೆ.

ತನಗೆ ಬೇಕಾದದ್ದು ದೊರೆತಾಗ ಸಂತೋಷ; ದೊರೆಯದಿದ್ದಾಗ ದುಃಖ. ಇದ್ದು ಪ್ರಿಯಾವಾದದ್ದು ದೂರವಾದರೆ ದುಗುಡ; ಇಲ್ಲದ್ದು ಅಪ್ರಿಯವಾದದ್ದು ಹತ್ತಿರ ಬಂದರೆ ಆಗಲೂ ದುಗುಡ. ಸಂತೋಷವಾದರೆ ಕುಣಿದು ಕುಪ್ಪಳಿಸುವನು; ದುಃಖವಾದರೆ ಅವನ ಅಳಲು ಊರಗಲ ಹರಡಿಕೊಳ್ಳುವುದು. ಇದು ರಾಜಸ ಗುಣದ ಕರ್ತೃವಿನ ಸ್ಥಿತಿ.

(22)

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಷ್ಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥

(18,28)

ತಾಮಸ ಕರ್ತೃವಿನ ರೀತಿನೀತಿಗಳು ಈ ಶ್ಲೋಕದಲ್ಲಿ ಬರುತ್ತವೆ. ಅವನು 'ಅಯುಕ್ತ' ಎಂದರೆ ಯೋಗವಿಲ್ಲದವನು; ಸಮಾಹಿತನಲ್ಲದವನು. ತಾನು ಮಾಡಬೇಕಾದ ಕೆಲಸಗಳನ್ನು, ವಿಷಯಸುಖದಲ್ಲಿ ಮೈಮರೆತು, ಕೈಬಿಡುವನು. ಹಿಂದೆ ಮುಂದೆ ನೋಡಿಕೊಂಡು, ಆಲೋಚನೆ ಮಾಡಿ ಕೆಲಸಮಾಡುವುದು ಅವನಿಂದ ಸಾಧ್ಯವಿಲ್ಲ. ಅವನು 'ಪ್ರಾಕೃತ'. ಪ್ರಕೃತಿಯೆಂದರೆ ಸ್ವಭಾವ; ಸ್ವಭಾವದಿಂದ ಸಿದ್ಧವಾದುದನ್ನೆ ಮಾಡಿಯಾನು. ಸಂಸ್ಕಾರದ ಲಾಭ ಅವನ ಪಾಲಿಗಿಲ್ಲ; ವಿದ್ಯೆಯನ್ನು ಕಲಿಯುವ ಕಷ್ಟ ಅವನಿಗೆ ಬೇಡ. ಹುಟ್ಟಿದಂತೆಯೆ ಬೆಳೆದುಬಿಟ್ಟವನು. ವಯಸ್ಸಾದಂತೆ ಬುದ್ಧಿಯೇನು ಬಲಿಯುವುದಿಲ್ಲ. ಹೀಗಾದುದರಿಂದ 'ಸ್ತಬ್ಧ'; ಕಟ್ಟಿಗೆಯಂತೆ ಸೆಟೆದು ನಿಲ್ಲುವವ. ಯಾರೆದುರೂ ವಿನಯದಿಂದ ಬಾಗುವವನಲ್ಲ. ಯಾರೆಷ್ಟು ಹೇಳಿದರೂ ಕೆಲಸವನ್ನು ಮೊದಲು ಮಾಡುವುದೇ ಇಲ್ಲ; ಇತರರ ಮಾತು ಕೇಳಿಬಿಟ್ಟರೆ ಹೇಗೆ? ಇಷ್ಟರ ಮೇಲೆ, ಅವನು 'ಶಠ'. ಅವನನ್ನು ನಂಬುವುದಾಗದು, ಹೇಳಿಕೇಳಿ ಅವನು ವಂಚಕ, ಮೋಸಗಾರ; ಧೂರ್ತ, ಕಪಟಿ.

ಅವನ ಕತೆ ಇಷ್ಟಕ್ಕೆ ಮುಗಿಯುವುದಿಲ್ಲ. ಅವನು 'ನೈಷ್ಕೃತಿಕ'; ಎಂದರೆ ಬೇರೆಯವರ ಬುಡವನ್ನೆ ಕತ್ತರಿಸುವ ಜಾಣತನ ಅವನದ್ದು. ಇತರರ ಕೆಲಸವನ್ನು ಕೆಡಿಸಲು ಏನು ಬೇಕೋ ಎಲ್ಲವನ್ನೂ ಮಾಡುವವ. ಯಾರನ್ನಾದರೂ ಸ್ವಾರ್ಥಕ್ಕೆ ಬಳಸಿಕೊಳ್ಳುವವ; ಬಳಸಿಕೊಂಡ ಮೇಲೆ ಅವರನ್ನು ತಿಪ್ಪೆಗೆ ಬಿಸಾಡುವವ. ಇಷ್ಟಾದರೂ, ತಾನಾದರೂ ಕೆಲಸ ಮಾಡುವವನೇ ಎಂದರೆ, ಅಲ್ಲ. 'ಅಲಸ', ಎಂದರೆ ಕೆಲಸಕ್ಕೆ ತೊಡಗುವುದೇ ಇಲ್ಲ; ಮೊದಲುಮಾಡಿದ ಕೆಲಸ ಮುಗಿಯುವುದೇ ಇಲ್ಲ. ಕೆಲಸಕ್ಕೂ ಅವನಿಗೂ ಎಣ್ಣೆ-ಸೀಗೇಕಾಯಿ ನಂಟು.

ವಿಷಾದದಲ್ಲಿ ಎಂದೂ ಮುಂದು. ಏನಾದರೂ ದುಗುಡವೇ, ಬೇಸರವೇ, ಬೇಸರಿಕೆಯೇ, ದುಮ್ಮಾನವೇ. ಯಾವುದೂ ಇವನನ್ನು ತೃಪ್ತಿಗೊಳಿಸಲಾರದು. ನೆಮ್ಮದಿಯೆಂಬುದು ಅವನ ಕನಸುಮನಸಿನಲ್ಲಿಯೂ ಇರದು. 'ದೀರ್ಘಸೂತ್ರೀ' ಎನ್ನುವ ಲಕ್ಷಣವೂ ತಾಮಸಕರ್ತೃವಿನದೇ. ಆ ಮಾತಿನ ಅರ್ಥ ಸರಳವಾಗಿಯೇ ಇದೆ. ಮಂದಸ್ವಭಾವದವನಾದ್ದರಿಂದ ಏನೊಂದು ಕೆಲಸವನ್ನು ಮಾಡಿದರೂ ಅತಿನಿದಾನವಾಗಿ

ಮಾಡುವವ; ಹಿಡಿದ ಕೆಲಸವನ್ನು ಮುಗಿಸಿಬಿಡಲು ಅವನಿಗೆ ಅಂಜಿಕೆ. ಏನೋ ಸಂದೇಹ, ಯಾವುದೋ ಅಳುಕು, ಕೆಲಸ ಮುಂದರಿಯುವುದೇ ಇಲ್ಲ. ಬೇರೆಯವರು ಒಂದು ದಿನದಲ್ಲಿ ಮಾಡಬಹುದಾದ ಕೆಲಸವನ್ನು ಅವನು ಒಂದು ತಿಂಗಳಾದರೂ ಮಾಡುತ್ತಲೆ ಇರುತ್ತಾನೆ. 'ದೀರ್ಘಸೂತ್ರ' ಎನ್ನುವ ಮಾತಿಗೆ ಇನ್ನೊಂದು ಅರ್ಥವೂ ಇದೆ, ಅದೂ ಇವನಿಗೆ ಒಪ್ಪುತ್ತದೆ. ಅವನು ಅನುಸರಿಸುವ ದಾರಿ ತುಂಬ ಬಳಸಿನದು, ನೇರವಾದುದಲ್ಲ. ಅವನ ಆಳ ಏನೆಂದು ಜನ ತಿಳಿಯಲಾರರು. ಎಲ್ಲಿ, ಯಾರಿಗೆ, ಯಾವಾಗ ಕತ್ತರಿಯಿಡುವನೋ ಅದರ ಸುಳಿವು ತಿಳಿಯುವುದಿಲ್ಲ. ಒಳಗೊಳಗೇ ಅವನು ಬೀರುವ ಬಲೆ ದೊಡ್ಡ ಹರವಿನದು; ಇದು ದೀರ್ಘಸೂತ್ರ.

(23)

ದಾತವ್ಯಮಿತಿ ಯದ್ದಾನಂ ದೀಯತೇऽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಂ ॥

(17,20)

ಇನ್ನು ದಾನದ ವಿಚಾರ ಹೇಳುತ್ತಾರೆ. ಇದರಲ್ಲೂ ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಬಗೆಗಳು. ದಾನವೆಂದರೆ 'ಸಂವಿಭಾಗ' ವೆಂಬರ್ಥವಿದೆ. ನಮ್ಮ ಸಂಪತ್ತನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ದಾನದ ಮೂಲಾರ್ಥ. ನಮ್ಮಲ್ಲಿರುವುದೆಲ್ಲ ನಮ್ಮ ಬಳಕೆಗೇ ಅಲ್ಲ; ನಮ್ಮ ಸುತ್ತ ಇರುವವರ ನೆರವಿಗೂ ಅದು ಬರಬೇಕು. ಉಳ್ಳವರು ಬಡವರಿಗೆ ದ್ರವ್ಯದಾನ ಮಾಡುತ್ತಾರೆ; ವಿದ್ಯಾವಂತರು ಅದಿಲ್ಲದವರಿಗೆ ವಿದ್ಯಾದಾನ ಮಾಡುತ್ತಾರೆ; ಆರೋಗ್ಯವಂತರು ರೋಗಿಗಳಿಗೆ ಉಪಚರಿಸಿ ಮದ್ದನ್ನು ಕೊಡುವುದು ಭೇಷಜದಾನ. ಹೀಗೆಯೇ ವಸ್ತ್ರದಾನ, ಭೂದಾನ, ಹಿರಣ್ಯದಾನ, ಗೋದಾನ ಮುಂತಾದುವು. ಯಾವುದೇ ದಾನವಾಗಲಿ, ಅದರಲ್ಲಿ ಮುಖ್ಯವಾದುದು ಪಾತ್ರಾಪಾತ್ರವಿವೇಕ; ಯಾರು ದಾನವನ್ನು ತೆಗೆದುಕೊಳ್ಳಲು ಯೋಗ್ಯತೆಯುಳ್ಳವರು. ಯಾರಿಗೆ ಈ ದಾನದ ಅಗತ್ಯವಿದೆ, ಯಾರು ಈ ದಾನದಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ ಎಂಬುದೇ ವಿವೇಚನೆ. ದಾನಕ್ಕೆ ಯೋಗ್ಯರಾದವರು ಪಾತ್ರರು; ಹಾಗಲ್ಲದವರು ಅಪಾತ್ರರು.

ಸಾತ್ತ್ವಿಕದಾನವೆನ್ನುವಾಗ, ದಾನಮಾಡುವವನು ದಾನಮಾಡುವ ನಿರ್ಧಾರವನ್ನು ಮಾಡಿ, ತುಂಬುಮನಸ್ಸಿನಿಂದ, ಶ್ರದ್ಧೆಯಿಂದ ದಾನಮಾಡುತ್ತಾನೆ. ಯಾರಿಗೆ? ಮುಂದೆ ತನಗೆ

ಏನೊಂದು ಉಪಕಾರ ಮಾಡಲೂ ಇವನಿಂದ ಸಾಧ್ಯವಿಲ್ಲ ಎಂಬುದನ್ನು ಮನವರಿಕೆಮಾಡಿಕೊಂಡು, ಅಂಥ ದೀನನಿಗೆ, ದುರ್ಬಲನಿಗೆ ದಾನಮಾಡುತ್ತಾನೆ. ದೇಶಕಾಲಗಳನ್ನು ನಿರೀಕ್ಷಿಸಿ ದಾನ ನಡೆಯುತ್ತದೆ. ಪುಣ್ಯ ಸ್ಥಳದಲ್ಲಿ ಮಾಡಿದ ದಾನ; ಗ್ರಹಣಕಾಲ, ಸಂಕ್ರಾಂತಿ, ಮಾಘಮಾಸ ಮುಂತಾದ ವೇಳೆ ಮಾಡಿದ ದಾನ ಪುಣ್ಯಪ್ರದವೆಂದು ನಂಬಿಕೆ.

ಪಾತ್ರರಿಗೆ ದಾನಮಾಡುವುದು ಇನ್ನೊಂದು ವಿವರ. ಈ ಮಾತು ಮೊದಲೆ ಬಂದಿತು. ಹಸಿದವನಿಗೆ ಅನ್ನ ಕೊಡಬೇಕು, ಬಾಯಾರಿದವನಿಗೆ ನೀರು ಕೊಡಬೇಕು, ಬಡವನಿಗೆ ಹಣ ಕೊಡಬೇಕು. ಇದು ಸರಿಯಾದ ಪಾತ್ರದಲ್ಲಿ ದಾನ. ಆದರೆ ಕುಡುಕನಾದವನಿಗೆ, ತುಡುಗನಿಗೆ, ಲಂಪಟನಿಗೆ ದಾನ ಮಾಡಿದರೆ ಅದು ವ್ಯರ್ಥವಾಗುತ್ತದೆ; ಏಕೆಂದರೆ ಅದು ಅಪಾತ್ರದಲ್ಲಿ ದಾನ. 'ಕೇವಲ ವಿದ್ಯೆಯಿಂದಾಗಲಿ, ಬರಿಯ ಹುಟ್ಟಿನಿಂದಾಗಲಿ (ಜಾತಿಯಿಂದ) ಯಾರಿಗೂ ಪಾತ್ರತೆ ಬರುವುದಿಲ್ಲ; ಪಾತ್ರತೆ ಬರುವುದು ನಡತೆಯಿಂದ ಮಾತ್ರ' ಎಂದು ಯಾಜ್ಞವಲ್ಕ್ಯಸ್ಮೃತಿಯ (1,200) ಮಾತಿದೆ. ದಾನವನ್ನು ತೆಗೆದುಕೊಂಡವನು ತನ್ನನ್ನೂ ದಾನಕೊಟ್ಟವನನ್ನೂ ಕಾಪಾಡುವಂಥ ತಪಃಶಕ್ತಿಯನ್ನು ಪಡೆದಿರಬೇಕಂತೆ.

(24)

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಂ ॥

(17,21)

ದಾನವು ರಾಜಸವೆನಿಸಿಕೊಳ್ಳುವುದು ಯಾವಾಗ? ತಾನು ಇವನಿಗೆ ದಾನಮಾಡಿದರೆ ಅದಕ್ಕೆ ಪ್ರತಿಯಾಗಿ ಯಾವಾಗಲಾದರೂ ಇವನು ತನಗೆ ಏನಾದರೊಂದು ಉಪಕಾರವನ್ನು ಮಾಡುತ್ತಾನೆ ಎಂಬ ನಿರೀಕ್ಷೆಯಿಂದ ದಾನಮಾಡುವುದು ರಾಜಸದಾನ. ಅಥವಾ ದಾನ ಮಾಡಿದರೆ ತನಗೆ ಪ್ರಯೋಜನವುಂಟು ಎಂಬುದನ್ನು ಕಂಡುಕೊಂಡು ಅದಕ್ಕಾಗಿಯೇ ದಾನಮಾಡುವುದೂ ಇದೇ ಬಗೆಯದು. ದಾನಕ್ಕಾಗಿ ದಾನವಲ್ಲ, ಫಲಕ್ಕಾಗಿ ದಾನ. ಫಲದಲ್ಲಿ ಈ ಲೋಕದಲ್ಲಿ ಈಗ ಪಡೆಯುವ ಪ್ರಯೋಜನವೇ ಇರಬಹುದು (ಐಹಿಕ), ಅಥವಾ ಮುಂದಿನ ಜನ್ಮದಲ್ಲಿ ಬೇರೊಂದು ಲೋಕದಲ್ಲಿ ಒದಗುವಂಥದೇ ಇರಬಹುದು (ಆಮುಷ್ಮಿಕ).

ರಾಜಸದಾನದಲ್ಲಿ ದಾನವಾಗಿ ಕೊಡುವ ದ್ರವ್ಯವೂ ಅನ್ಯಾಯದಿಂದ ತನಗೆ ಬಂದಿದ್ದಿರಬಹುದು; ಬೇರೆಯವರಿಗೆ ಕಷ್ಟಕೊಟ್ಟು ಬೇರೆಯವರನ್ನು ಮೋಸಮಾಡಿ ತಾನು ಪಡೆದುಕೊಂಡದ್ದಿರಬಹುದು. ಅದು ಸರಿಯಾದ ದಾನವಾಗುವುದಿಲ್ಲ. ಅದನ್ನು 'ಪರಿಕ್ಲಿಷ್ಟ' ಎನ್ನುತ್ತಾರೆ. ತನ್ನದಾದದ್ದನ್ನು, ತಾನು ನ್ಯಾಯವಾಗಿ, ಕಷ್ಟಪಟ್ಟು ಸಂಪಾದಿಸಿದ್ದನ್ನು, ದಾನಮಾಡಬೇಕು; ಅದು ಸರಿಯಾದ ದಾನ. 'ಪರಿಕ್ಲಿಷ್ಟ'ವಾದ ದಾನ ಎನ್ನುವಾಗ ಇನ್ನೊಂದು ಅರ್ಥವೂ ಇದೆ. 'ಅಯ್ಯೊ, ಇದನ್ನು ಕೊಟ್ಟುಬಿಡಬೇಕಲ್ಲ, ಹೋಯಿತೇ!' ಎಂದು ದುಗುಡದಿಂದ ಮಾಡುವ ದಾನವೂ ಪರಿಕ್ಲಿಷ್ಟವೇ. ಮನಸ್ಸಿಲ್ಲದೆ ಮಾಡುವ ದಾನ; ಚಿತ್ತಕ್ಲೇಶದಿಂದ ಮಾಡುವ ದಾನ. ಇದು ತಾಮಸದಾನ.

(25)

ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಂ ॥

(17,22)

ತಾಮಸದಾನದಲ್ಲಿ ಸರಿಯಾದ ದೇಶ-ಕಾಲಗಳ ಗಣನೆಯೇ ಇರುವುದಿಲ್ಲ. ಎಲ್ಲಿ, ಯಾವಾಗ ದಾನ ಮಾಡಿದರೆ ಸರಿ ಎಂಬ ವಿವೇಕವಿರುವುದಿಲ್ಲ. ಬಹಿರಂಗವಾಗಿ, ಎಲ್ಲರೆದುರು ತುಂಬಿದ ಸಭೆಯಲ್ಲಿ, ನೆರೆದ ಜನಜಂಗುಳಿಯಲ್ಲಿ ದಾನಮಾಡುವುದು ಸರಿಯಲ್ಲ; ಶ್ಮಶಾನ, ವಧ್ಯಸ್ಥಾನ ಮುಂತಾದೆಡೆಯೂ ಮಾಡಬಾರದು. ಮತ್ತು ತಾನು ಅಶುಚಿಯಾಗಿದ್ದಾಗ, ಸೂತಕ ಮುಂತಾದ ಕಾಲಗಳಲ್ಲಿ ದಾನ ಮಾಡುವುದೂ ಸರಿಯಲ್ಲ. ಮತ್ತೆ, ದಾನವನ್ನು ತೆಗೆದುಕೊಳ್ಳುವವರು ಅಪಾತ್ರರಾಗಿದ್ದರೆ ದಾನ ತಾಮಸವೇ. ಕಳ್ಳರು, ದರೋಡೆಕಾರರು, ದಡ್ಡರು, ಶೀಲವಿಲ್ಲದವರು, ಕಪಟಿಗಳು, ಜೂಜುಗಾರರು ಇವರೆಲ್ಲ ದಾನಕ್ಕೆ ಪಾತ್ರರಾಗುವುದಿಲ್ಲ. ಇಂಥವರಿಗೇ ದಾನ ಕೊಡುವ ಮನಸ್ಸುಬರುವುದು ತಾಮಸಗುಣ ಹೆಚ್ಚಾಗಿದ್ದರೇನೆ.

ಇನ್ನೊಂದು ವಿಶೇಷವಾದ ಅಂಶ ದಾನದಲ್ಲಿದೆ. ದಾನ ಕೊಡುವವನ ಕೈ ಮೇಲಿರುತ್ತದೆ, ದಾನ ತೆಗೆದುಕೊಳ್ಳುವವನ ಕೈ ಕೆಳಗಿರುತ್ತದೆ. ಅವನು ದಾನಿ, ಇವನು ಯಾಚಕನೆನ್ನಬಹುದೆ? ಅವನ ಸ್ಥಿತಿ ಉತ್ತಮವಾದುದು, ಇವನದ್ದು ಕೀಳಾದುದು ಎನ್ನಬಹುದೆ? ಎಂದರೆ, ದಾನದಲ್ಲಿ ಈ ಎಣಿಕೆಯಿರಬಾರದು. ದಾನಿಯಲ್ಲಿ ಸಂಪತ್ತಿರಬಹುದು; ದಾನಪಾತ್ರನಲ್ಲಿ ವಿದ್ಯೆ, ತಪಸ್ಸು, ಶೀಲ ಮುಂತಾದ

ಗುಣಗಳಿರಬಹುದು. ಯಾರು ಹೆಚ್ಚು, ಯಾರು ಕಡಮೆ? ದಾನಮಾಡುವಾಗ ದಾನ ತೆಗೆದುಕೊಳ್ಳುವವನನ್ನು ಗೌರವದಿಂದ ಕಾಣಬೇಕೆಂದು ವಿಧಿ; ಅವನನ್ನು ಉಪಚರಿಸಿ ಸಂತೋಷಪಡಿಸಿದ ನಂತರವೇ ದಾನಮಾಡತಕ್ಕದ್ದು. 'ದಾನವನ್ನು ಸ್ವೀಕರಿಸಿ ನನ್ನನ್ನು ಉದ್ಧಾರಮಾಡಿ' ಎಂದು ಕೇಳಿಕೊಳ್ಳಬೇಕು.

ತಾಮಸದಾನದಲ್ಲಿ ದಾನಿಗೆ ಈ ವಿವೇಕವಿರುವುದಿಲ್ಲ. ದಾನತೆಗೆದುಕೊಳ್ಳಲು ಬಂದವನನ್ನು ದಾನಿಯು ಕೀಳಾಗಿ ಕಾಣುತ್ತಾನೆ; ಅವನನ್ನು ಆದರಿಸಿ, ಕುಳ್ಳಿರಿಸಿ, ಸತ್ಕರಿಸುವುದಿಲ್ಲ. ದಾನಿಯು ತನ್ನ ಸಿರಿ, ಔದಾರ್ಯ, ಹಿರಿಮೆಗಳನ್ನೇ ಎತ್ತಿ ಕಾಣಿಸುತ್ತ ದಾನವನ್ನು ಬಿಸಾಡಿದಂತೆ ಕೊಡುತ್ತಾನೆ. ಮತ್ತೆ ಕೆಲವು ತಾಮಸದಾನಿಗಳು ದಾನ ತೆಗೆದುಕೊಳ್ಳಲು ಬಂದವನನ್ನು ತಿರಸ್ಕಾರದಿಂದಲೇ ಕಂಡು, ಅವನ ಬಡತನವನ್ನು ಎತ್ತಿ ಆಡಿ, ಬೇರೆಯವರೆದುರು ಅವನಿಗೆ ಅವಮಾನ ಮಾಡಿ ಅವನ ಮನಸ್ಸನ್ನು ನೋಯಿಸಿ ದಾನಮಾಡುತ್ತಾರೆ. 'ಅಸತ್‌ಕೃತಂ ಅವಜ್ಞಾತಂ' ಎಂಬ ಮಾತುಗಳ ಅರ್ಥ ಇದು.

3

ಗುಣಗಳ ಹಿಡಿತದಿಂದ ತಪ್ಪಿಸಿಕೊಳ್ಳುವುದು

ಪ್ರಕೃತಿ ತ್ರಿಗುಣಾತ್ಮಕವಾದ್ದು, ಎಂದರೆ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳ ಒಕ್ಕೂಟ. ಇದನ್ನೆ ಪಾರಿಭಾಷಿಕವಾಗಿ ಕ್ಷೇತ್ರ ಎಂದು ಗೀತೆ ಕರೆದಿದೆ. ಇದನ್ನರಿಯುವವನು ಮತ್ತು ಇದಕ್ಕಿಂತ ಬೇರೆಯಾಗಿರುವವನು ಪುರುಷ (ಕ್ಷೇತ್ರಜ್ಞ). ಪ್ರಕೃತಿಯಲ್ಲಿ ಪುರುಷನಿದ್ದಾಗ ಪ್ರಕೃತಿಯ ಗುಣಗಳನ್ನೆಲ್ಲ ಅನುಭವಿಸುತ್ತಾನೆ. ನಡೆಯುವ ಕೆಲಸವೆಲ್ಲ ಪ್ರಕೃತಿಯಿಂದಲೆ, ಎಂದರೆ ಪ್ರಕೃತಿಯಲ್ಲಿ ಪುರುಷನಿರುವುದರಿಂದಲೇ. ಇದನ್ನು ಕ್ಷೇತ್ರ-ಕ್ಷೇತ್ರಜ್ಞ ಸಂಯೋಗ ಎನ್ನುತ್ತಾರೆ. ಯಾವ ಕೆಲಸವಾಗಬೇಕಾದರೂ ಐದು ಕಾರಣಗಳಿರುತ್ತವೆ ಎಂದು ಹೇಳಿದೆವಲ್ಲ? ಈ ಐದು ಎರಡರಲ್ಲಿ ಸೇರುವುದು ಹೇಗೆ? ಅಧಿಷ್ಠಾನ (ಶರೀರ), ಕರಣ (ಇಂದ್ರಿಯಗಳು), ಚೇಷ್ಟಾ (ಮನಸ್ಸು) ಇವು ಮೂರು ಪ್ರಕೃತಿಯಲ್ಲಿ (ಎಂದರೆ ಕ್ಷೇತ್ರದಲ್ಲಿ) ಅಂತರ್ಗತವಾಗುತ್ತವೆ; ಕರ್ತಾ (ಜೀವ) ಮತ್ತು ದೈವ (ಪರಮಾತ್ಮ) ಇವೆರಡು ಪುರುಷತತ್ತ್ವದಲ್ಲಿ ಸೇರುತ್ತವೆ. ಕೆಲಸಗಳಲ್ಲಿ ಪ್ರಕೃತಿಯೊಂದಿಗೆ ಸೇರುವವನು ಕರ್ತಾ. ಈ ಕರ್ತೃವಾದ ಜೀವನಿಗೂ ಅಂತರ್ಯಾಮಿಯಾಗಿ ಪರಮಪುರುಷನೆನಿಸಿಕೊಂಡ ಪರಮಾತ್ಮನಾದರೋ ಪ್ರಕೃತಿವ್ಯಾಪಾರವನ್ನೆಲ್ಲ ನೋಡುತ್ತಿರುವವನು (ಉಪದ್ರಷ್ಟಾ), ತನ್ನ ಬರಿಯ ಇರವಿನಿಂದ ಕ್ಷೇತ್ರಕ್ಷೇತ್ರಜ್ಞ ಸಂಯೋಗಕ್ಕೆ ಅನುಕೂಲವಾಗಿರುವವನು (ಅನುಮಂತಾ), ಗುಣಗಳನ್ನು ಅನುಭವಿಸುತ್ತಿರುವಂತೆ ತೋರಿದರೂ ಗುಣಗಳಿಗೆ ಒಡೆಯನಾಗಿರುವವನು. ದಿಟವಾಗಿ ಪರಮಾತ್ಮನೇ ಗುಣಾತೀತ; ಗುಣಗಳ ಸೋಂಕು ಸ್ವಲ್ಪವೂ ಇಲ್ಲದವನು, ನಿರ್ಗುಣ. ಇವನು ಅಕರ್ತೃ; ಆತ್ಮ.

ದಿಟವಾಗಿ ಕರ್ತನೆನ್ನುವವನೂ ಅಕರ್ತೃವೇ; ಆದರೆ ಪ್ರಕೃತಿಯಲ್ಲಿ ತೊಡಗಿರುವಾಗ ತಾನೇ ಕರ್ತನೆಂಬ ಅಭಿಮಾನ ಬಂದೊದಗುತ್ತದೆ. ಪ್ರಕೃತಿಯತ್ತ ಹೊರಳಿದಾಗ ದೈವ ಮರೆಯಾಗುತ್ತದೆ. ದೈವದ ಕಡೆ ಹೊರಳಿದಾಗ ಪ್ರಕೃತಿಯ ಹಿಡಿತ ಸಡಿಲವಾಗುತ್ತದೆ. ದೈವವನ್ನು ಮರೆತು ಪ್ರಕೃತಿಯಲ್ಲಿ ತೊಡಗಿದರೆ ಅದು ದುಃಖಕ್ಕೆ ಕಾರಣ. ಇದನ್ನು ಕುರಿತಂತೆ ಉಪನಿಷತ್ತಿನಲ್ಲೊಂದು ರೂಪಕವಿದೆ. ಒಂದೇ ಮರದ ಮೇಲೆ ಒಂದೇ ತೆರನಾದ, ಎಂದೂ ಎಡೆಬಿಡದೆ ಒಟ್ಟಿಗಿರುವ, ಮಿರಿಮಿರಿ ಮಿಂಚುವ ಎರಡು ಹಕ್ಕಿಗಳು. ಅವುಗಳಲ್ಲೊಂದು ಮರದ ಹಣ್ಣುಗಳನ್ನು ತಿನ್ನುತ್ತ, ಸವಿಯನ್ನೊ ಕಹಿಯನ್ನೊ ಅನುಭವಿಸಿ ತೊಳಲಾಡುತ್ತಿದೆ. ಇನ್ನೊಂದು ಹಕ್ಕಿ ಹಣ್ಣುಗಳಿಗೆ ಬಾಯಿ ಹಾಕದೆ, ಸುಮ್ಮನೆ ನೋಡುತ್ತ ಕುಳಿತಿದೆ. ಇಲ್ಲಿ

ಮರವೆಂದರೆ ಪ್ರಕೃತಿ. ಹಕ್ಕಿಗಳು ಜೀವ, ಪರಮಾತ್ಮರು; ಮೇಲಿನ ಎಣಿಕೆಯಂತೆ, ಕರ್ತಾ ಮತ್ತು ದೈವ. ಹಣ್ಣುಗಳನ್ನು ತಿನ್ನುವ ಹಕ್ಕಿ ಗುಣಬದ್ಧ; ತಿನ್ನದೆ ನೋಡುವ ಹಕ್ಕಿ ಗುಣಾತೀತ. ಜೀವನನ್ನು ಪುರುಷನೆಂದರೆ ಪರಮಾತ್ಮ ಪುರುಷೋತ್ತಮ, 'ಪುರುಷಃ ಪರಃ'.

ಈ ರೂಪಕದ ತಾತ್ಪರ್ಯ ಇದು. ಪ್ರಕೃತಿಯ ಗುಣಗಳನ್ನು ಅನುಭವಿಸಿ, ಅವುಗಳ ಹಿಡಿತದಲ್ಲಿ ಸಿಕ್ಕು ಕಷ್ಟಸುಖಗಳನ್ನು ಪಡೆದುಕೊಳ್ಳುತ್ತಿರುವ ಜೀವನು ಪರಮಾತ್ಮನ ನೆಮ್ಮದಿಯಲ್ಲಿ ಪಾಲ್ಗೊಳ್ಳುವುದು ಸಾಧ್ಯ. ಜೀವನು ಕ್ರಮಕ್ರಮವಾಗಿ ಗುಣಗಳ ಹಿಡಿತದಿಂದ ತಪ್ಪಿಸಿಕೊಂಡು, ಪರಮಾತ್ಮನೊಂದಿಗೆ 'ಸಾಧರ್ಮ್ಯ'ವನ್ನು ಪಡೆದುಕೊಳ್ಳುವುದನ್ನು ಗೀತೆ ಸೂಚಿಸಿದೆ (14,2). ಇದನ್ನೇ ಯೋಗವೆಂದೂ ಕರೆದಿದೆ. ಗುಣಗಳ ಪರಿಣಾಮ ಕಟ್ಟುಪಾಡು; ಗುಣಗಳನ್ನು ದಾಟಿದಾಗ (ಗುಣ ನಿವೃತ್ತಿ) ಬಿಡುಗಡೆ. ಗುಣ ನಿವೃತ್ತಿಗೆ ಉಪಾಯವಾಗಿ ಗುಣಗಳ ಸ್ವರೂಪ, ನೆಲೆ, ವಿಭಾಗ, ಹರವು, ಪರಿಣಾಮಗಳನ್ನು ಮೊದಲು ತಿಳಿಯಬೇಕು (ಜ್ಞಾನ). ಗುಣಗಳು ಗುಣಗಳಲ್ಲೆ ಇರುವಂಥವು ಎಂಬುದನ್ನು ಕಂಡುಕೊಳ್ಳಬೇಕು, ಕರ್ತೃತ್ವ (ಮಾಡುವೆನೆಂಬುದು), ಭೋಕ್ತೃತ್ವ (ಅನುಭವಿಸುವೆನೆಂಬುದು) ಎರಡೂ ಗುಣಗಳ ಹರವಿನಲ್ಲೇ ಇರುವುವು. ಇದನ್ನೆ 'ಸಂಗ'ವೆಂದೂ ಗುಣಾತೀತನಾದವನನ್ನು 'ಮುಕ್ತಸಂಗ'ನೆಂದೂ ಗೀತೆ ನಿರ್ದೇಶಿಸಿದೆ.



(26)

ಗುಣಾನೇತಾನತೀತ್ಯ ತ್ರೀನ್‌ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥

(14,20)

ದೇಹದ ವ್ಯಾಪಾರಗಳಲ್ಲಿ, ಇಂದ್ರಿಯಗಳ ಪ್ರವೃತ್ತಿಗಳಲ್ಲಿ, ಮನಸ್ಸಿನ ವೃತ್ತಿಗಳಲ್ಲಿ ಹೊರಹೊಮ್ಮುವ ಈ ಮೂರೂ ಗುಣಗಳನ್ನು (ಎಂದರೆ ಪ್ರಕೃತಿಯ ಮೂಲ ಸ್ವರೂಪವಾದ ಸತ್ತ್ವ, ರಜಸ್ಸು, ತಮಸ್ಸು ಇವುಗಳನ್ನು ದೇಹವನ್ನು ಹೊಂದಿರುವ ಜೀವನು ದಾಟಿದನೆಂದರೆ (ಅವುಗಳ ಹಿಡಿತದಿಂದ ತಪ್ಪಿಸಿಕೊಂಡನೆಂದರೆ) ಈ ಗುಣಗಳ ವಿಕಾರಗಳಾದ ಹುಟ್ಟು, ಸಾವು, ಮುಪ್ಪು ಮೊದಲಾದ ದುಃಖಗಳಿಂದ ಬಿಡಿಸಿಕೊಂಡು ಮುಕ್ತನಾಗುತ್ತಾನೆ.

ಜೀವನಾದವನು ಹುಟ್ಟುತ್ತಾನೆ, ಬೆಳೆದು ಮುದಿಯಾಗುತ್ತಾನೆ, ಬಗೆಬಗೆಯಾಗಿ ದುಃಖಪಡುತ್ತಾನೆ, ಸಾಯುತ್ತಾನೆ. ಇವೆಲ್ಲ ಪ್ರಕೃತಿಯ ವಿಕಾರಗಳು, ಪರಿಣಾಮಗಳು; ಮೃತ್ಯುವಿನ ಹಲವು ತೋರಿಕೆಗಳು. ಮೂರು ಗುಣಗಳೇ ಇಲ್ಲಿ ಕೆಲಸ ಮಾಡುತ್ತಿರುವುವು. ಗುಣಗಳ ಹಿಡಿತದಿಂದ ತಪ್ಪಿಸಿಕೊಂಡವನಿಗೆ ಮೃತ್ಯು ಎಲ್ಲಿಯದು? ಅವನು 'ಅಮೃತ'ನೇ; ಎಂದರೆ ಸಾವು ಮೊದಲಾದ ಯಾವ ವಿಕಾರವೂ ಇರದವನು. ಅಮೃತನೆಂದರೆ ಮುಕ್ತ, ಗುಣಗಳಿಂದ ಬಿಡುಗಡೆ ಹೊಂದಿದವನು, ಪ್ರಕೃತಿಯ ಕಟ್ಟುಪಾಡುಗಳನ್ನು ಕಿತ್ತೊಗೆದವನು. ಅವನನ್ನು ಶಾಸ್ತ್ರವು ಆತ್ಮನೆಂದೇ ಕರೆಯುತ್ತದೆ.

ಬದುಕಿರುವಾಗಲೇ ಈ ಬಿಡುಗಡೆಯನ್ನು ಪಡೆದುಕೊಳ್ಳುವುದು ಯೋಗದ ಗುರಿ. ಗೀತೆ ಹೇಳುವುದು ಇದನ್ನು. 'ಅಮೃತ'ದ ಸ್ಥಿತಿಯನ್ನು ಅನರ್ಥನಿವೃತ್ತಿಯೆಂದು ಬಣ್ಣಿಸುತ್ತಾರೆ. ಪ್ರಕೃತಿಯ ಕೆಲಸದಿಂದ ಬಂದೊದಗುವ ಕಷ್ಟನಿಷ್ಠುರಗಳೆಲ್ಲ ತೊಲಗಿಹೋಗುವ ಸ್ಥಿತಿಯಿದು. ಬದುಕಿದ್ದಾಗಲೇ ಇದರ ಸ್ವಾರಸ್ಯವಲ್ಲವೆ?

(27)

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥

(14,24)

ಸುಖವು ರಜಸ್ಸಿನ ವಿಕಾರ, ದುಃಖವು ತಮಸ್ಸಿನ ವಿಕಾರ. ಗುಣಗಳಿಗೆ ಅಂಟಿಕೊಂಡವನು ಸುಖಬಂದಾಗ ಉಬ್ಬುತ್ತಾನೆ, ದುಃಖ ಒದಗಿದಾಗ ಕುಗ್ಗುತ್ತಾನೆ. ಗುಣಗಳ ಹಿಡಿತದಲ್ಲೆ ಇರುವವನಷ್ಟೆ? ಆದರೆ ಗುಣಾತೀತನಾದವನಿಗೆ ಸುಖವೇನು, ದುಃಖವೇನು ಎರಡೂ ಸಮವೇ. ಮನಸ್ಸಿಗೆ 'ಇದು ಬೇಕು, ಇದು ದೊರಕಿತು' ಎನ್ನುವಾಗ ಸುಖ; 'ಇದು ಬೇಡ, ಆದರೆ ಬಂದಿತು' ಎನ್ನುವಾಗ ದುಃಖ. ಬೇಕಾದುದೂ ಇಲ್ಲ, ಬೇಡವಾದುದೂ ಇಲ್ಲ ಎಂದಮೇಲೆ ಸುಖವೂ ಇಲ್ಲ ದುಃಖವೂ ಇಲ್ಲ.

ಪುರುಷನು ಪ್ರಕೃತಿಯಲ್ಲಿದ್ದಾಗ, ಗುಣಗಳ ಕೆಲಸದಲ್ಲಿ ತೊಡಗಿದ್ದಾಗ, ಸುಖದುಃಖಗಳು ಅನುಭವಕ್ಕೆ ಬಂದೇ ಬರುತ್ತವೆ. ಆದರೆ ಪ್ರಕೃತಿಯಿಂದ ದೂರ ಸರಿದು ಪುರುಷನು ತನ್ನಲ್ಲೇ ತಾನು ನೆಲೆಯಾಗಿ ನಿಂತಾಗ ಇಂಥ ವಿಕಾರಗಳಿರುವುದಿಲ್ಲ. ಈ ಸ್ಥಿತಿಯನ್ನು 'ಸ್ವ-ಸ್ಥ' ಎಂದು ಕರೆದಿದ್ದಾರೆ. ಇವನ ನೆಲೆ ತನ್ನೊಳಗೇ ಇರುತ್ತದೆ. ಹೊರಗೆ (ಮನೆ, ಮಠ, ಬಂಧು, ಬಳಗ, ಹಣ, ಕಾಸು ಇವುಗಳಲ್ಲಿ) ಇರುವುದಿಲ್ಲ. ಹೀಗಿರುವವನಿಗೆ ಮಣ್ಣಿನ ಹೆಂಟೆಯೂ ಒಂದೇ, ಕಲ್ಲುಹರಳೂ ಒಂದೇ, ಚಿನ್ನದ ಗಟ್ಟಿಯೂ ಒಂದೇ. ಮೂರೂ ನೆಲದ ವಿಕಾರಗಳೇ, ನೆಲವೆಂಬುದು ಪ್ರಕೃತಿಯ ಒಂದು ಅಂಶ. ಪ್ರಕೃತಿಯ ಕಟ್ಟುಪಾಡಿನಿಂದ ಹೊರಗೆ ಬಂದವನಿಗೆ ಇವೆಲ್ಲ ಏತರ ಎಣಿಕೆ? ಒಂದನ್ನು ಕಿತ್ತೊಗೆಯಬೇಕು (ಹೇಯ), ಇನ್ನೊಂದನ್ನು ಜೋಪಾನಮಾಡಬೇಕು (ಉಪಾದೇಯ) ಎಂಬುದು ಗುಣಬಂಧನದಲ್ಲಿರುವವರಿಗೆ; ಗುಣಾತೀತನಿಗಲ್ಲ. ಯಾವುದರಲ್ಲಿಯೂ ಆಸಕ್ತಿಯಿಲ್ಲದಿರುವುದರಿಂದ ಅವನು ವಿರಕ್ತ.

ಇನ್ನು 'ಇವನು ನನಗೆ ಬೇಕಾದವನು', 'ಅವನು ನನಗೆ ಆಗದವನು', 'ಇದು ನನಗೆ ಇಷ್ಟ', 'ಅದು ನನಗೆ ಇಷ್ಟವಿಲ್ಲ' ಎಂಬ ವಿಂಗಡಣೆಯೂ ಇಲ್ಲಿ ಸಲ್ಲದು. ಬೇಕು-ಬೇಡಗಳೇ ಇಲ್ಲವಾದ ಮೇಲೆ ಈ ವಿಕಾರಗಳೆಲ್ಲಿಯವು? ಗುಣಾತೀತನಾದವನು ನಿರ್ವಿಕಾರ. ಹಾಗೆಯೆ, ಹೊಗಳುವವರು ಹೊಗಳಲಿ, ತೆಗಳುವವರು ತೆಗಳಲಿ. ತನಗಾಗಬೇಕಾದುದೇನು? ತನ್ನಿಂದ ಹೋಗುವುದೇನು? ಯಾವುದಕ್ಕೂ ಬಯಸಿ ಬಾಯಿಬಿಡುವುದಿಲ್ಲ; ಏನು ಬಂದರೂ ಬೇಸರಪಡುವುದಿಲ್ಲ. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ' ಎನ್ನುವವನು.

ಇಂಥವನೀಗ 'ಧೀರ'. ಉಪನಿಷತ್ತಿನಲ್ಲಾಗಲಿ ಗೀತೆಯಲ್ಲಾಗಲಿ ಈ ಮಾತಿಗೆ ವಿಶೇಷವಾದ ಒಂದು ಅರ್ಥವಿದೆ. 'ಧೀ' ಎಂದರೆ ಬುದ್ಧಿ; ಅದನ್ನು ಬಿಗಿಹಿಡಿದು ನೆಲೆಯಾಗಿ ಒಂದೆಡೆ ನಿಲ್ಲಿಸುವವನು ಧೀರ ('ಧಿಯಂ ರಾತಿ'). ಅವನ ಬುದ್ಧಿಯು ಬಹಿರ್ಮುಖವಾಗಿ ಅತ್ತಿತ್ತ ಅಲೆದಾಡದೆ, ಅಂತಃಪ್ರಾವಣ್ಯವನ್ನು (ಎಂದರೆ ಒಳಗೆ ಹರಿಯುವ ಒಲವನ್ನು) ಪಡೆದುಕೊಂಡು, ಆತ್ಮನಲ್ಲೇ ನೆಲೆಸುತ್ತದೆ. ಧೀರನೆಂದರೆ ಸ್ಥಿತಪ್ರಜ್ಞನೇ; ಗುಣಾತೀತನೇ.

(28)

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥

(14,25)

ಗುಣಾತೀತನ ವರ್ಣನೆಯೆ ಮುಂದರಿಯುತ್ತದೆ. ಮಾನ-ಅಪಮಾನಗಳೆರಡೂ ಇವನಿಗೆ ಸಮವೇ. ತನ್ನನ್ನು ಇತರರು ಸತ್ಕರಿಸಲಿ, ತಿರಸ್ಕರಿಸಲಿ ಇವನಲ್ಲೇನು ಉಬ್ಬರವಿಳಿತವಿರದು. ಕೊಂಡಾಡುವರು ಕೊಂಡಾಡಲಿ, ಕಡೆಗಾಣಿಸುವವರು ಕಡೆಗಾಣಿಸಲಿ, ಇವನ ನೆಮ್ಮದಿಯೇನು ಕದಲುವುದಿಲ್ಲ. ಹಾಗೆಯೇ ಸ್ನೇಹಿತರು, ಶತ್ರುಗಳು ಎಂಬ ಎಣಿಕೆಯೂ ಇರದು ಇವನಿಗೆ. ಒಲವು, ಹಗೆತನ ಎಂಬ ಭೇದವನ್ನೆಣಿಸುವುದಿಲ್ಲ ಇವನು. ಎಲ್ಲರೂ ಒಂದೇ.

ಶ್ರಮವಹಿಸಿ ಉದ್ದೇಶದಿಂದ ಮೊದಲುಮಾಡುವ ಕೆಲಸ 'ಆರಂಭ'ವೆನಿಸಿಕೊಳ್ಳುತ್ತದೆ. ಇದರಲ್ಲಿ 'ದೃಷ್ಟ' (ಎಂದರೆ ಈಗಲೇ ಇಲ್ಲಿಯೇ ಫಲಕೊಡುವಂಥ ಸಾಮಗ್ರಿ, ಕಣ್ಣಿನಿಂದ ಕಾಣುವಂಥದು), ಅಥವಾ 'ಅದೃಷ್ಟ (ಮುಂದೆಂದೋ ಫಲ ಕೊಡುವಂಥದು, ಇಂದು ಕಣ್ಣಿಗೆ ಕಾಣಿಸಿಕೊಳ್ಳದಿದ್ದರೂ ಇದ್ದುಕೊಂಡಿರುವ ಸಾಮಗ್ರಿ) ಪ್ರಯೋಜನವಿರಬಹುದು. ಇಂಥ ಬಗೆಬಗೆಯ ಕೆಲಸಗಳು ಗುಣಗಳ ಹಿಡಿತಕ್ಕೆ ನಮ್ಮನ್ನು ಒಡ್ಡುತ್ತವೆ; ಪ್ರಾಪಂಚಿಕ ವ್ಯವಹಾರದಲ್ಲಿ ನಮ್ಮನ್ನು ತೊಡಗಿಸುತ್ತವೆ. ಗುಣಾತೀತನಿಗಾದರೋ ಇಂಥ ಕೆಲಸಗಳ ಅಗತ್ಯವೇ ಕಾಣುವುದಿಲ್ಲ. ಇವನ್ನೆಲ್ಲ ಬಿಟ್ಟೇಬಿಡುತ್ತಾನೆ. ಅವನಿಗೆ ಇಲ್ಲಿ, ಈ ಲೋಕದಲ್ಲಿ, ಆಗಬೇಕಾದದ್ದೂ ಇರುವುದಿಲ್ಲ; ಮುಂದೆ, ಮುಂದಿನ ಜನ್ಮದಲ್ಲೋ ಬೇರೆಯ ಲೋಕದಲ್ಲೋ, ಆಗಬೇಕೆನ್ನುವುದೂ ಇರುವುದಿಲ್ಲ. ಕೆಲಸವನ್ನೆ ಮಾಡದಿದ್ದರೆ ಬದುಕಿರುವುದು ಹೇಗೆ? ಗುಣಾತೀತನೇನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ! ಬದುಕಿರಲು ಏನನ್ನು ಮಾಡಬೇಕೋ ಅಷ್ಟನ್ನು, ಅಷ್ಟನ್ನು ಮಾತ್ರ, ಮಾಡುತ್ತಾನೆ. ಹೆಚ್ಚಿನ ಬಯಕೆಗಳ ಬೆನ್ನು ಹತ್ತಿ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದರ್ಥ.

(29)

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥

(3,37)

ರಜೋಗುಣದಿಂದ ಮೊಟ್ಟಮೊದಲು ತೋರಿಕೊಳ್ಳುವುದು ಕಾಮ, ಎಂದರೆ ಬಯಕೆ. ಎಲ್ಲ ಪ್ರವೃತ್ತಿಗಳಿಗೂ ಇದು ಮೂಲ. ಇದು ತೋರಿಕೊಂಡಮೇಲೆ ರಜೋಗುಣ ಇನ್ನಷ್ಟು ದೃಢವಾಗುತ್ತದೆ. ರಜೋಗುಣದ ಪರಿಣಾಮವೂ ಹೌದು, ಕಾರಣವೂ ಹೌದು. ಕಾಮದಿಂದ ಕಾಣಿಸಿಕೊಳ್ಳುವುದು ಕ್ರೋಧ (ಸಿಟ್ಟು). 'ಕಾಮಾತ್ ಕ್ರೋಧೋಽಭಿಜಾಯತೇ' ಎನ್ನುವ ಮಾತು ಗೀತೆಯಲ್ಲೇ ಇದೆ. ಬಯಕೆಯಿದ್ದು ಅದು ಈಡೇರದೆ ಹೋದಾಗ ಸಿಟ್ಟು ಸಹಜವಾಗಿಯೆ ಬರುತ್ತದೆ. ರಾಗ-ದ್ವೇಷಗಳು ಸಾಮಾನ್ಯ ಜನರಲ್ಲಿ ಇರುವುವು ತಾನೆ? ರಾಗದ ಪೂರ್ವಾವತಾರ (ಮೊದಲ ಹಂತ) ಕಾಮ; ದ್ವೇಷದ ಪೂರ್ವಾವತಾರ ಕ್ರೋಧ. ಎಂದ ಮೇಲೆ ಕಾಮದ ಇನ್ನೊಂದು ರೂಪವೇ, ಅವಸ್ಥೆಯೇ ಕ್ರೋಧ. ಕ್ರೋಧವೂ ಒಂದು ಬಗೆಯ ಕಾಮವೇ. ಕಾಮವನ್ನು ಗೆದ್ದರೆ ಕ್ರೋಧವನ್ನೂ ಗೆದ್ದಂತೆ.

ಕಾಮವೇ ಕ್ರೋಧವೆಂದಾದರೂ ಅವುಗಳ ಆಕಾರ ಬೇರೆಬೇರೆ. ಕಾಮವನ್ನು 'ಮಹಾಶನ' ಎಂದೂ ಕ್ರೋಧವನ್ನೂ 'ಮಹಾಪಾಪ್ಮ' ಎಂದೂ ಕರೆದು ವಿಂಗಡಿಸಿರುವುದು ಕಾಣುತ್ತದೆ. ಮಹಾಶನ ಎಂದರೆ ಎಲ್ಲವನ್ನೂ ತಿಂದು ಮುಗಿಸುವುದು; ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ. ಕಾಮ ಇಂಥದು. ಯಾವ ಬಯಕೆಯಿದ್ದರೂ ಅದನ್ನು ಪೂರೈಸುವುದು ಕಷ್ಟವೇ; ಇನ್ನು ಬಯಕೆ ತೀರಿತು ಎನ್ನುವಂತಿಲ್ಲ. ಉರಿಯುತ್ತಿರುವ ಬೆಂಕಿಗೆ ಕಟ್ಟಿಗೆ ಒಡ್ಡಿದಂತೆ; ಒಡ್ಡಿದಂತೆಲ್ಲ ಉರಿಯೂ ಹೆಚ್ಚುತ್ತದೆ. ಬಯಕೆಯೂ ಹಾಗೆಯೆ. ಕಾಮವು ಕ್ರೋಧವೆನಿಸಿಕೊಂಡಾಗ ಅದು ಮಹಾಪಾಪ್ಮ. ಪಾಪ್ಮ ಎಂದರೆ ಪಾಪದಲ್ಲಿ ತೊಡಗಿಸುವುದು, ಪಾಪಕ್ಕೆ ಕಾರಣವಾಗುವುದು. ಬಯಕೆಗೆ ಅಡ್ಡಿಯಾದಾಗ ಬರುವ ಸಿಟ್ಟಿನಿಂದ ಯಾವ ಕೆಟ್ಟಕೆಲಸವಾದರೂ ನಡೆದುಹೋದೀತಲ್ಲವೆ? 'ಕೋಪವೆಂಬುದನರ್ಥಸಾಧನ' ತಾನೆ?

ಹೀಗಾಗಿ ಇದನ್ನು ಮನುಷ್ಯನಿಗೆ, ಅದರಲ್ಲೂ ಅಧ್ಯಾತ್ಮದಲ್ಲಿ ಮುಂದರಿಯಬಯಸುವ ಸಾಧಕನಿಗೆ, ಶತ್ರುವೆಂದು ಬಣ್ಣಿಸಲಾಗಿದೆ. ಕಾಮವೇ ಕ್ರೋಧವೆಂದುದರಿಂದ ಏಕವಚನದಲ್ಲೇ 'ವೈರಿ' ಎಂಬ ಮಾತು. ಪಾಪದಲ್ಲಿ ತೊಡಗಿಸುವುದು ಶತ್ರುವಲ್ಲದೆ ಮಿತ್ರನೆ? ಎಲ್ಲರಿಗೂ ಇದು ಶತ್ರುವೇ; ಯಾರಾದರೂ ಯಾವ ಪುರುಷಾರ್ಥವನ್ನಾಗಲಿ ಸಾಧಿಸಿಕೊಳ್ಳಲು ಇದು ಅಡ್ಡಿಯಾಗುತ್ತದೆ. ಶ್ರೇಯೋಮಾರ್ಗದಲ್ಲಿ ಅಡಿಯಿಡಗೊಡುವುದಿಲ್ಲ. ಮತ್ತೆ, ಶರೀರದ ಒಳಗೇ ಇದ್ದುಕೊಂಡು ಕಾಡುವ ಹಗೆ. ಗುಣಾತೀತನಾಗಲು ಬಯಸುವವನು ಇದನ್ನು ತಿಳಿದುಕೊಳ್ಳಬೇಕು.

(30)

ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ ॥

(3,40)

ಕಾಮವೆಂಬ ಈ ಶತ್ರುವಿನ ನೆಲೆಯಾವುದೆಂದು ತಿಳಿದರೆ ಅದರೊಂದಿಗೆ ಹೋರಾಡಬಹುದಲ್ಲವೆ? ನಮ್ಮ ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಲ್ಲೇ ಇದು ಇರುವುದು. ಇಂದ್ರಿಯಗಳು ರಜಸ್ಸಿನ ಪರಿಣಾಮಗಳಾಗಿದ್ದ ಹೊರಗಣ ವಿಷಯಗಳತ್ತ ಪ್ರವೃತ್ತವಾಗುತ್ತವೆ; ಇಂದ್ರಿಯಗಳು ಒದಗಿಸಿದ ಸಾಮಗ್ರಿಯಿಂದ ಸತ್ತ್ವಗುಣದ ಮನಸ್ಸು ಸಂಕಲ್ಪ-ವಿಕಲ್ಪಗಳಲ್ಲಿ ತೊಡಗುತ್ತದೆ; ಮನಸ್ಸಿನ ಈ ವೃತ್ತಿಗಳನ್ನು ವಿವೇಚನೆಮಾಡಿ, ನಿಶ್ಚಯಿಸಿಕೊಳ್ಳುವುದು ಬುದ್ಧಿ. ಇಂದ್ರಿಯಗಳು ರಾಜಸವಾದಾಗ ಮನಸ್ಸು ಸತ್ತ್ವವಾದಂತೆಯೆ ಮನಸ್ಸು ರಾಜಸವಾದಾಗ ಬುದ್ಧಿ ಸತ್ತ್ವವಾಗುತ್ತದೆ. ಈ ಒಕ್ಕೂಟದಲ್ಲಿ ಕಾಮ ಹುಟ್ಟಿಕೊಳ್ಳುತ್ತದೆ. ಅದರ ಅಧಿಷ್ಠಾನ (ಆಸರೆ) ಈ ಒಕ್ಕೂಟವೇ.

ಕಾಮವು ಮನುಷ್ಯನನ್ನು ಮಂಕುಮಾಡಿ, ಮೋಸಮಾಡುವುದು ಈ ಒಕ್ಕೂಟದ ವಿವರಗಳಿಂದಲೇ (ಇಂದ್ರಿಯ, ಮನಸ್ಸು, ಬುದ್ಧಿಗಳಿಂದ). 'ವಿಮೋಹಯತಿ' ಎಂಬ ಮಾತಿನಲ್ಲಿ ಬಗೆಬಗೆಯಾಗಿ ಮರುಳುಮಾಡುವುದೆಂಬ ಧ್ವನಿಯಿದೆ (ವಿವಿಧಂ ಮೋಹಯತಿ). ಇದು ನಮ್ಮ ಭ್ರಾಂತಿಗಳು ಅನೇಕ ವಿಧವಾಗಿರುವುದನ್ನು ಹೇಳುತ್ತದೆ. ಅವರವರಿಗೆ ಅವರವರ ತೆವಲು. ಎಲ್ಲವನ್ನೂ ಮಾಡಿಸುವುದು ಕಾಮವೇ (ಕ್ರೋಧವೇ).

ಮೋಹವೆಂದರೆ ಇದ್ದುದನ್ನು ಇದ್ದ ಹಾಗೆ ಕಾಣಿಸದೆ ಬೇರೆ ಬಗೆಯಾಗಿ ಕಾಣಿಸುವುದು. ಇದ್ದುದನ್ನು ಇದ್ದಂತೆಯೇ ತಿಳಿಸಿದರೆ ಅದು ಜ್ಞಾನವಾಯಿತು. ಕಾಮವು ಈ ಜ್ಞಾನವನ್ನು ಮುಸುಕಿಬಿಡುತ್ತದೆ. ದೇಹಾಭಿಮಾನ ಇದ್ದರೆ ಸಾಕು, ಕಾಮವು ಮೇಲೆದ್ದುಕೊಂಡು, ಹೊಗೆಯು ಬೆಂಕಿಯನ್ನು ಮುಚ್ಚಿದಂತೆ, ಜ್ಞಾನವನ್ನು ಮರೆಮಾಡಿಬಿಡುತ್ತದೆ. ಇಂದ್ರಿಯಗಳಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ ಯಥಾರ್ಥ ಜ್ಞಾನಕ್ಕೆ ಸಾಧನಗಳೇ. ಆದರೆ ಕಾಮದ ಕಾವಿನಲ್ಲಿ ಇದು ಸಾಧ್ಯವಾಗುವುದಿಲ್ಲ. ವಿಷಯಗಳಕಡೆ ಓಡಿ ಅಲ್ಲಿಯೇ ತೊಡಗಿಬಿಡುತ್ತವೆ.

(31)

ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥

(3,41)

ಹೀಗಿರುವುದರಿಂದ, ಮೊಟ್ಟಮೊದಲು ಇಂದ್ರಿಯಗಳನ್ನೆ ಹಿಡಿತದಲ್ಲಿಟ್ಟುಕೊಳ್ಳಬೇಕು. ಇಂದ್ರಿಯಗಳಾಚೆ ಮನಸ್ಸು, ಮನಸ್ಸಿನಾಚೆ ಬುದ್ಧಿ. ಇಂದ್ರಿಯಗಳು ನಮ್ಮ ವಶದಲ್ಲಿದ್ದರೆ ಮನಸ್ಸನ್ನು ಬಿಗಿಹಿಡಿಯುವುದು ಸುಲಭ; ಮನಸ್ಸು ವಶವಾದರೆ ಬುದ್ಧಿಯನ್ನು ನೆಟ್ಟಗಿರಿಸಿಕೊಳ್ಳುವುದು ಸುಲಭ. ಆದ್ದರಿಂದಲೇ 'ಆದೌ' (ಮೊದಲಲ್ಲೇ) ಎಂಬ ಮಾತು; ಮನಸ್ಸನ್ನೂ ಬುದ್ಧಿಯನ್ನೂ ಅದು ವಶಮಾಡಿಕೊಳ್ಳುವ ಮೊದಲೆ. ಏಕೆಂದರೆ ರಾಗ-ದ್ವೇಷಗಳು ಮೊದಲಾಗುವುದೇ ಇಂದ್ರಿಯಗಳಲ್ಲಿ. ಅವನ್ನು ವಶಮಾಡಿಕೊಳ್ಳು-ವುದೆಂದರೆ, ಅವನ್ನು ವಿಷಯಗಳಿಂದ ಹಿಂದಕ್ಕೆ ಸೆಳೆದುಕೊಂಡು ಬಿಗಿಹಿಡಿಯುವುದು. ಇದನ್ನೆ ಪಾತಂಜಲಯೋಗದ ಪರಿಭಾಷೆಯಲ್ಲಿ ಪ್ರತ್ಯಾಹಾರವೆನ್ನುವುದು. ಸ್ವಾಭಾವಿಕವಾಗಿ ಇಂದ್ರಿಯಗಳು ಅವುಗಳ ವಿಷಯಗಳನ್ನು ಗ್ರಹಿಸುವುದರಲ್ಲೇ ತೊಡಗಿರುತ್ತವೆ - ಕಣ್ಣು ರೂಪವನ್ನು, ಕಿವಿ ಶಬ್ದವನ್ನು, ನಾಲಗೆ ರಸವನ್ನು, ಮೂಗು ಗಂಧವನ್ನು, ಚರ್ಮ ಸ್ಪರ್ಶವನ್ನು. ಹಾಗಿರುವ ಅವನ್ನು ಬಿಗಿಹಿಡಿಯುವುದೇನು ಸುಲಭವಲ್ಲ. ಆದರೆ ಅವನ್ನು ಬಿಗಿಹಿಡಿಯದೆ ಹರಿಯುವ ಮನಸ್ಸನ್ನು ನಿಲ್ಲಿಸುವುದು ಸಾಧ್ಯವಿರದು.

ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳುವ ಉದ್ದೇಶವೇನು? ಕಾಮವೆಂಬ ಶತ್ರುವನ್ನು ಸದೆಬಡಿಯುವುದು. ಕಾಮವನ್ನು ಇಲ್ಲಿ 'ಪಾಪ್ಮಾ' ಎಂದು ಕರೆದಿದ್ದಾರೆ; ಪಾಪಕ್ಕೆ ಕಾರಣವಾಗುವುದು ಎಂದರ್ಥ. ಕಾಮವಿದ್ದರಲ್ಲವೆ ಕೆಟ್ಟಕೆಲಸಗಳು ನಡೆಯುವುದು? ಕಾಮದ ದೋಷವೇನು ಎಂಬುದನ್ನೂ ಇಲ್ಲಿ ಹೇಳಿದೆ. ಅದು ಜ್ಞಾನವನ್ನೂ ವಿಜ್ಞಾನವನ್ನೂ ನಾಶ ಮಾಡುತ್ತದೆ. ಜ್ಞಾನ-ವಿಜ್ಞಾನವೆಂಬೆರಡು ಮಾತುಗಳು ಗೀತೆಯಲ್ಲಿ ಮತ್ತೆ ಮತ್ತೆ ಒಟ್ಟಿಗೆ ಬರುತ್ತವೆ. ಎರಡೂ ಬುದ್ಧಿಯ ಪರಿಣಾಮಗಳೇ. ಮನಸ್ಸು ಎಚ್ಚೆತ್ತಿದ್ದಾಗ, ಜ್ಞಾನವೆಂಬುದು ತಿಳಿವಳಿಕೆ; ಪ್ರತ್ಯಕ್ಷ, ಅನುಮಾನಗಳಿಂದ ಹೊರಗಣ ಪದಾರ್ಥಗಳನ್ನೂ, ಶಾಸ್ತ್ರದ ಶ್ರವಣದಿಂದ ಮತ್ತು ಮನನದಿಂದ ತತ್ತ್ವವನ್ನು ಅರಿತುಕೊಳ್ಳುವುದು ಜ್ಞಾನ. ಈ ಜ್ಞಾನವೇ ಆತ್ಮದ ಕಡೆ ಹೊರಳಿದಾಗ, ನಿದಿಧ್ಯಾಸನವನ್ನು (ಎಂದರೆ ಧ್ಯಾನವನ್ನು) ಕೈಗೊಂಡಾಗ, ಪರತತ್ತ್ವವನ್ನು ಅನುಭವಕ್ಕೆ ತಂದುಕೊಂಡಾಗ ಅದು ವಿಜ್ಞಾನವೆನಿಸುತ್ತದೆ. ಕಾಮವು ಬುದ್ಧಿಯ ಇವೆರಡೂ ಪರಿಣಾಮಗಳು ಆಗದಂತೆ ತಡೆಯುವುದರಿಂದ ಕಾಮವು ನಮ್ಮ ಪುರುಷಾರ್ಥ ಸಾಧನೆಗೆ ಶತ್ರು, ಶ್ರೇಯಸ್ಸಿಗೆ ಆತಂಕಕಾರಿ. ಇಂಥ ಕಾಮವನ್ನು ಚೆನ್ನಾಗಿ ಹೊಡೆದುಹಾಕು (ಪ್ರಜಹಿ) ಎಂದು ಇಲ್ಲಿನ ಉಪದೇಶ. ಚೆನ್ನಾಗಿ ('ಪ್ರ' ಎಂಬ ಉಪಸರ್ಗ) ಎಂದರೆ, ಮತ್ತೆ ಅದು ತಲೆಯೆತ್ತದಂತೆ ಎಂದರ್ಥ.

(32)

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥

(3,42)

ಇಂದ್ರಿಯಗಳು ಹೆಚ್ಚಿನವು? ಯಾವ ಅರ್ಥದಲ್ಲಿ? ಮೇಲೆ ಹೇಳಿದಂತೆ ಜ್ಞಾನವನ್ನೂ ವಿಜ್ಞಾನವನ್ನೂ ನಾಶಮಾಡುವ ವಿಚಾರದಲ್ಲಿ ಇಂದ್ರಿಯಗಳದ್ದೇ ಮೇಲುಗೈ. ಇನ್ನೂ ಒಂದರ್ಥದಲ್ಲಿ ಅವುಗಳ ಮೇಲ್ಮೆ. ಸ್ಥೂಲವಾದ ಶರೀರಕ್ಕಿಂತ ಸೂಕ್ಷ್ಮವಾದುವು ಇಂದ್ರಿಯಗಳು. ಶರೀರದಲ್ಲಿ ಸಂವೇದನಾಶೀಲತೆ (ತಿಳಿವಳಿಕೆ) ಕಡಮೆ; ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳು ರೂಪ, ಶಬ್ದ, ಗಂಧ, ರಸ, ಸ್ಪರ್ಶಗಳನ್ನು ತಿಳಿಸುವಂಥವು. ಹೊರಗಣ ಜಗತ್ತಿಗೆ ಇವು ಬೆಳಕುಗಳಿದ್ದಂತೆ.

ಇಂದ್ರಿಯಗಳಿಂತಲೂ ಮನಸ್ಸು ಹೆಚ್ಚಿನದು. ಇಂದ್ರಿಯಗಳಾದರೆ ಅವುಗಳಿಗೆ ತಕ್ಕಂಥ ವಿಷಯಗಳನ್ನು ಮಾತ್ರ ಗ್ರಹಿಸುತ್ತವೆ. ಕಣ್ಣು ರೂಪವನ್ನು, ಕಿವಿ ಶಬ್ದವನ್ನು, ಹೀಗೆ. ಕಣ್ಣು ಶಬ್ದವನ್ನು ಗ್ರಹಿಸಲಾರದು, ಕಿವಿ ರೂಪವನ್ನು ಗ್ರಹಿಸಲಾರದು. ಮನಸ್ಸಾದರೋ ಎಲ್ಲ ಇಂದ್ರಿಯಗಳ ವಿಷಯಗಳನ್ನೂ ಗ್ರಹಿಸುತ್ತದೆ. ಅಷ್ಟು ಮಾತ್ರವಲ್ಲ. ಮನಸ್ಸಿನ ನೆರವಿಲ್ಲದೆ ಇಂದ್ರಿಯಗಳು ತಂತಮ್ಮ ಕೆಲಸಗಳನ್ನು ಮಾಡಲಾರವು. 'ನಾನು ನೋಡಲಿಲ್ಲ, ಮನಸ್ಸು ಎಲ್ಲಿಯೋ ಇದ್ದಿತು' ಎಂದು ಹೇಳುವರಲ್ಲವೆ? ಕಣ್ಣು ತೆರೆದುಕೊಂಡಿತ್ತು; ಆದರೆ ನೋಡುವುದಾಗಲಿಲ್ಲ. ಇದು ಮನಸ್ಸಿನ ಹೆಚ್ಚುಗಾರಿಕೆ. ಮನಸ್ಸಿದ್ದರೇ ಇಂದ್ರಿಯವ್ಯಾಪಾರ ಸಾರ್ಥಕವಾಗುವುದು.

ಮನಸ್ಸಿಗೂ ಮಿಗಿಲಾದುದು ಬುದ್ಧಿ, ಬುದ್ಧಿಯ ಬೆಳಕಿಲ್ಲದೆ ಮನಸ್ಸು ಇಂದ್ರಿಯಸಂವೇದನೆಗೆ ಪ್ರೇರಕವೂ ಆಗಲಾರದು, ಪ್ರವರ್ತಕವೂ ಆಗಲಾರದು. ಮನಸ್ಸಿನ ವೃತ್ತಿಗಳಿಗೆ ನಿಶ್ಚಿತ ಜ್ಞಾನದ ಕಳೆಯನ್ನು ಕೂಡಿಸುವುದು ಬುದ್ಧಿಯೇ. ಆದರ ಕೆಲಸ ಅಧ್ಯವಸಾಯ (ಖಚಿತವಾಗಿ ತಿಳಿಯುವುದು). ಗೀತೆಯಲ್ಲಿ ಕಾಣಸಿಗುವ ರಥರೂಪಕದಲ್ಲಿ ಬುದ್ಧಿಯು ಶರೀರವೆಂಬ ರಥದ ಸಾರಥಿ; ಮನಸ್ಸು ಇಂದ್ರಿಯಗಳೆಂಬ ಕುದುರೆಗಳಿಗೆ ಕಡಿವಾಣ ಅಷ್ಟೆ.

ಬುದ್ಧಿಗಿಂತ ಮಿಗಿಲಾದುದು ಯಾವುದು? 'ಸಃ' ಎಂಬ ನಿರ್ದೇಶನವಿದೆ (ಅದು). ಅದೆಂದರೆ ಆತ್ಮ. ಬುದ್ಧಿಯನ್ನೂ ನೋಡುವವನು' (ಬುದ್ಧೇಃ ದ್ರಷ್ಟಾ); ಸಾಕ್ಷಿಯಾಗಿ ಇರುವವನು (ಶಂಕರಾಚಾರ್ಯರು). ಇದು ಜೀವವಲ್ಲ, ಪರಮಾತ್ಮನೇ ಎಂದು

ಇನ್ನೊಂದು ವಿವರಣೆ (ಮಧ್ವಾಚಾರ್ಯರದ್ದು). 'ಬುದ್ಧೇರಾತ್ಮಾ ಮಹಾನ್ ಪರಃ' ಎಂಬ ಮಾತೇ ಇದೆಯಲ್ಲ? ಅದಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ. ಮತ್ತೊಂದು ವಿವರಣೆಯ ಪ್ರಕಾರ (ರಾಮಾನುಜಾಚಾರ್ಯರದ್ದು) ಇಲ್ಲಿ 'ಸಃ' (ಅದು, ಬುದ್ಧಿಯ ಆಚೆ ಇರುವುದು) ಎಂಬ ಮಾತು ಹಿಂದಿನ ಶ್ಲೋಕದಲ್ಲಿ ಪ್ರಸ್ತಾಪಕ್ಕೆ ಬಂದಿರುವ ಕಾಮವನ್ನೇ ಹೇಳುತ್ತದೆ. ಬುದ್ಧಿಯನ್ನೆ ಅದು ಮರುಳು ಮಾಡುವುದರಿಂದ ಬುದ್ಧಿಗಿಂತ ಹೆಚ್ಚಿನದು ಎಂಬ ಅರ್ಥದಲ್ಲಿ.

(33)

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥

(3,43)

ಈ ರೀತಿಯಾಗಿ ಬುದ್ಧಿಗಿಂತ ಮಿಗಿಲಾದ ತತ್ತ್ವವನ್ನು (ಆತ್ಮನನ್ನು) ಅರಿತುಕೊಂಡು (ಎಂದರೆ ಸಾಕ್ಷಾತ್ಕರಿಸಿಕೊಂಡು, ಅನುಭವಕ್ಕೆ ತಂದುಕೊಂಡು) ಆತ್ಮವನ್ನು (ಮನಸ್ಸನ್ನು) ಆತ್ಮದಿಂದ (ಬುದ್ಧಿಯಿಂದ) ನಿಲ್ಲಿಸಿಕೊಂಡು ಪ್ರಬಲವಾದ, ಗೆಲ್ಲಲು ಕಷ್ಟಸಾಧ್ಯವಾದ ಕಾಮವೆಂಬ ಶತ್ರುವನ್ನು ಕೊಲ್ಲಬೇಕು.

ಬುದ್ಧಿಯೆಂದರೆ ಸಾಂಖ್ಯರು ಹೇಳುವ ಅವ್ಯಕ್ತವಾದ ಮಹತ್ತತ್ವವೆಂದೂ ಅದಕ್ಕಿಂತ ಮಿಗಿಲಾದುದು ಆತ್ಮತತ್ತ್ವವೆಂದೂ ಒಂದು ವಿವರಣೆಯಿದೆ. ಇಲ್ಲಿ ಆತ್ಮತತ್ತ್ವವೆಂದರೆ ಮೂಲಪ್ರಕೃತಿ (ಗುಣಸಾಮ್ಯ)ದಿಂದ ಪ್ರತ್ಯೇಕವಾಗಿರದ ಪುರುಷನೇ.

ಆತ್ಮನೆಂಬ ಮಾತಿಗೆ ಅನೇಕಾರ್ಥಗಳಿವೆ; ಸಂದರ್ಭಕ್ಕೆ ಸರಿಯಾಗಿ ಅರ್ಥವನ್ನು ಹೇಳಬೇಕಾಗುತ್ತದೆ. ತಾನು, ಯತ್ನ, ಚೈತನ್ಯ, ಶರೀರ, ಮನಸ್ಸು, ಪ್ರಾಣ, ವಿಜ್ಞಾನ, ಬುದ್ಧಿ, ಜೀವ, ಪ್ರತ್ಯಗಾತ್ಮ, ಪರಮಾತ್ಮ, ಧೃತಿ, ಸ್ವಭಾವ, ಬ್ರಹ್ಮ, ವಿಷ್ಣು ಎಂಬೆಲ್ಲ ಅರ್ಥಗಳಿವೆ. ಆತ್ಮ ಎನ್ನುವ ಸಂಸ್ಕೃತಮಾತು 'ಯಾವಾಗಲೂ ಇರುವುದು, ವ್ಯಾಪಿಸಿಕೊಂಡಿರುವುದು' (ಅತ ಸಾತತ್ಯಗಮನೇ) ಎಂಬ ಧಾತುವಿನಿಂದ ಆದುದು. ಎಚ್ಚರ, ಕನಸು, ನಿದ್ರೆಗಳಲ್ಲಿ ಎಡೆಬಿಡದೆ ಇರುವುದು ಎಂಬರ್ಥದಲ್ಲಿ ಜೀವ, ಪ್ರತ್ಯಗಾತ್ಮ ಎಂಬುದು ವಾಡಿಕೆಯಲ್ಲಿರುವ ಅರ್ಥ. ಉಳಿದ ಅರ್ಥಗಳಲ್ಲಿಯೂ ಬಳಕೆಯಿದೆ. ಇಲ್ಲಿ 'ಬುದ್ಧೇಃ ಪರಂ' ಎನ್ನುವಾಗಲೂ ಆತ್ಮನನ್ನೇ ಹೇಳಿರುವುದು; ಒಡನೆಯೇ ಅವನನ್ನು 'ತಿಳಿದುಕೊಂಡು' (ಬುದ್ಧ್ವಾ) ಎಂಬ

ಮಾತನ್ನು ಆತ್ಮಜ್ಞಾನ ಎಂಬರ್ಥದಲ್ಲಿ ಹೇಳಿದ್ದಾರೆ. ಮುಂದೆ ಆತ್ಮಜ್ಞಾನದ ಉಪಾಯವಾಗಿ 'ಆತ್ಮನಿಂದ ಆತ್ಮನನ್ನು ಹಿಡಿದು ನಿಲ್ಲಿಸಿಕೊಂಡು' (ಆತ್ಮನಾ ಆತ್ಮಾನಂ ಸಂಸ್ತಭ್ಯ) ಎಂಬ ಒಕ್ಕಣೆಯಿದೆ. ಮಾಡಬೇಕಾದ ಕೆಲಸವನ್ನು 'ಸಂಸ್ತಭ್ಯ' ಎನ್ನುವ ಕ್ರಿಯಾಪದದಲ್ಲಿ ಹೇಳಿದ್ದಾರೆ; 'ಸಮ್ಯಕ್‌ಸ್ತಂಭನ' ಎಂದರೆ ಚೆನ್ನಾಗಿ ನಿಲ್ಲಿಸಿ, ತಡೆಹಿಡಿದು, ಅಲುಗಾಡದಂತೆ ಮಾಡಿ (ನಿಶ್ಚಲಂ ಕೃತ್ವಾ) ಎಂದರ್ಥ. ಗ್ರಂಥಲಿಪಿಯ ಪ್ರಾಚೀನ ಹಸ್ತಪ್ರತಿಯೊಂದರಲ್ಲಿ 'ಸಂಯಮ್ಯ' ಎಂದೇ ಪಾಠಾಂತರವಿದೆ. ಮನಸ್ಸನ್ನು (ಆತ್ಮಾನಂ) ಬುದ್ಧಿಯಿಂದ (ಆತ್ಮನಾ) ಬಿಗಿಹಿಡಿದು ಎಂಬರ್ಥ ಹೊರಡುತ್ತದೆ. ಬುದ್ಧಿಯು ಮನಸ್ಸನ್ನು ಆಳಬೇಕು; ಸರಿಯಾದ ದಾರಿಯಲ್ಲಿ ಮನಸ್ಸನ್ನು ನಡೆಸಬೇಕು. ಇದು ತನ್ನಿಂದಲೇ ಆಗಬೇಕಾದ ಕೆಲಸ; ಶಾಸ್ತ್ರವಾಗಲಿ ಗುರುವಾಗಲಿ ದಾರಿ ಯಾವುದೆಂದು ಹೇಳಬಹುದು ಅಷ್ಟೆ. 'ಆತ್ಮನಾ' ಎಂಬುದಕ್ಕೆ ಈ ಧ್ವನಿಯೂ ಇದೆ.

(34)

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್‌ತ್ರಯಂ ತ್ಯಜೇತ್ ॥

(16,21)

ನರಕಕ್ಕೆ ಮೂರು ದಾರಿಗಳಂತೆ. ನರಕವೆಂದರೆ ದುರ್ಗತಿ, ದುಃಖ; ಆಸುರ ಸ್ವಭಾವ. ಮಾರ್ಕಂಡೇಯ ಪುರಾಣದಲ್ಲೊಂದು ಒಕ್ಕಣೆಯಿದೆ. ಅಧರ್ಮ ಮತ್ತು ಹಿಂಸೆ ಇವರ ಮಗಳು ನಿರ್ಋತಿ (ಎಂದರೆ ಹಾಳಾಗುವುದು, ದುಗುಡ, ಅಳಲು). ನಿರ್ಋತಿಯ ಗಂಡ ಅನೃತ (ಎಂದರೆ ಸುಳ್ಳು, ಋತವಲ್ಲದ್ದು). ಇವರಿಬ್ಬರ ಮಗ ನರಕ (ದುಃಖವನ್ನನುಭವಿಸುವ ಎಡೆ). ನರಕನಿಗೆ ಮೂವರು ಸೋದರರು, ಭಯ, ಮಹಾಭಯ ಮತ್ತು ಮೃತ್ಯು (ಸಾವು). ಕಲ್ಪನೆಯ ಸ್ವಾರಸ್ಯ ತಿಳಿಯಿತಲ್ಲವೆ? ನರಕವೆಂಬುದೊಂದು ಲೋಕವೆಂದೂ, ಪಾಪಿಗಳು ಸತ್ತಮೇಲೆ ಇಲ್ಲಿ ಯಾತನೆಯನ್ನು ಅನುಭವಿಸುವರೆಂದೂ ವಾಡಿಕೆಯ ನಂಬಿಕೆ. ನರಕವಿರುವುದು ಕೆಳಗಡೆ; ಸ್ವರ್ಗವಿರುವುದು ಮೇಲ್ಗಡೆ; ನಾವಿರುವುದು ನಡುವೆ. ಗೀತೆಯಲ್ಲಿಯೇ ಸಾತ್ತ್ವಿಕರು ಮೇಲೆ (ಊರ್ಧ್ವಂ) ಏರುವವರೆಂದೂ, ತಾಮಸರು ಕೆಳಗೆ (ಅಧಃ) ಇಳಿಯುವರೆಂದೂ, ರಾಜಸರು ನಡುವೆ ಇರುವರೆಂದೂ ಹೇಳಿದೆಯಲ್ಲವೆ? ನರಕವೆಂದರೆ ತಾಮಸಜನರ ಸ್ಥಳ, ಸ್ಥಿತಿ, ಗತಿ. ಇದಕ್ಕೊಂದು ವಿಶೇಷಣವೂ ಇದೆ - 'ನಾಶನಂ ಆತ್ಮನಃ', ತನ್ನನ್ನು

ಹಾಳುಮಾಡಿಕೊಳ್ಳುವುದು. (ಇಲ್ಲಿ 'ಆತ್ಮ' ಎಂದರೆ ತಾನು ಎಂದರ್ಥ). ಎಂದರೆ ಬದುಕಿನ ಯಾವ ಪುರುಷಾರ್ಥವನ್ನೂ ಸಾಧಿಸಲಾಗದಿರುವುದು; ಜೀವದ ಸ್ವರೂಪನಾಶವೆನ್ನಬಹುದು. ತಪ್ಪು ದಾರಿ ಹಿಡಿದು ಹಾಳಾಗುವುದೇ ನರಕ; ಅನರ್ಥಪ್ರಾಪ್ತಿ.

ಮೂರು ದಾರಿಗಳು ಯಾವುವು? ಶ್ಲೋಕದಲ್ಲಿ ಹೇಳಿರುವುದು ಒಂದೇ ಬಾಗಿಲು (ದ್ವಾರ), ಅದರ ಮೂರು ಬಗೆಗಳು (ತ್ರಿವಿಧ). 'ದ್ವಾರ'ವೆಂದರೆ ದಾರಿಯೂ ಆಗುತ್ತದೆ, ದಾರಿಗಿಳಿಯುವ ಬಾಗಿಲೂ ಆಗುತ್ತದೆ; ನರಕದ ಒಳಕ್ಕೆ ಹೋಗುವ ಬಾಗಿಲು ಎನ್ನಿ. ಈ ಬಾಗಿಲನ್ನು ಹೊಕ್ಕಮೇಲೆ ಹಾಳಾಗುವುದು ತಪ್ಪದು. ತಾಮಸಸ್ವಭಾವ ಬೇರೂರುವುದಕ್ಕೆ ಕಾರಣಗಳನ್ನು ಇಲ್ಲಿ ಪಟ್ಟಿ ಮಾಡಿದ್ದಾರೆ - ಕಾಮ (ರಾಗ), ಕ್ರೋಧ (ದ್ವೇಷ) ಮತ್ತು ಲೋಭ (ಅತ್ಯಾಶೆ, ದುರಾಶೆ, ಮೋಹ). ಗೀತೆಯಲ್ಲಿ ದೈವೀಸಂಪತ್ತು (ಸಾತ್ತ್ವಿಕರದ್ದು), ಆಸುರೀ ಸಂಪತ್ತು (ತಾಮಸರದ್ದು) ಎಂಬ ವಿಭಾಗವಿದೆ. ಆಸುರೀಸಂಪತ್ತಿನ ಮೂಲವೇ ಕಾಮ; ಬಯಕೆ; ವಿಷಯಗಳನ್ನು ಕುರಿತಂತೆ ಆಸಕ್ತಿ, ರಾಗ, ರಕ್ತಿ, ಸಂಗ. ಅದರ ಇನ್ನೊಂದು ಮುಖ ಕ್ರೋಧ (ಸಿಟ್ಟು, ಹಗೆತನ, ಒಳಗುದಿ, ಉರಿ). ಇವೆರಡನ್ನೂ ಎತ್ತಿನಿಲ್ಲಿಸುವುದು ಲೋಭ (ಬೇರೆಯವರ ದ್ರವ್ಯವನ್ನು ತನ್ನದಾಗಿ ಮಾಡಿಕೊಳ್ಳುವ ಹವಣಿಕೆ. ತನ್ನದಾದಮೇಲೆ ಅದನ್ನು ಕಾಪಿಟ್ಟುಕೊಳ್ಳುವ ಹಟ). ಒಂದೇ ದಾರಿಗೆ ಇವು ಮೂರು ಒಳದಾರಿಗಳು; ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಹಾಗೆಂದೇ ಏಕವಚನ ಪ್ರಯೋಗ.

ಅಧ್ಯಾತ್ಮದಲ್ಲಿ ಮುಂದರಿಯಬೇಕೆನ್ನುವವರು ಈ ಮೂರನ್ನು ಬಿಡಬೇಕೆಂದು ಬೇರೆ ಹೇಳಬೇಕೆ? ರಾಜಸಸ್ವಭಾವದವರಿಗೆ ಹೇಳಬೇಕಾಗುತ್ತದೆ; ಇಲ್ಲವಾದರೆ ತಿಳಿಯುವುದಿಲ್ಲ.

(35)

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥

(2,64)

ಇಲ್ಲಿ ಬಿಡಬೇಕಾದುದನ್ನು ರಾಗ-ದ್ವೇಷ ಎಂಬೆರಡಾಗಿ ಹೇಳಿದ್ದಾರೆ. ಕಾಮ, ಕ್ರೋಧ ಎಂಬ ಮಾತುಗಳಿಗೆ ಪರ್ಯಾಯಪದಗಳು. ಮೇಲೆ ಹೇಳಿದ ಲೋಭವೆಂಬ ಇನ್ನೊಂದು ನರಕದ ದಾರಿಯನ್ನು ಕಾಮದಲ್ಲೇ ಅಡಗಿಸಿದ್ದಾರೆನ್ನಬಹುದು. ರಾಜಸಿಕ ಸ್ವಭಾವದಲ್ಲಿ ಎದ್ದು ಕಾಣುವುದು ರಾಗ-ದ್ವೇಷ. ಇವನ್ನು ಬಿಟ್ಟರೆ, ತಡೆಗಟ್ಟಿದರೆ, ರಜೋಗುಣಕ್ಕೆ ಪೆಟ್ಟುಬಿದ್ದಂತೆ.

ರಾಗ-ದ್ವೇಷಗಳು ಮನೆಮಾಡಿಕೊಳ್ಳುವುದು, ಮೊದಲಾಗುವುದು ಇಂದ್ರಿಯಗಳಲ್ಲಿ. ಆದ್ದರಿಂದ ಇಂದ್ರಿಯವ್ಯಾಪಾರದಲ್ಲೇ ರಾಗ-ದ್ವೇಷಗಳನ್ನು ಬಿಡಬೇಕು. ಇವನ್ನು ಬಿಟ್ಟಮೇಲೆ ಇಂದ್ರಿಯಗಳು ತಮಗೆ ಸಹಜವಾದ, ಸ್ವಾಭಾವಿಕವಾದ ಪ್ರವೃತ್ತಿಗಳಲ್ಲಿ ತೊಡಗುತ್ತವೆ.

ಇಂದ್ರಿಯ ವ್ಯಾಪಾರಗಳನ್ನೆ ಬಿಡಬೇಕೆಂದು ಹೇಳಿಲ್ಲ; ಹಾಗೆ ಬಿಡುವುದು ಸಾಧ್ಯವೂ ಇಲ್ಲ. ಬದುಕಿಗೆ ಬೇಕಾದ ವಿಷಯಗಳಲ್ಲಿ ಇಂದ್ರಿಯಗಳು ಪ್ರವೃತ್ತವಾಗಿಲ್ಲದಿದ್ದರೆ ಹೇಗೆ? ದೇಹ ಉಳಿಯಬೇಕಲ್ಲ? ದೇಹದ ಅಗತ್ಯಗಳಾದರೂ ತೀರಬೇಕಲ್ಲ? ಆದ್ದರಿಂದಲೇ ಶ್ಲೋಕದ ಮೊದಲ ಸಾಲು 'ರಾಗದ್ವೇಷವಿಯುಕ್ತೈಃ ಇಂದ್ರಿಯೈಃ ವಿಷಯಾನ್ ಚರನ್' ಎಂದಿದೆ. ಇಂದ್ರಿಯವ್ಯಾಪಾರವಿರಲಿ, ಇರಲೇ ಬೇಕು. ಆದರೆ ಇಂದ್ರಿಯಗಳು ರಾಗ-ದ್ವೇಷಗಳಿಂದ ಕೂಡಿರಬಾರದು.

ಮತ್ತೆ, ಇಂದ್ರಿಯ ವ್ಯಾಪಾರಕ್ಕೆ ಇನ್ನೊಂದು ವಿಶೇಷಣವನ್ನೂ ಹೇಳಿದ್ದಾರೆ, 'ಆತ್ಮವಶ್ಯೈಃ ಇಂದ್ರಿಯೈಃ' ಎಂದು. ಇಂದ್ರಿಯಗಳು ತನ್ನ ವಶದಲ್ಲಿರಬೇಕು; ತಾನು ಇಂದ್ರಿಯಗಳ ವಶದಲ್ಲಿದ್ದರೆ ಹೇಗೆ? ಇಲ್ಲಿ 'ತನ್ನ' ಎಂದರೆ ಮನಸ್ಸಿನ ಎಂದರ್ಥ. ಇಂದ್ರಿಯಗಳು ತಾವು ಹೋದದಾರಿಯಲ್ಲಿ ಮನಸ್ಸನ್ನು ಎಳೆದುಕೊಂಡುಹೋದರೆ ಅನರ್ಥ ತಪ್ಪಿದ್ದಲ್ಲ; ರಾಗ-ದ್ವೇಷಗಳು ಕೂಡಿಕೊಳ್ಳುತ್ತವೆ. ಆದ್ದರಿಂದ ಮನಸ್ಸು ಇಂದ್ರಿಯಗಳ ಮೇಲೆ ಅಂಕೆಯನ್ನಿರಿಸಿಕೊಳ್ಳಬೇಕು. ಶರೀರವೆಂಬ ರಥಕ್ಕೆ ಹೂಡಿದ ಕುದುರೆಗಳು ಇಂದ್ರಿಯಗಳು. ಅವನ್ನು ಬಿಗಿಹಿಡಿಯುವ, ಸರಿಯಾದ ದಾರಿಯಲ್ಲಿ ನಡೆಸುವ ಕಡಿವಾಣ ಮನಸ್ಸು. ಅಷ್ಟು ಸಾಲದು, ಮನಸ್ಸಾಗಲಿ ಸ್ವೇಚ್ಛೆಯಾಗಿ ಹರಿದಾಡದಿರುವಂತೆ ಬುದ್ಧಿಗೆ (ಸಾರಥಿಗೆ) ಅದು ವಿಧೇಯವಾಗಿರಬೇಕು, ಬುದ್ಧಿಯ ಎಣಿಕೆಗೆ ತಗ್ಗಿಬಗ್ಗಿ ನಡೆದುಕೊಳ್ಳಬೇಕು. ಇದು 'ವಿಧೇಯಾತ್ಮಾ' (ಕಿಂಕರೀಕೃತಮನಃ) ಎಂಬ ಮಾತಿನ ತಾತ್ಪರ್ಯ.

ಹೀಗೆ ಮಾಡಿದ್ದರಿಂದ ಬರುವುದೇನು? ಪ್ರಸಾದ. ಎಂದರೆ ಜೀವದ ನೆಮ್ಮದಿ, ಚಿತ್ತದ ಪ್ರಸನ್ನತೆ, ಅಂತಃಕರಣದ ನೈರ್ಮಲ್ಯ, (ಅಂತಃಕರಣಶುದ್ಧಿ). ಶ್ರಮವಿಲ್ಲದಂತೆ, ಪ್ರಯತ್ನದ ಅಗತ್ಯವಿಲ್ಲದಂತೆ ಪ್ರಶಾಂತಿಯ ಸ್ಥಿತಿ ಕೈಗೂಡುತ್ತದೆ. ಪ್ರಸಾದವೆಂದರೆ ಭಗವತ್ ಪ್ರಸಾದವೆಂದಾದರೂ ಆದೀತು. 'ವಿಧೇಯಾತ್ಮಾ' ಎಂಬ ಮಾತಿನಲ್ಲಿ ಆತ್ಮನೆಂದರೆ ಬುದ್ಧಿಯೆಂದಿಟ್ಟುಕೊಳ್ಳಬೇಕು. ಅದು ವಿಷಯಾಭಿಮುಖವಾಗದೆ ಅಂತರ್ಮುಖವಾದಾಗ ಆತ್ಮನ ಬೆಳಕು ಅದರ ಮೇಲೆ ಬೀಳುತ್ತದೆ. ಇದೇ ಆತ್ಮನ (ಎಂದರೆ ಪರಮಾತ್ಮನ) ಅನುಗ್ರಹ.

(36)

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥

(2,65)

ಒಮ್ಮೆ ಚಿತ್ತಪ್ರಸನ್ನತೆ (ಜೀವದ ನೆಮ್ಮದಿ) ಒದಗಿತೆಂದರೆ ಎಲ್ಲ ದುಗುಡಗಳೂ ಹುಟ್ಟಡಗಿ ಮರೆಯಾಗುತ್ತವೆ. ಎಲ್ಲ ದುಃಖಗಳು ಎನ್ನುವಾಗ ಆಧ್ಯಾತ್ಮಿಕ (ಶರೀರದ ರೋಗರುಜಿನಗಳು, ಮನಸ್ಸಿನ ಶಂಕೆ, ಆತಂಕಗಳು), ಆಧಿಭೌತಿಕ (ಪರಿಸರದಿಂದ ಎರಗಿಬರುವ ಕಷ್ಟಗಳು), ಆಧಿದೈವಿಕ (ಪ್ರಕೃತಿಯ ಪ್ರಕೋಪದಿಂದ ಕಾಣಿಸಿಕೊಳ್ಳುವ ಕಷ್ಟಗಳು) ಎಂಬ ಮೂರು ಬಗೆಯ ದುಃಖಗಳು ಸೇರುತ್ತವೆ. ಇವನ್ನೆ ತಾಪತ್ರಯವೆನ್ನುವುದು. ಪ್ರಕೃತಿಯ ಸಂಪರ್ಕವಿದ್ದಾಗಲೇ ಪುರುಷನಿಗೆ ದುಃಖ. ನೆಮ್ಮದಿಯೆಂದಾಗ ಪುರುಷ ತನ್ನ ಪಾಡಿಗೆ ತಾನು ಇರುತ್ತಾನೆ; ಪ್ರಕೃತಿಯ ಗೊಡವೆಯಿರುವುದಿಲ್ಲ. ಆಗ ದುಃಖವೆಲ್ಲಿಯದು?

ಯಾವನ ಚಿತ್ತವು ಹೀಗೆ ನೆಮ್ಮದಿಯಿಂದಿರುವುದೋ ಅವನ ಬುದ್ಧಿಯು ಎತ್ತೆತ್ತಲೂ ನೆಲೆಯಾಗಿ ನಿಲ್ಲುತ್ತದೆ (ಪರಿ ಅವತಿಷ್ಠತೇ). ಇಲ್ಲಿ ಬುದ್ಧಿಯೆಂದರೆ ಪ್ರಜ್ಞೆ, ಬ್ರಹ್ಮನ ಅಪರೋಕ್ಷಜ್ಞಾನ. ಹಿಂದಿನ ಶ್ಲೋಕದಲ್ಲಿ ಮನಸ್ಸಿನ ಅನುಗ್ರಹದಿಂದ ಒದಗುವ ಅಂತಃಕರಣಶುದ್ಧಿಯ ವಿಚಾರ ಬಂದಿತು; ಈ ಶ್ಲೋಕ ಅಂತಃಕರಣಶುದ್ಧಿಯಿಂದ ಅಪರೋಕ್ಷಜ್ಞಾನವುಂಟಾಗುವುದನ್ನು ತಿಳಿಸುತ್ತದೆ. ಅಪರೋಕ್ಷಜ್ಞಾನದಿಂದ ಮೋಕ್ಷ. ಜ್ಞಾನದಲ್ಲಿ ಪರೋಕ್ಷ ಮತ್ತು ಅಪರೋಕ್ಷ ಎಂಬೆರಡು ಬಗೆಗಳು. ಮೊದಲನೆಯದು ಹೊರಗಣ ವಿಷಯಗಳನ್ನು ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ತಿಳಿದುಕೊಳ್ಳುವುದು. ಎರಡನೆಯದು ನೇರಾಗಿ ಆತ್ಮನನ್ನು ಕಂಡುಕೊಳ್ಳುವುದು. ಆತ್ಮನ ಅಂತರ್ಯಾಮಿಯಾದ ಪರಮಾತ್ಮನನ್ನು ಹೀಗೆಯೇ ನೇರ ಅನುಭವದಿಂದ ಸಾಕ್ಷಾತ್ಕರಿಸಿಕೊಳ್ಳುವುದು ಬ್ರಹ್ಮಾಪರೋಕ್ಷ. ಈ ಅರಿವಾದಾಗ ಆತ್ಮತತ್ತ್ವವು ಆಕಾಶದಂತೆ ಎಲ್ಲ ಕಡೆಯೂ ('ಪರಿ') ನೆಲೆಗೊಂಡಿರುವುದು ತಿಳಿಯುತ್ತದೆ. ದುಃಖಗಳು ತೊಲಗುವುದು ಮಾತ್ರವಲ್ಲ; ಸುಖವೂ ತೋರಿಕೊಳ್ಳುತ್ತದೆ.

(37)

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ ॥

(2,66)

ಈ ಬಗೆಯ ಚಿತ್ತಪ್ರಸನ್ನತೆ (ಬುದ್ಧಿಯು ನೆಮ್ಮದಿಯಲ್ಲಿ ನೆಲೆಗೊಳ್ಳುವುದು) ಯೋಗವಿಲ್ಲದವನಿಗೆ ಬರಲಾರದು. ಯೋಗವುಳ್ಳವನು 'ಯುಕ್ತ'. ಯೋಗವೆಂದರೆ ತನ್ನ ಚಿತ್ತವನ್ನು ವಶಮಾಡಿಕೊಳ್ಳುವುದು, ಚಿತ್ತವೃತ್ತಿಗಳ ನಿರೋಧ. ಹೊರಗೆ ಹೋಗುವ ಮನಸ್ಸನ್ನು ತಡೆಗಟ್ಟಿ, ಬುದ್ಧಿಯೊಂದಿಗೆ ಹೊಂದಿಸಿಕೊಂಡು ಆತ್ಮನನ್ನು ಕಂಡುಕೊಳ್ಳುವುದು. ಈ ಸಾಧನೆಯನ್ನು ಹಿಡಿಯದವನಿಗೆ ಹಿಂದಿನ ಶ್ಲೋಕದಲ್ಲಿ ಹೇಳಿದ 'ಪ್ರಸಾದ' ಕೈಗೂಡುವುದಿಲ್ಲ.

ಹೀಗೆ ಯೋಗದ ದಾರಿ ಹಿಡಿಯದಿದ್ದರೆ ಭಾವನೆಯಿರದು. ಈವರೆಗೆ ಇಲ್ಲದಿರುವುದನ್ನು ಈಗ ಉಂಟುಮಾಡುವುದು ಭಾವನೆ; ಕಲ್ಪನೆ, ಚಿಂತನೆ. ಧ್ಯಾನ ಎಂದರೂ ಅದೇ. ಚಿತ್ತವೃತ್ತಿನಿರೋಧ ಮಾಡಿದ್ದರ ಫಲವೇನೆಂದರೆ ಧ್ಯಾನಕ್ಕೆ ಅನುಕೂಲತೆ. ಧ್ಯಾನಮಾಡುವುದರ ಫಲ ಶಾಂತಿ (ಚಿತ್ತದ ಉಪಶಮ; ವಿಷಯಗಳಿಂದ ಮನಸ್ಸನ್ನು ಹಿಂದಿರುಗಿಸಿ ಆತ್ಮನಲ್ಲಿ ನಿಲ್ಲಿಸಿಕೊಳ್ಳುವುದು (ಉಪರತಿ). ಶಾಂತಿಯಲ್ಲಿ ಅಪರೋಕ್ಷ ಜ್ಞಾನವು ಸಿದ್ಧಿಸುತ್ತದೆ. ಇದರಿಂದಾಗಿ ಮುಕ್ತಿಯ ಸುಖ ಅನುಭವಕ್ಕೆ ಬರುತ್ತದೆ.

ಇದನ್ನೇ ಈ ಶ್ಲೋಕವು ಹೀಗೆ ಹೇಳುತ್ತದೆ - ಮನಸ್ಸಿನ ನಿಗ್ರಹ (ಯೋಗ) ವಿಲ್ಲದಿದ್ದರೆ ಧ್ಯಾನ (ಭಾವನೆ) ಇಲ್ಲ; ಧ್ಯಾನವಿಲ್ಲದಿದ್ದರೆ ಅಪರೋಕ್ಷಜ್ಞಾನ (ಶಾಂತಿ) ಇಲ್ಲ; ಅಪರೋಕ್ಷಜ್ಞಾನವಿಲ್ಲದಿದ್ದರೆ ಮುಕ್ತಿ (ಸುಖ) ಇಲ್ಲ.

ಬುದ್ಧಿಯೆಂದರೆ ಅಪರೋಕ್ಷಜ್ಞಾನವೆಂದಿಟ್ಟುಕೊಂಡಾಗ ಭಾವನೆಯೆಂಬ ಧ್ಯಾನವು ಇರದಿದ್ದರೆ ಬುದ್ಧಿಯೂ ಇರದು. ಯೋಗವಿಲ್ಲದವನಿಗೆ ಬುದ್ಧಿಯಿಲ್ಲ; ಏಕೆಂದರೆ ಯೋಗವಿಲ್ಲದವನಿಗೆ ಧ್ಯಾನವೂ ಇಲ್ಲ. 'ಅಯುಕ್ತಸ್ಯ ಭಾವನಾ ನಾಸ್ತಿ; ಅಭಾವಯತಃ ಬುದ್ಧಿರ್ನಾಸ್ತಿ' ಎಂಬುದು ಯೋಜನೆ. ಧ್ಯಾನರಹಿತನಾದವನಿಗೆ ಅಪರೋಕ್ಷಜ್ಞಾನವೂ ಇರದು.

(38)

ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಂ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥

(2,44)

ಇಲ್ಲಿ ವ್ಯವಸಾಯದ ಸ್ವರೂಪವನ್ನು ಪಡೆದುಕೊಂಡ ಬುದ್ಧಿಯ ವಿಚಾರ ಬಂದಿದೆ. ಇದನ್ನು ವ್ಯವಸಾಯಾತ್ಮಿಕಾ ಬುದ್ಧಿಯೆಂದು ಕರೆಯಲಾಗಿದೆ. ವ್ಯವಸಾಯವೆಂಬ ಮಾತಿಗೆ ಪ್ರಯತ್ನ, ಶ್ರಮ, ನಿಶ್ಚಯ, ಕ್ರಿಯೆ, ಉದ್ಯಮ ಎಂಬರ್ಥಗಳಿವೆ. ಯಾವ ಬುದ್ಧಿಯಲ್ಲಿ ನಿಶ್ಚಯವಿರುವುದೋ ಅದು ವ್ಯವಸಾಯಾತ್ಮಕವಾದದ್ದು. ಆತ್ಮನನ್ನೆ ಕಂಡುಕೊಳ್ಳುವ ತವಕವನ್ನು ಸೂಚಿಸುತ್ತದೆ. ಆತ್ಮನನ್ನು ಕಂಡುಕೊಂಡು, ಅದರಲ್ಲೆ ನೆಲೆಗೊಂಡರೆ ಅದು ಸಮಾಧಿ. ವ್ಯವಸಾಯಾತ್ಮಕವಾದ ಬುದ್ಧಿಯು ಸಹಜವಾಗಿ ಸಮಾಧಿಯಲ್ಲಿ ಮುಗಿಯಬೇಕು.

ಆದರೆ ಇದಕ್ಕೆ ಅಡ್ಡಿಯಾಗಿ ಚಿತ್ತವೃತ್ತಿಯಿರುವುದು ಸಾಧ್ಯ. ಇಂದ್ರಿಯಗಳಿಗೆ ಇಷ್ಟವೆನಿಸಿದ್ದು, ಮನಸ್ಸಿಗೆ ಬೇಕೆನಿಸಿದ್ದು ಭೋಗ. ಅದಕ್ಕೆ ಬೇಕಾದ ದ್ರವ್ಯಾನುಕೂಲತೆ, ಸಾಮಗ್ರಿಗಳ ಸಿದ್ಧತೆಗಳನ್ನು ಐಶ್ವರ್ಯವೆನ್ನುತ್ತಾರೆ (ಒಡೆತನ). ಭೋಗ, ಐಶ್ವರ್ಯಗಳಲ್ಲೇ ಮುಳುಗಿದ ಮನಸ್ಸು, ಅಂಥ ಮನಸ್ಸಿಗೆ ಒಳಪಟ್ಟ ಬುದ್ಧಿ. ಈ ಬುದ್ಧಿಯಲ್ಲಿಯೂ ನಿಶ್ಚಯವಿರಬಹುದು. ಭೋಗವೇ ಬೇಕಾದದ್ದೆಂಬ ನಿಶ್ಚಯ. ಆಗ ಅದೂ ವ್ಯವಸಾಯಾತ್ಮಕವಾದ ಬುದ್ಧಿಯೇ ಎನ್ನಬೇಕು. ಆದರೆ ಅದರಿಂದ ಸಮಾಧಿ ದೊರಕಲಾರದು; ಅಂಥ ಬುದ್ಧಿಯನ್ನು ಸಮಾಧಿಯಲ್ಲಿ ತೊಡಗಿಸುವುದಾಗದು.

ಕರ್ಮಕಾಂಡದಲ್ಲಿ ಅನುರಕ್ತಿಯುಳ್ಳವರು ಕಾಮ್ಯಕರ್ಮಗಳಲ್ಲಿ ತೊಡಗುವುದುಂಟು. ಅವರು ಕಾಮ್ಯಕರ್ಮಗಳಿಂದ ಬಯಸುವುದು ಭೋಗ, ಐಶ್ವರ್ಯಗಳನ್ನೇ. ಇವುಗಳಿಂದಲೇ ಕರ್ಮಕಾಂಡಿಗಳು ಕದ್ದೊಯ್ಯಲ್ಪಡುವರು; ಅವರ ಮನಸ್ಸೆಲ್ಲ ಇದರಲ್ಲೆ ಇರುತ್ತದೆ. ಮನಸ್ಸು ಎರಡು ಬಗೆಯದು-ಅಶುದ್ಧ, ಎಂದರೆ ಬಯಕೆಗಳಿಂದ ಕೂಡಿದ್ದು; ಶುದ್ಧ, ಎಂದರೆ ಬಯಕೆಗಳನ್ನು ಬಿಟ್ಟದ್ದು. ಬಯಕೆಗಳಿಂದ ಕೂಡಿದ್ದು ಬಹಿರ್ಮುಖಿ; ಹೊರಗಣ ಪ್ರವೃತ್ತಿಗಳು ಅಲ್ಲಿ ಮುಖ್ಯ. ಬಯಕೆಗಳನ್ನು ಬಿಟ್ಟಿದ್ದು ಅಂತರ್ಮುಖಪ್ರವಣ; ಒಳಗೆ ಹರಿಯುವ ಒಲವು ಉಳ್ಳದ್ದು. ಅಂತರ್ಮುಖ ಪ್ರಾವಣ್ಯವಿಲ್ಲದೆ ಸಮಾಧಿಯು ಸಾಧ್ಯವಿಲ್ಲ.

(39)

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ॥

(2,41)

ನಿಶ್ಚಯವಿರುವ ಬುದ್ಧಿಯು ಈ ಕರ್ಮಾನುಷ್ಠಾನದ ನೆಲೆಯಲ್ಲಿ (ಎಂದರೆ ಜೀವಲೋಕದಲ್ಲಿ) ಒಂದೇ. ಎಲ್ಲ ಅಧ್ಯಾತ್ಮರಸಿಕರೂ ಬಯಸುವುದು ಸಮಾಧಿಸುಖವನ್ನೆ; ಮೋಕ್ಷವೆಂದರೆ ಅದೇ. ಅದಕ್ಕೆ ಇರುವುದು ಒಂದೇ ದಾರಿ. ಆತ್ಮನ ಸ್ವರೂಪವನ್ನು ಯಥಾವತ್ತಾಗಿ (ಎಂದರೆ ಇದ್ದುದನ್ನು ಇದ್ದಂತೆಯೆ) ತಿಳಿಯುವುದು ಆ ದಾರಿ. ಅದನ್ನು ಬಿಟ್ಟು ಬೇರೆ ದಾರಿಯಿರದು. ಅದರಿಂದಲೇ ಶ್ರೇಯಸ್ಸು. ಹೀಗೆ, ಯಾವುದನ್ನು ಪಡೆದುಕೊಳ್ಳಬೇಕು (ಉಪೇಯ), ಅದನ್ನು ಪಡೆದುಕೊಳ್ಳುವ ಬಗೆ ಹೇಗೆ (ಉಪಾಯ) ಎಂಬುದನ್ನು ವಿವೇಕದಿಂದ ನಿಶ್ಚಯಿಸಿಕೊಂಡದ್ದು 'ವ್ಯವಸಾಯಾತ್ಮಿಕಾ ಬುದ್ಧಿ'.

ಈ ವಿವೇಕಬುದ್ಧಿಯಿಲ್ಲದವರು 'ಅವ್ಯವಸಾಯಿ'ಗಳು. ಅವರು ಕರ್ಮಕಾಂಡವನ್ನು ನಂಬಿದವರು. ಅವರ ಬಯಕೆಗಳು ನೂರಾರು, ಅವನ್ನು ತೀರಿಸಿಕೊಳ್ಳಲು ಅವರು ಹಿಡಿಯುವ ದಾರಿಗಳೂ ಹತ್ತಾರು. ಎಂದಮೇಲೆ ಅವರ ಬುದ್ಧಿ 'ಒಂದೇ' ಆಗಿರುವುದು ಹೇಗೆ? ಅನೇಕ ರೆಂಬೆಕೊಂಬೆಗಳಿರುವ ಮರದಂತೆ ಅವರ ಬುದ್ಧಿ. ಕಾಮ್ಯಕರ್ಮಗಳಲ್ಲಿ ತೊಡಗಿರುವವರು ಬಹಿರ್ಮುಖಿಗಳು. ಹೊರಗಣ ವಿಷಯಗಳಿಗೆ ಕೊನೆಯೆಂಬುದಿದೆಯೇ? ಅವರು ವಿಷಯಗಳನ್ನೆ ಅರಸಿ ಹೋಗುವಾಗ ಬುದ್ಧಿಯೂ ಎಣಿಕೆಗೆ ಸಿಗದಷ್ಟು ಬಗೆಗಳಲ್ಲಿ ಒಡೆದುಹೊಗುತ್ತದೆ. ಅವರ ದಾರಿ ಶ್ರೇಯಸ್ಸಿನದಲ್ಲ (ಜೀವಕ್ಕೆ ಹಿತವೆನಿಸುವುದಲ್ಲ); ಪ್ರೇಯಸ್ಸಿನದು (ವಿಷಯ ಸುಖಗಳನ್ನಷ್ಟೆ ಬಯಸುವಂಥದು).

(40)

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾऽऽತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾತ್ ॥

(8,12)

ವ್ಯವಸಾಯಾತ್ಮಕವಾದ ಬುದ್ಧಿ ಒಂದೆಂದೆವಲ್ಲ, ಅದು ಯೋಗಧಾರಣದಿಂದ ಒದಗಿ ಬರುತ್ತದೆ. ಯೋಗವೆಂಬ ಧಾರಣೆ. ಧಾರಣೆಯೆಂದರೆ ಎತ್ತಿ ಹಿಡಿಯುವುದು, ನಿಲ್ಲಿಸುವುದು. ಯೋಗವೆಂದರೆ ಸಮಾಧಿ; ಸಮಾಧಿಯನ್ನು ಎತ್ತಿಹಿಡಿಯುವುದು ಯೋಗದ ಬಲ. ಯೋಗಧಾರಣೆಯಿಂದ ಎನ್ನುವಾಗ ಯೋಗದ ಬಲದಿಂದ ಎಂದೇ ಅರ್ಥ. ಅದರ ವಿವರಗಳನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ.

ಎಲ್ಲ ಬಾಗಿಲಗಳನ್ನೂ ಅನಗತ್ಯವಾದುದಕ್ಕೆ ಮುಚ್ಚಿ, ಮನಸ್ಸನ್ನು ಹೃದಯದಲ್ಲಿ ನಿಲ್ಲಿಸಿ, ತನ್ನ ಪ್ರಾಣವಾಯುಗಳನ್ನು ಮೇಲೆ ಒಯ್ದು ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಯೋಗಧಾರಣೆಯಿಂದ, ಎಂದು ಈ ಶ್ಲೋಕದ ಅರ್ಥ.

ಬಾಗಿಲುಗಳೆಂದರೆ ಇಂದ್ರಿಯಗಳು; ವಿಷಯಾನುಭವದ ಬಾಗಿಲುಗಳು. ಇವನ್ನು ಬಿಗಿಹಿಡಿದು (ಸಂಯಮ್ಯ), ಎಂದರೆ ಎಷ್ಟು ಅಗತ್ಯವೋ ಅಷ್ಟು ತೊಡಗಿಸಿ, ಉಳಿದಂತೆ ಯಾವ ವಿಷಯವೂ ಒಳನುಗ್ಗದಂತೆ ಮುಚ್ಚಿ ಎಂದರ್ಥ. ಇದನ್ನೇ, ಪಾತಂಜಲಯೋಗದ ಪರಿಭಾಷೆಯಲ್ಲಿ ಪ್ರತ್ಯಾಹಾರವೆನ್ನುವರು; ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದುಕೊಳ್ಳುವುದು, ಹೊರಗೆ ಹರಿಯದಂತೆ ತಡೆಹಿಡಿಯುವುದು. ಮನಸ್ಸನ್ನು ಹೃದಯದಲ್ಲಿ ನಿಲ್ಲಿಸುವುದೆಂದರೆ ಧಾರಣ-ಧ್ಯಾನಗಳು, ಇವೂ ಪಾತಂಜಲಯೋಗದ ಪರಿಭಾಷೆಗಳೇ. ಆದರೆ ಇಲ್ಲಿ ಹೃದಯವೆಂದರೆ ನಾವು ಸಾಮಾನ್ಯವಾಗಿ ತಿಳಿದಿರುವ ಶರೀರದ ಅವಯವ ವಿಶೇಷವಲ್ಲ. ಶರೀರದ ಕೇಂದ್ರಸ್ಥಾನ. ಶರೀರದ ಎಲ್ಲ ವ್ಯಾಪಾರಗಳೂ ಎಲ್ಲಿ ಕಲೆಯುವುವೋ ಆ ಸ್ಥಾನ (ಹ್ರಿಯತೇ ಜಗತ್). ಅಲ್ಲಿ ಮನಸ್ಸನ್ನು ಅತ್ತಿತ್ತ ಅಲುಗದಂತೆ, ಹೊರಗೆ ಹರಿದಾಡದಂತೆ ನಿಲ್ಲಿಸುವುದು ಧಾರಣೆ, ಮನೋನಿರೋಧ.

'ಆತ್ಮನಃ' (ತನ್ನ) 'ಪ್ರಾಣಂ' (ಪ್ರಾಣವಾಯುವನ್ನು), 'ಮೂರ್ಧ್ನಿ' (ತಲೆಯಲ್ಲಿ), 'ಆಧಾಯ' (ಒಯ್ದು ನಿಲ್ಲಿಸಿ) ಎಂಬುದು ಶ್ಲೋಕದ ಎರಡನೆಯ ಸಾಲಿನ ಮೊದಲಭಾಗ. ಮೂರ್ಧ ಎನ್ನುವ ಮಾತಿಗೆ ತಲೆ, ತಲೆಯೋಡೆ, ಹಣೆ, ಪ್ರಧಾನವಾದ ಅಂಗ, ಎಲ್ಲಕ್ಕಿಂತ ಮೇಲಿರುವುದು, ಎತ್ತರದಲ್ಲಿರುವುದು, ಮೊದಲಾಗಿರುವುದು, ಮುಖ್ಯವಾದುದು ಎಂಬರ್ಥಗಳಿವೆ. ಪ್ರಸ್ತುತ ಸಂದರ್ಭದಲ್ಲಿ, ಪ್ರಾಣವಾಯುಗಳನ್ನು ಒಯ್ಯಬಹುದಾದ

ಶರೀರದ ಅತಿ ಎತ್ತರದ ಭಾಗವೆಂದರೆ ಭ್ರೂಮಧ್ಯೆ (ಹುಬ್ಬುಗಳ ನಡುವೆ ಇರುವ ಆಜ್ಞಾಚಕ್ರ); ಇದು ಸುಷುಮ್ನಾನಾಡಿಯ ಮೇಲ್ತುದಿಯೂ ಹೌದು. ಸುಷುಮ್ನಾನಾಡಿಯು ಎಲ್ಲ ಶಾರೀರಕ, ಮಾನಸ ಕ್ರಿಯೆಗಳಿಗೂ ದ್ವಾರ ರೂಪವಾಗಿರುವುದು. ಇದರ ಮೇಲ್ಭಾಗದಲ್ಲಿ ಬ್ರಹ್ಮರಂಧ್ರ. ಹೀಗೆ ಕ್ರಿಯಾದ್ವಾರವಾದ ಪ್ರಾಣವಾಯುವನ್ನು ಯೋಗಬಲದಿಂದ ಮೇಲುಮೇಲಕ್ಕೆ ಒಯ್ದು ಭ್ರೂಮಧ್ಯದಲ್ಲಿ ನಿಲ್ಲಿಸಿದಾಗ ಆತ್ಮಸಾಕ್ಷಾತ್ಕಾರವು ಸಾಧ್ಯವಾಗುತ್ತದೆ.

ಯೋಗಧಾರಣೆಯಲ್ಲಿ ಬಾಹ್ಯೇಂದ್ರಿಯಗಳ ನಿರೋಧ ಮೊದಲ ಹೆಜ್ಜೆ, ಮನೋನಿರೋಧ ಎರಡನೆಯದು, ಪ್ರಾಣನಿಗ್ರಹಣ ಮೂರನೆಯದು.

(41)

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥

(2,48)

ಯೋಗದಲ್ಲಿ ನೆಲೆನಿಂತು, ಮಾಡಬೇಕಾದ ಕೆಲಸಗಳನ್ನು ಮಾಡಬೇಕು. ಹಿಂದೆ ಹೇಳಿದ ಯೋಗಧಾರಣೆಯಲ್ಲಿ ಇಂದ್ರಿಯನಿಗ್ರಹ, ಪ್ರಾಣವಾಯುನಿಗ್ರಹಣಗಳು ಸೇರುತ್ತವೆ. ಹೀಗೆ ಯೋಗಸಾಧನೆಯಲ್ಲಿ ತೊಡಗಿರುವುದೇ ಯೋಗದಲ್ಲಿ ನೆಲೆನಿಲ್ಲುವುದು (ಯೋಗ-ಸ್ಥ). ಇನ್ನು 'ಕೆಲಸಗಳನ್ನು ಮಾಡು' (ಕುರು ಕರ್ಮಾಣಿ) ಎನ್ನುವಾಗ ದೇಹಧಾರಣೆಗೆ, ಬದುಕಿಗೆ ಅಗತ್ಯವಾಗಿ ಮಾಡಲೇಬೇಕಾದ ಕೆಲಸಗಳೆಂದು ತಿಳಿಯಬೇಕು; ಕಾಮ್ಯ ಕರ್ಮಗಳೆಲ್ಲ ಇದರಲ್ಲಿ ಸೇರುವುದಿಲ್ಲ. ನಿತ್ಯ ನೈಮಿತ್ತಿಕವೆಂಬಂಥ ಕ್ರಿಯೆಗಳು ಸೇರುತ್ತವೆ. ಶಾರೀರಕವಾದ ವ್ಯಾಪಾರಗಳೂ ಸೇರುತ್ತವೆ. ದೈಹಿಕ, ಮಾನಸಿಕ, ವಾಚನಿಕ ಮೂರು ಬಗೆಯ ಕೆಲಸಗಳಿರುವುದರಿಂದ 'ಕರ್ಮಾಣಿ' ಎಂಬ ಬಹುವಚನಪ್ರಯೋಗ.

ಮಾಡಬೇಕಾದುದು ಹೇಗೆ ಎಂಬುದನ್ನು ಹೇಳುವುದು ಶ್ಲೋಕದ ಉದ್ದೇಶ. 'ಸಂಗವನ್ನು ಬಿಟ್ಟು' ಮಾಡಬೇಕು. ಸಂಗವೆಂದರೆ ಕೆಲಸದ ಪ್ರಯೋಜನದೊಂದಿಗೆ ತನ್ನ ಪ್ರಯತ್ನವನ್ನು ತೆಕ್ಕೆಹಾಕಿಕೊಳ್ಳುವುದು (ಫಲವನ್ನು ಬಯಸಿ ಕೆಲಸಮಾಡುವುದು, ಫಲಸ್ನೇಹ; ಫಲದಲ್ಲೇ ಕಣ್ಣಿಟ್ಟಿರುವುದು, ಫಲಾಭಿನಿವೇಶ). ಅಷ್ಟೇ ಅಲ್ಲ, ತಾನು ಮಾಡುವವನು, ತನ್ನಿಂದ ಕೆಲಸ ನಡೆಯುತ್ತಿದೆ ಎಂಬ ಅನಿಸಿಕೆಯೂ ಸಂಗವೇ; ಕರ್ತೃತ್ವಾಭಿಮಾನ. ಇದನ್ನು ಬಿಟ್ಟು

ಎಂದರ್ಥ. ಮಾಡಿದ ಕೆಲಸ ಕೈಗೂಡಬೇಕು; ಅದು ಸಿದ್ಧಿ. ಕೈಗೂಡದಿದ್ದರೆ ಅಸಿದ್ಧಿ. ಸಿದ್ಧಿಯಾದರೆ ಸಂತೋಷ ಅಸಿದ್ಧಿಯಿಂದ ದುಗುಡ. ಕೆಲಸ ಮಾಡುವಾಗ ಸಿದ್ಧಿಯ ಕಡೆ ಗಮನವಿರಬೇಕು. ಆದರೆ ಯಾವುದಾದರೂ ಕೆಲಸ ಕೈಗೂಡುವುದು ಐದು ಕಾರಣಗಳಿಂದ ಎಂದು ಹಿಂದೆಯೇ ಹೇಳಿದೆವಲ್ಲ? ಆದುದರಿಂದ ಮಾಡಿದ ಕೆಲಸ ಸಿದ್ಧಿಸಿಯೇ ಸಿದ್ಧಿಸುತ್ತದೆ ಎನ್ನುವಂತಿಲ್ಲ. ಕೆಲಸ ಮುಗಿದಮೇಲೆ, ಕೆಲಸ ಕೈಗೂಡಿತೋ ಇಲ್ಲವೋ ಅದಕ್ಕೆ ತಲೆಕೆಡಿಸಿಕೊಳ್ಳಬಾರದು. ಸಿದ್ಧಿ-ಅಸಿದ್ಧಿಗಳಲ್ಲಿ ಸಮನಾಗಿರುವುದು ಯೋಗದ ದಾರಿ.

ಯೋಗವೆಂದರೇನು? ಈ ಬಗೆಯ ಸಮತ್ವವೇ ಯೋಗ. ಸಮತ್ವ ಎನ್ನುವ ಮಾತಿನಲ್ಲಿ ಸಿದ್ಧಿಯಾದರೇನು ಆಗದಿದ್ದರೇನು ಒಂದೇ, ಲಾಭವೇನು ನಷ್ಟವೇನು ಒಂದೇ, ಗೆಲುವೇನು ಸೋಲೇನು ಒಂದೇ ಎಂಬ ದೃಷ್ಟಿ ಕಾಣುತ್ತದೆ. ಯಾವುದರಿಂದಲೂ ನೆಮ್ಮದಿಯನ್ನು ಕೆಡಿಸಿಕೊಳ್ಳದಿರುವುದು; ಚಿತ್ತಸಮಾಧಾನ; ನಿರ್ವಿಕಾರತೆ. ಅದರ ಹಿನ್ನೆಲೆಯಲ್ಲಿ ಫಲದ ಚಿಂತೆಯನ್ನು ಬಿಡುವುದು, ಕರ್ತೃತ್ವಾಭಿಮಾನವನ್ನು ಬಿಡುವುದು ಇರುತ್ತದೆ; ಇದು ತ್ಯಾಗ. ಈ ಬಗೆಯ ತ್ಯಾಗದಿಂದ ಕೂಡಿದ ಸಮತ್ವವನ್ನೆ ಇಲ್ಲಿ ಯೋಗವೆಂದು ಕರೆದಿರುವುದು. ಯೋಗದಲ್ಲಿ ಕೆಲಸಗಳನ್ನು ಮಾಡುವುದರ ತ್ಯಾಗವಿಲ್ಲ; ಕೆಲಸಮಾಡುವುದರಲ್ಲಿರಬೇಕಾದ ಜಾಣತನ (ಕೌಶಲ)ವನ್ನು ಹೇಳುವಾಗ ಸಂಗತ್ಯಾಗವನ್ನು ಸೂಚಿಸಲಾಗಿದೆ. 'ಕುರು ಕರ್ಮಾಣಿ' ಎಂಬುದರ ಜೊತೆಜೊತೆಗೇ 'ಸಂಗಂ ತ್ಯಕ್ತ್ವಾ' ಎಂದು ಹೇಳಿರುವುದನ್ನು ಗಮನಿಸಬೇಕು.

(42)

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥

(6,35)

ಮನಸ್ಸು ಚಂಚಲವೆಂಬುದನ್ನು ಯಾರರಿಯರು? ಇಂದ್ರಿಯಗಳಿಗಾದರೆ ನಿರ್ದಿಷ್ಟ ಸ್ಥಾನಗಳಿವೆ; ಅವುಗಳ ವೃತ್ತಿಗಳು ಆಯಾ ಸ್ಥಾನಗಳಲ್ಲಿ ಅಷ್ಟೆ, ಬೇರೆ ವಿಷಯಗಳ ಗೊಡವೆ ಒಂದೊಂದು ಇಂದ್ರಿಯಕ್ಕೆ ಇಲ್ಲ. ಆದ್ದರಿಂದ ಅವು ಅಷ್ಟು ಸ್ವೇಚ್ಛೆಯಾಗಿ ಕೆಲಸಮಾಡುವಂತಿಲ್ಲ. ಶಬ್ದವಿದ್ದಾಗ ಕಿವಿಯ ಕೆಲಸ; ಕಣ್ಣು ತೆಪ್ಪಗಿರುತ್ತದೆ. ಮನಸ್ಸಿಗಾದರೋ ಶರೀರದಲ್ಲೆಲ್ಲೂ ಅದಕ್ಕೆಂದೇ ಒಂದು ಸ್ಥಾನವಿಲ್ಲ. ಎಲ್ಲ ಇಂದ್ರಿಯಗಳ ವೃತ್ತಿಗಳೂ ಅದರ ವೃತ್ತಿಗಳೇ. ಒಂದೆಡೆ ನಿಲ್ಲದೆ ಅತ್ತಿತ್ತ ಅಲೆದಾಡುವುದೇ ಅದರ ಸ್ವಭಾವ. ಅದು ಒಂದೆಡೆ ನಿಂತುಬಿಟ್ಟಿತೆಂದರೆ ಇಂದ್ರಿಯಗಳು ಕೆಲಸ ಮಾಡುವುದು ಹೇಗೆ?

ಹೀಗೆ ಸದಾ ಓಡಿಯಾಡುತ್ತಿರುವ ಮನಸ್ಸನ್ನು ಬಿಗಿಹಿಡಿಯಬೇಕೆಂದರೆ ಆದೀತೆ? ಅದನ್ನು ತಡೆಹಿಡಿಯುವುದು ಕಷ್ಟವೇ. ಎಲ್ಲ ಸಾಧಕರಿಗೂ ಇದೊಂದು ದೊಡ್ಡ ತೊಡಕು. ಮೊದಲು ಮನಸ್ಸನ್ನು ಬಿಗಿಹಿಡಿಯದಿದ್ದರೆ, ಅದರ ಓಡಿಯಾಟವನ್ನು ನಿಲ್ಲಿಸದಿದ್ದರೆ, ಮುಂದಿನ ಸಾಧನೆಯೆಲ್ಲ ವ್ಯರ್ಥವೇ. ಹಾಗೆ ಬಿಗಿಹಿಡಿಯುವುದು, ನಿಲ್ಲಿಸುವುದು ಏನೇನೂ ಸುಲಭವಲ್ಲ. ಮನಸ್ಸನ್ನು ಒಮ್ಮೆಲೆ ಬಿಗಿಹಿಡಿದು ಬಿಡುತ್ತೇನೆ ಎಂದು ಭಾವಿಸುವವನು ದಡ್ಡ; ಅದಕ್ಕೆ ಹೊರಡುವವನು ಹುಚ್ಚು. ಆದರೆ ಅದು ಸಾಧ್ಯವೇ ಇಲ್ಲವೆನ್ನುವಂತಿಲ್ಲ. ಅದು ಸಾಧ್ಯವಿರದಿದ್ದರೆ ಚಿತ್ತವೃತ್ತಿ ನಿರೋಧಕ್ಕಾಗಿ ಯೋಗ, ಚಿತ್ತದ ಏಕಾಗ್ರತೆಗೆ ಸಾಧನೆ ಎಂದೆಲ್ಲ ಹೇಳುವುದೇತಕ್ಕೆ? ಸಾಧ್ಯವಲ್ಲದ್ದನ್ನು ಶಾಸ್ತ್ರ ಹೇಳಿದರೆ ಅದನ್ನೊಪ್ಪುವವರು ಯಾರು? ಅದರಂತೆ ನಡೆಯುವವರು ಯಾರು? ಶಾಸ್ತ್ರದ ಬೆಲೆಯಾದರೂ ಏನು? ಪ್ರಯೋಜನವೇನು? ಮನೋನಿಗ್ರಹವು ಸಾಧ್ಯವೆಂದು ಶಾಸ್ತ್ರದ ನಿರ್ಣಯ; ಅದು ಅಗತ್ಯವೆಂದು ಯೋಗದ ಎಣಿಕೆ.

ಹರಿದಾಡುವ ಮನಸ್ಸನ್ನು ನಿಲ್ಲಿಸುವ ಉಪಾಯವೇನು? ತಾನಾಗಿಯಂತೂ ಎಂದೂ ಅದು ನಿಲ್ಲುವುದಿಲ್ಲ. ಅದನ್ನು ಹಿಡಿದಿಡಲು ಪ್ರಯತ್ನಪಡಬೇಕು, ಉಪಾಯವೊಂದನ್ನು ಬಳಸಿಕೊಳ್ಳಬೇಕು. ಗೀತೆಯೂ ಪಾತಂಜಲಯೋಗಸೂತ್ರವೂ ಅಭ್ಯಾಸ, ವೈರಾಗ್ಯಗಳನ್ನು ಉಪಾಯವಾಗಿ ಸೂಚಿಸಿವೆ. ಗೀತೆಯ ಮೇಲಿನ ಮಾತಿಗೆ ಸಂವಾದಿಯಾಗಿ ಯೋಗಸೂತ್ರದಲ್ಲಿ 'ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ' ಎಂಬ ಮಾತಿದೆ. ಅಭ್ಯಾಸವೆಂದರೆ ಮತ್ತೆ ಮತ್ತೆ ಮಾಡುವುದು, ಕೈಗೂಡುವವರೆಗೆ ಮಾಡುತ್ತಲೆ ಇರುವುದು. ಮೆಲ್ಲಮೆಲ್ಲಗೆ, ಹಂತಹಂತವಾಗಿ, ಕ್ರಮವೊಂದನ್ನು ಹಿಡಿದು ಮನಸ್ಸನ್ನು ವಿಷಯಗಳಿಂದ ಬಿಡಿಸಿ, ಹಿಂದಿರುಗಿಸಿ, ಆತ್ಮದ ಕಡೆಗೆ ತಿರುಗಿಸುವುದು ಅಭ್ಯಾಸ. ಇದನ್ನು ಧ್ಯಾನಾಭ್ಯಾಸವೆಂದೂ ಕರೆಯುತ್ತಾರೆ. ಇದರಿಂದ ಕ್ರಮವಾಗಿ ಮನೋನಿಗ್ರಹವಾಗುತ್ತದೆ.

ಅಭ್ಯಾಸವು ಕೈಗೂಡಬೇಕಾದರೆ ವೈರಾಗ್ಯದ ನೆರವಿರಬೇಕು. ವೈರಾಗ್ಯವೆಂದರೆ ಕಾಡಿಗೆ ಓಡುವುದು, ಕಾವಿ ತೊಡುವುದು ಎಂದರ್ಥವಲ್ಲ. ಮನಸ್ಸು ಆತ್ಮದ ಕಡೆಗೆ ತಿರುಗಬೇಕು, ಅಲ್ಲಿ ನಿಲ್ಲಬೇಕು. ಆದರೆ ಇತರ ವಿಷಯಗಳ ಕಡೆಗೇ ಒಲಿದ ಮನಸ್ಸು, ಆತ್ಮನನ್ನು ಹೊರತಾದ ಯಾವ ವಿಷಯದ ಕಡೆಗೂ ಒಲಿಯದಂತೆ ಮಾಡುವುದು ವೈರಾಗ್ಯ; ವಿಷಯಗಳಿಂದ ದೂರ ಬರುವುದು, ವಿಷಯಗಳ ಸೆಳೆತವನ್ನು ಸಡಿಲಗೊಳಿಸುವುದು, ವಿಷಯಗಳ ವಿಚಾರವಾಗಿ ಇದ್ದ ಆಸಕ್ತಿಯನ್ನು ಹೋಗಲಾಡಿಸಿಕೊಳ್ಳುವುದು. ವಿ-ರಾಗ ವೆಂದರೆ ಆಸಕ್ತಿಗೆ ವಿರುದ್ಧವಾದ ಅನಾಸಕ್ತಿ; ವಿರಾಗದ ಭಾವ ವೈರಾಗ್ಯ.

ಬರಿಯ ಹೊರಗಣ ವಿಷಯಗಳದ್ದೇ ಸೆಳೆತವೆಂದಲ್ಲ; ನಮ್ಮ ಮನಸ್ಸಿನಲ್ಲೇ ಅವುಗಳ ಸೆಳೆತಕ್ಕೆ ಅನುಕೂಲವಾದ ವಾಸನೆಗಳಿರುತ್ತವೆ. ಈ ವಾಸನೆಗಳನ್ನೂ ಕಳೆದುಕೊಳ್ಳಲು ಅಭ್ಯಾಸ-ವೈರಾಗ್ಯಗಳು ನೆರವಾಗುತ್ತವೆ.

(43)

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥

(6,16)

ಅಭ್ಯಾಸ-ವೈರಾಗ್ಯಗಳೇ ಯೋಗಸಾಧನೆಗಳೆಂದಾಗಲಿ, ಇದು ಯಾರಿಗೆ ಸಾಧ್ಯವಾಗುತ್ತದೆ? ಇದನ್ನು ಹೇಳುವ ಮೊದಲು ಯಾರಿಗೆ ಸಾಧ್ಯವಾಗುವುದಿಲ್ಲ ಎಂಬುದನ್ನು ತಿಳಿಯಬೇಕು.

ಹೆಚ್ಚಾಗಿ ತಿನ್ನುವವನಿಗೆ, ತಿಂಡಿಪೋತನಿಗೆ ಯೋಗವು ಸಾಧ್ಯವಾಗುವುದಿಲ್ಲ. ಅಗತ್ಯಕ್ಕಿಂತ ಹೆಚ್ಚಾಗಿ ತಿಂದರೆ, ತನ್ನ ಮಿತಿಯನ್ನರಿಯದೆ ತಿಂದರೆ, ಬಾಯಿರುಚಿಗೆ ಮರುಳಾಗಿ ಹಸಿವಿಲ್ಲದಿದ್ದರೂ ತಿಂದರೆ, ಅಜೀರ್ಣವಾಗದೆ ಇರುತ್ತದೆಯೆ? ಉಂಡದ್ದು ಅರಗದಿದ್ದರೆ ರೋಗ ಬಾರದೆ ಇರುತ್ತದೆಯೆ? ಮೈಯಲ್ಲಿ ರೋಗವಿದ್ದಾಗ ಯೋಗವೆಂಬುದು ಸಾಧ್ಯವಾದೀತೆ? ಸಾಧನೆ ಮಾಡುತ್ತೇವೆಂದುಕೊಂಡು, ಸರಿಯಾಗಿ ಶಾಸ್ತ್ರವಿಧಿಗಳನ್ನರಿತುಕೊಳ್ಳದೆ, ಉಪವಾಸವು ಅಗತ್ಯವಾದ ಕ್ರಿಯೆಯೆಂದು ಭಾವಿಸಿ ಊಟವನ್ನು ಮಾಡದೇನೆ ಇದ್ದರೆ, ಅದೂ ಯೋಗಕ್ಕೆ ನೆರವಾಗದು. ದೇಹದ ರಸಗಳನ್ನು ಕಾಪಾಡಲು ಸರಿಯಾದ ಊಟ ಬೇಕೇ ಬೇಕು. ಉಪವಾಸದಿಂದಲೂ ದೇಹ ದುರ್ಬಲವಾಗುತ್ತದೆ, ಮನಸ್ಸು ಮಂಕಾಗುತ್ತದೆ, ಇಂದ್ರಿಯಪಾಟವ ಕಡಮೆಯಾಗುತ್ತದೆ. ಹೆಚ್ಚಾಗಿ ತಿಂದರೆ ರಜೋಗುಣ ಹೆಚ್ಚುತ್ತದೆ; ತಿನ್ನದೆ ಇದ್ದರೆ ತಮೋಗುಣ ಹೆಚ್ಚುತ್ತದೆ. ಎರಡೂ ಯೋಗಕ್ಕೆ ಅಡ್ಡಿಗಳೇ.

ಹಾಗೆಯೆ ಅತಿಯಾಗಿ ನಿದ್ರೆಮಾಡುವವನಿಗೆ ಯೋಗ ದೂರವೇ. ಶರೀರ ನಿದ್ರಿಸುವಾಗ ಮನಸ್ಸೂ ತಮಸ್ಸಿನಲ್ಲಿ ಮರೆಯಾಗುತ್ತದೆ. ತಮಸ್ಸನ್ನು ಹೆಚ್ಚಿಸಿಕೊಂಡರೆ ಯೋಗವೆಲ್ಲಿಯದು? ಯೋಗಿಗಳು ನಿದ್ರೆಕೆಡಬೇಕೆಂಬ ಭ್ರಮೆಯಿಂದ ಕೆಲವರು ಎಚ್ಚರವಾಗಿಯೆ ಇದ್ದುಬಿಡುತ್ತಾರೆ. ನಿದ್ರೆ ಬಂದರೂ ಅದಕ್ಕೆ ಅವಕಾಶಕೊಡದೆ ಧ್ಯಾನವೋ ಮತ್ತೊಂದೋ ಮಾಡುತ್ತಲೆ ಇರುತ್ತಾರೆ. ಇದರಿಂದ ರಜಸ್ಸು ಹೆಚ್ಚಾಗುವುದಷ್ಟೆ ಫಲ. ಯೋಗವೇನೂ ಕೈಗೂಡುವುದಿಲ್ಲ.

'ಅತಿ ಸರ್ವತ್ರ ವರ್ಜಯೇತ್' ಎನ್ನುವ ಸುಭಾಷಿತವೊಂದಿದೆಯಲ್ಲ? ಯಾವುದನ್ನೂ ಅತಿಯಾಗಿ ಮಾಡಬಾರದು. ಮಿತಿಯನ್ನರಿತುಕೊಳ್ಳಬೇಕು.

(44)

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥

(6,17)

ಹಿಂದಿನ ವಿಚಾರವನ್ನೆ ಇಲ್ಲಿ ಮುಂದರಿಸಿದ್ದಾರೆ. ಅತಿಯಾದ ಆಹಾರ, ಅತಿಯಾದ ನಿದ್ರೆ, ಅತಿಯಾದ ಉಪವಾಸ, ಅತಿಯಾದ ಎಚ್ಚರ ಯೋಗಕ್ಕೆ ನೆರವಾಗುವುದಿಲ್ಲ ಎಂಬುದು ಹಿಂದಿನ ಶ್ಲೋಕದ ತಾತ್ಪರ್ಯ. ಇದು ಆಹಾರಕ್ಕೆ, ನಿದ್ರೆಗೆ ಮಾತ್ರ ಅನ್ವಯವಾಗುವುದಲ್ಲ. ಆಹಾರದಂತೆಯೇ ವಿಹಾರ, ಕೆಲಸಗಳು ಯಾವುದರಲ್ಲೂ ಅತಿಯಾಗಬಾರದು. ಆಹಾರವೆಂದರೇನೋ ತಿನ್ನುವುದು, ಹಸಿವೆಯನ್ನು ಇಂಗಿಸಿಕೊಳ್ಳಲು, ದೇಹಕ್ಕೆ ಬಲವನ್ನು ಒದಗಿಸಲು. ವಿಹಾರವೆಂದರೆ ಸಂಚಾರ, ವ್ಯಾಯಾಮ, ಕ್ರೀಡೆ ಇವು ಸೇರುತ್ತವೆ. ಮನಸ್ಸಿನ ಬೇಸರಿಕೆಯನ್ನು, ಶರೀರದ ಅಲಸಿಕೆಯನ್ನು ನಿವಾರಣೆ ಮಾಡಿಕೊಳ್ಳಲು ವಿಹಾರದ ಅಗತ್ಯವಿದೆ. ಇಲ್ಲಿಯೂ ಅತಿಯಾಗಿ ವಿಹರಿಸುವುದು, ವಿಹರಿಸದೇನೆ ಇರುವುದು ಎರಡೂ ಸರಿಯಲ್ಲ.

ಇನ್ನು 'ಚೇಷ್ಟೆ' ಎಂಬ ಮಾತಿಗೆ ಸಂಸ್ಕೃತದಲ್ಲಿ ಶರೀರದ ಕ್ರಿಯೆಗಳು, ಅಂಗಾಂಗಗಳ ಚಲನೆ, ಓಡಿಯಾಟ ಎಂದಷ್ಟೆ ಅರ್ಥ; ಕನ್ನಡದ ಚೇಷ್ಟೆಯ ಧ್ವನಿ ಬರುವುದಿಲ್ಲ. ಯಾವುದಾದರೂ ಕೆಲಸ ನಡೆಯುವಾಗ ಇವು ಇದ್ದೆ ಇರುತ್ತವೆ. ಉದ್ದೇಶ ಪೂರ್ವಕವಾಗಿ ಮಾಡುವುದು ಕರ್ಮ, ಅದಕ್ಕೆ ಸಹಜವಾಗಿ ನಡೆಯುವ ಕ್ರಿಯೆಗಳು ಚೇಷ್ಟೆ. ಇದರಲ್ಲಿಯೂ ಅತಿಯನ್ನು ಬಿಡಬೇಕು; ಮಿತವಾಗಿರಬೇಕು. ಹಾಗೆಯೆ ನಿದ್ರೆ, ಎಚ್ಚರಗಳಲ್ಲಿಯೂ ಅತಿಯಾದ ಪ್ರವೃತ್ತಿ, ಅತಿಯಾದ ನಿವೃತ್ತಿ ಎರಡೂ ಯೋಗಮಾಡುವವನಿಗೆ ನೆರವಾಗುವುದಿಲ್ಲ.

ಯಾವುದಕ್ಕೂ ಸರಿಯಾದ ಪ್ರಮಾಣವೊಂದಿರುತ್ತದೆ. ಅದನ್ನು ದಾಟಿ ಹೋದರೆ ಆಧಿಕ್ಯ; ಅದರ ಹತ್ತಿರವೇ ಬರದಿದ್ದರೆ 'ನ್ಯೂನತೆ'. ಎರಡೂ ದೋಷಗಳು. ಈ ಕೊನೆ ಆ ಕೊನೆ ಎರಡನ್ನು ಮುಟ್ಟದೆ, ನಡುವೆ ಇರುವುದು ಒಳ್ಳೆಯದು. ಬುದ್ಧನು ಹೇಳಿದ ಮಧ್ಯಮಾರ್ಗ ಇದೇ ಅಲ್ಲವೆ? ಯೋಗ ಹೇಳುವುದೂ ಇದನ್ನೆ. 'ಯುಕ್ತ' ಎಂಬ ಮಾತಿನಿಂದ ಸರಿಯಾದುದು, ತಕ್ಕ ಪ್ರಮಾಣದ್ದು, ಮಿತಿಯನ್ನರಿತದ್ದು ಎಂಬ ಸೂಚನೆಯಿದೆ. ಈ ಉಪಾಯವನ್ನು ಹಿಡಿದರೆ ಯೋಗವು ಕೈಗೂಡಿ, ಎಲ್ಲ ದುಃಖಗಳನ್ನೂ (ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ; ಶಾರೀರಕ, ಮಾನಸಿಕ, ವಾಚನಿಕ) ಹೋಗಲಾಡಿಸಬಲ್ಲುದು.

(45)

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥

(6,10)

ಇದು ಯೋಗಸಾಧನೆಯ ಪ್ರಕಾರವನ್ನು ಹೇಳುವ ಶ್ಲೋಕ. ಯೋಗಿಯು, ಎಂದರೆ ಇಲ್ಲಿ ಯೋಗದ ದಾರಿಯನ್ನು ಹಿಡಿದವನು (ಯೋಗಾರೂಢ), ಏನು ಮಾಡಬೇಕೆಂಬುದನ್ನು ವಿವರಿಸುತ್ತಾರೆ. ಏಕಾಂತದಲ್ಲಿದ್ದುಕೊಂಡು ತನ್ನನ್ನು ತಾನು ಯೋಗದಲ್ಲಿ ತೊಡಗಿಸಿಕೊಳ್ಳಬೇಕು. ಅವನು ಯೋಗಮಾಡುತ್ತಿರುವುದು ಗುಟ್ಟಾಗಿರಬೇಕು; ಯಾರಿಗೂ ತಿಳಿಯಬಾರದು. ತಿಳಿದರೆ ಯೋಗಕ್ಕೆ ಅಡ್ಡಿಯಾಗಬಹುದು. ನಾನಾ ಪ್ರಯೋಜನಗಳಿಗಾಗಿ ಜನರು ಯೋಗಿಯನ್ನಾಶ್ರಯಿಸಬಹುದು. ಅವನ ಯೋಗ ಕೆಡುತ್ತದೆ. 'ರಹಸಿ ಸ್ಥಿತಃ' ಎಂಬ ಒಕ್ಕಣೆಯ ಅರ್ಥ ಇದು. ಮತ್ತೆ ಯೋಗಕ್ಕೆ ''ಇದು ಕಾಲ, ಇದು ಕಾಲವಲ್ಲ'' ಎಂದು ಹೇಳುವಂತಿಲ್ಲ. ಯೋಗ ಯಾವಾಗಲೂ ನಡೆಯುತ್ತಲೆ ಇರಬೇಕು (ಸತತಂ). ಯೋಗ ಒಳಗಿನ ಕ್ರಿಯೆಯಾದ್ದರಿಂದ ಏನನ್ನು ಮಾಡುತ್ತಿರುವಾಗಲೂ ಯೋಗ ಮುಂದರಿಯಬಹುದು. ಯೋಗ ಮಾಡುವಾಗ ಬೇಗನೆ ಫಲವನ್ನು ನಿರೀಕ್ಷೆ ಮಾಡಬಾರದು. ಈ ವಿಚಾರವಾಗಿ ಯೋಗಸೂತ್ರವು 'ದೀರ್ಘಕಾಲ', 'ಆದರ' ಎಂಬೆರಡು ವಿವರಗಳನ್ನು ಕಾಣಿಸುತ್ತದೆ. ಎಡೆಬಿಡದೆ ಬಹುಕಾಲದ ಸಾಧನೆ, ಮತ್ತು ಸಾಧನೆಮಾಡುವಾಗ ತೀವ್ರವಾದ ಆಸಕ್ತಿ ಎರಡೂ ಇರಬೇಕು. ಆದ್ದರಿಂದ 'ಸತತಂ' ಎನ್ನುವಾಗ ನಿರಂತರ (ಎಡೆಬಿಡದೆ, ನಿಲ್ಲಿಸದೆ) ಎಂದರ್ಥ.

ಗುಟ್ಟಾಗಿದ್ದುಕೊಂಡು ಮಾಡಬೇಕಾದುದೇನು? ತನ್ನನ್ನು ತಾನು ಸಮಾಧಿಯೋಗದಲ್ಲಿ ನಿಲ್ಲಿಸಿಕೊಳ್ಳಬೇಕು. 'ಆತ್ಮಾನಂ' ಎಂದರೆ ತನ್ನ ಬುದ್ಧಿಯನ್ನು, ಮನಸ್ಸಿನಿಂದ (ಇಂದ್ರಿಯಗಳಿಂದ) ಹಿಂದಿರುಗಿಸಿ ಆತ್ಮದ ಕಡೆಗೆ ತಿರುಗಿಸುವುದು ಬುದ್ಧಿಯನ್ನೆ. ಅದೇ ಯೋಗವೆನಿಸಿಕೊಳ್ಳುವುದು. 'ಯುಂಜೀತ' ಎಂದರೆ ಇದನ್ನು ಮಾಡಬೇಕು ಎಂದಷ್ಟೆ ಅರ್ಥ.

ಯೋಗವೆಂಬುದು ಒಬ್ಬ ಮಾಡುವ ಕೆಲಸ; ಜೊತೆಗೆ ಇನ್ನೊಬ್ಬ ಕೂಡಿಕೊಂಡರೆ ಯೋಗ ದಾರಿತಪ್ಪುತ್ತದೆ. ಸಂಸ್ಕೃತದಲ್ಲಿ ಒಂದು ಮಾತಿದೆ - 'ಏಕಸ್ತಪೋ ದ್ವಿರಧ್ಯಾಯೀ' ಎಂದು. ತಪಸ್ಸನ್ನು ಮಾಡುವಾಗ ಒಬ್ಬನೇ ಇರಬೇಕು; ಇನ್ನೊಬ್ಬನಿದ್ದರೆ ತಪಸ್ಸು ಕುಂಟುತ್ತದೆ. ಅಧ್ಯಯನ ಮಾಡುವಾಗ ಇಬ್ಬರಿರಬೇಕು; ಒಬ್ಬರಿಗೊಬ್ಬರು ನೆರವಾದಾರು. ಯೋಗವೂ

ತಪಸ್ಸೇ. ಆದರೆ ಒಬ್ಬಂಟಿಗನಾಗಿರುವುದಷ್ಟೇ ಮುಖ್ಯವಲ್ಲ. ಮನಸ್ಸಿನಲ್ಲಿ ಬಯಕೆಗಳು, ವಾಸನೆಗಳು, ಅನಿಸಿಕೆಗಳು ತುಂಬಿದ್ದರೆ ಅವನು ಒಬ್ಬನೇ ಇದ್ದರೂ ನಗರದ ನಡುವೆ ಇದ್ದಂತೆಯೇ ಅಲ್ಲವೆ? ಆದ್ದರಿಂದಲೇ 'ಏಕಾಕೀ' ಎಂದು ಹೇಳಿದೊಡನೆಯೆ 'ಯತಚಿತ್ತಾತ್ಮಾ' ಎಂದು ಸೇರಿಸಿರುವುದು. 'ಯತ' ಎಂದರೆ ತಡೆಹಿಡಿದು, ಬಿಗಿಹಿಡಿದು (ನಿಯತ, ನಿಯಮಿತ). ಯಾವುದನ್ನು? ಚಿತ್ತ ಮತ್ತು ಆತ್ಮ ಎರಡನ್ನೂ. ಇಲ್ಲಿ ಚಿತ್ತವೆಂದರೆ ಅಂತಃಕರಣ; ಬುದ್ಧಿ ಮತ್ತು ಮನಸ್ಸು ಎರಡೂ ಕೂಡಿಕೊಂಡದ್ದು. ಆತ್ಮನೆಂದರೆ ಈ ಸಂದರ್ಭದಲ್ಲಿ ದೇಹ. 'ಯತಚಿತ್ತಾತ್ಮಾ' ಎಂದರೆ 'ಸಂಯತದೇಹಾಂತಃಕರಣೌ'.

'ನಿರಾಶೀಃ', 'ಅಪರಿಗ್ರಹಃ' ಎಂಬ ಇನ್ನೆರಡು ವಿವರಗಳನ್ನೂ ಹೇಳುತ್ತಾರೆ. ನಿರಾಶಿಯೆಂದರೆ ಬಯಕೆಯನ್ನು ಬಿಟ್ಟವನು. ಬಯಕೆಗಳಿದ್ದರೆ ಮನಸ್ಸು ಬುದ್ಧಿಯ ವಶವಾಗುವುದಿಲ್ಲ; ಬುದ್ಧಿಯು ಆತ್ಮನಿಗೆ ಒಲಿಯಲು ಬಿಡುವುದಿಲ್ಲ. ಹೀಗಾದಮೇಲೆ ಯೋಗವೆಲ್ಲಿಯದು? ಅಪರಿಗ್ರಹವೆಂದರೆ ಯಾವ ದ್ರವ್ಯವನ್ನೂ ತನ್ನಲ್ಲಿ ಕೂಡಿಟ್ಟುಕೊಳ್ಳಬೇಕೆಂಬ ಕಾತರವಿಲ್ಲದವನು. ತನ್ನದಲ್ಲದ್ದನ್ನು, ಬೇರೆಯವರದ್ದನ್ನು ತಾನು ಪಡೆದುಕೊಳ್ಳುವ ಆಸೆ ಪರಿಗ್ರಹವೆನಿಸಿಕೊಳ್ಳುತ್ತದೆ. ತನ್ನ ಅಗತ್ಯವನ್ನು ಮೀರಿ ವಸ್ತುಗಳನ್ನು ಸಂಗ್ರಹಿಸಿಕೊಳ್ಳುವುದೂ ಪರಿಗ್ರಹವೇ. ಇವೆರಡೂ ಪ್ರವೃತ್ತಿಗಳಿದ್ದರೆ ಬಹಿರ್ಮುಖ ಪ್ರಾವಣ್ಯವೇ; ಮನಸ್ಸು ಹೊರಗಣ ವಿಷಯಗಳನ್ನೇ ಆರಸುತ್ತದೆ. ಆಗ ಯೋಗ ಸಾಧ್ಯವಿಲ್ಲವಷ್ಟೆ?

(46)

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ॥

(6,11-12)

ಅಭ್ಯಾಸಿಗೆ (ಸ್ವಾಧ್ಯಾಯಿಗೆ) ಅಗತ್ಯವಾದ ವಿವರಗಳು ಇವು. ಶುಚಿಯಾದ (ಶುದ್ಧವಾದ) ಎಡೆಯನ್ನು ಹುಡುಕಬೇಕು. ಸ್ಥಳದ ಶುದ್ಧಿ ಸ್ವಾಭಾವಿಕವಾಗಿಯೆ ಇರಬಹುದು; ಮನಸ್ಸಿಗೆ ಹಿತವಾದ ನದೀದಡ, ಉದ್ಯಾನ, ಆರಾಮ, ಅರಣ್ಯ, ಪರ್ವತ ಇಂಥವು. ಜನಗಳು ಓಡಿಯಾಡಿದಾಗ ಅವರ ಅನಿಸಿಕೆಗಳೂ ಹೆದರಿಕೆಗಳೂ ಬಯಕೆಗಳೂ ಸ್ಥಳವನ್ನು ಕೆಡಿಸುತ್ತವೆ. ವಿವಿಕ್ತವಾದ ಪ್ರದೇಶ ಶುಚಿಯಾಗಿರುತ್ತದೆ. ಅಥವಾ ಯಾವುದಾದರೂ ಸ್ಥಳ ಅಶುದ್ಧವಾಗಿದ್ದರೂ ಸಂಸ್ಕಾರದಿಂದ ಅದನ್ನು ಶುದ್ಧಿಮಾಡಿಕೊಳ್ಳಬಹುದು; ಆಶ್ರಮ,

ದೇವಾಲಯ, ಚೈತ್ಯ, ಗುಹೆ ಇಂಥವು. ಯೋಗ ಸಾಧನೆಗೆ ಅನುಕೂಲವಾದ ವಾತಾವರಣ ಇರಬೇಕು. ಪ್ರದೇಶದ ಮೇಲೆ ತನ್ನ ಒಡೆತನವಿರಬಾರದು; ತನ್ನದೆಂಬ ಭಾವನೆ ಯೋಗಕ್ಕೆ ತಕ್ಕುದಲ್ಲ (ಅಪರಿಗೃಹೀತ)

ಇಂಥ ಸ್ಥಳದಲ್ಲಿ ದೃಢವಾದ ಆಸನವನ್ನು ಹಾಕಿ ನೆಲೆಗೊಳ್ಳಬೇಕು. ಆಸನವೆಂದರೆ ಕೂಡುವ ಬಗೆ; ಪಾತಂಜಲಯೋಗಸೂತ್ರದಲ್ಲಿ 'ಸ್ಥಿರಸುಖಮಾಸನಂ' ಎಂಬ ನಿರ್ದೇಶನವಿದೆ. ಆಸನವು ಸ್ಥಿರವಾಗಿರಬೇಕು, ಮತ್ತು ಸುಖಕರವಾಗಿರಬೇಕು. ಯೋಗದ ಅವಧಿಯಲ್ಲಿ ಆಸನದಿಂದ ಕೈಕಾಲು ನೋವು, ಜೋಮು ಹಿಡಿಯುವುದು, ಕಾಲು ಮರಗಟ್ಟುವುದು ಇಂಥ ತೊಂದರೆಗಳಾಗಬಾರದು; ನಿರ್ದಿಷ್ಟಕಾಲದವರೆಗೆ ಕೂತುಕೊಂಡಾಗಲೂ ಆಸನವನ್ನು ಸಡಿಲಿಸಬೇಕೆನಿಸಬಾರದು. ಧ್ಯಾನ ಮಾಡುತ್ತಿರುವಾಗ ಆಸನದ ಕಡೆ ಗಮನ ಹೋಗದಂತಿರಬೇಕು. ಏಕೆಂದರೆ ಆಸನದ ಪ್ರಯೋಜನವೇ ಮನಸ್ಸು ಏಕಾಗ್ರತೆಯಲ್ಲಿರುವುದು. ಬೇರೆ ಎಲ್ಲ ವಿಷಯಗಳಿಂದ ಮನಸ್ಸನ್ನು ಹಿಂದಿರುಗಿಸಿ, ಯಾವ ವಿಚಾರವಾಗಿ ಧ್ಯಾನವೋ ಅದರಲ್ಲಿಯೇ ಒಮ್ಮುಖವಾಗಿರುವುದು, ಕೇಂದ್ರೀಕೃತ-ವಾಗಿರುವುದು ಏಕಾಗ್ರತೆ. ಅಲ್ಲಿ ವಿಕ್ಷೇಪವಿರುವುದಿಲ್ಲ, ವ್ಯಾಕುಲತೆಯಿರುವುದಿಲ್ಲ.

ಮನಸ್ಸು ಏಕಾಗ್ರವಾದ ಮೇಲೆ, ಚಿತ್ತಕ್ರಿಯೆಗಳನ್ನೂ ಇಂದ್ರಿಯ ಕ್ರಿಯೆಗಳನ್ನೂ ಹಿಡಿತದಲ್ಲಿ ತಂದುಕೊಳ್ಳಬೇಕು ('ಯತ ಚಿತ್ತೇಂದ್ರಿಯ ಕ್ರಿಯಃ'). ಇಲ್ಲಿ ಚಿತ್ತವೆಂದರೆ ಮನಸ್ಸಿನೊಂದಿಗೆ ಕೂಡಿಕೊಂಡಿರುವ ಬುದ್ಧಿ ಅದರ ಪ್ರವೃತ್ತಿಗಳು ಚಿತ್ತಕ್ರಿಯೆಗಳು. ಇಂದ್ರಿಯಗಳ ಕೆಲಸವೆಂದರೆ ನೋಡುವುದು, ಕೇಳುವುದು ಇತ್ಯಾದಿ. ಇವೆಲ್ಲವನ್ನೂ ಸ್ವೇಚ್ಛೆಯಾಗಿ ಬಿಡದೆ, ಧ್ಯಾನಕ್ಕೆ ಅನುಕೂಲವಾಗುವಂತೆ ಮಾಡಿಕೊಳ್ಳುವುದನ್ನು ಹೇಳಿದ್ದಾರೆ.

(ಇಲ್ಲಿ ಆರನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದ ಪೂರ್ವಾರ್ಧವನ್ನೂ ಹನ್ನೆರಡನೆಯ ಶ್ಲೋಕದ ಉತ್ತರಾರ್ಧವನ್ನೂ ಸೇರಿಸಿ ಒಂದು ಶ್ಲೋಕವನ್ನಾಗಿ ಮಾಡಿಕೊಂಡಿದೆ)

(47)

ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥

(6,12-14)

ಆಸನದಲ್ಲಿ ಕುಳಿತು ಆತ್ಮಶುದ್ಧಿಗಾಗಿ ಯೋಗವನ್ನು ಹೊಂದಿಸಿಕೊಳ್ಳತಕ್ಕದ್ದು. ಮನಸ್ಸನ್ನು ಬಿಗಿಹಿಡಿದು, ಪರಮಾತ್ಮನಲ್ಲೇ ಚಿತ್ತವನ್ನು ನಿಲ್ಲಿಸಿ, ಪರಮಾತ್ಮನೇ ಸರ್ವೋತ್ತಮವಾದ ಧ್ಯೇಯವೆಂದು ನಂಬಿ, ಯೋಗವನ್ನು ಮಾಡಬೇಕು.

ಯೋಗವನ್ನು ಮಾಡುವುದು ಕುಳಿತುಕೊಂಡೇ. ನಿಂತುಮಾಡಬಾರದು (ಮನಸ್ಸು ಅಲೆದಾಡೀತು); ಮಲಗಿಮಾಡಬಾರದು (ನಿದ್ರೆ ಬಂದೀತು). ಕುಳಿತಿರುವಾಗಲೇ ಮನಸ್ಸನ್ನು ಎಚ್ಚರದಲ್ಲಿಯೂ ಇರಿಸಿಕೊಂಡು, ಅತ್ತಿತ್ತ ಅಡ್ಡಾಡದಂತೆ ನಿಲ್ಲಿಸಲಾಗುವುದು. ಕುಳಿತು ಯೋಗಮಾಡಬೇಕು. ಇಲ್ಲಿರುವ ಮಾತು 'ಯೋಗಂ ಯುಂಜ್ಯಾತ್' ಎಂದು; ಇದು 'ಪಾಕಂ ಪಚತಿ' (ಅಡುಗೆಯನ್ನು ಅಟ್ಟುತ್ತಾನೆ) ಎಂದಂತೆ. 'ಯೋಗ' ಮತ್ತು 'ಯುಂಜ್ಯಾತ್' ಎರಡೂ ಮಾತುಗಳಿಗೂ ಒಂದೇ ಧಾತುವಾದರೂ ಎರಡು ರೂಪಗಳು. 'ಯುಜಿರ್' ಎಂದರೆ ಕೂಡಿಸು, ಸೇರಿಸು (ಯೋಗೇ); 'ಯುಜ್' ಎಂದರೆ ಮನಸ್ಸನ್ನು ಒಂದೆಡೆ ನಿಲ್ಲಿಸು (ಸಮಾಧೌ). ಯೋಗ ಎಂದಾಗ ಸಮಾಧಿಯೋಗವೆಂದೇ ತಿಳಿಯಬೇಕು; ಯುಂಜ್ಯಾತ್ ಎನ್ನುವಾಗ ಸೇರಿಸುವ ಅರ್ಥ. ಸಮಾಧಿಯೋಗದಲ್ಲಿ ಚಿತ್ತವನ್ನು ತೊಡಗಿಸಬೇಕೆಂಬುದು ತಾತ್ಪರ್ಯ.

ಹೀಗೆ ಮಾಡಬೇಕಾದುದು ಏತಕ್ಕೆ? ಆತ್ಮವಿಶುದ್ಧಿಗಾಗಿ. ಇಲ್ಲಿ ಆತ್ಮವೆಂದರೆ ಮನಸ್ಸು; ಅದು ಸತ್ತ್ವ; ಅದರಿಂದ ರಜಸ್ಸು, ತಮಸ್ಸುಗಳೆಂಬ ಕೊಳೆಯನ್ನು ಹೋಗಲಾಡಿಸಿದರೆ ಅದು ಶುದ್ಧಿ. ಆ ಕೊಳೆಗಳು ಮತ್ತೆ ಏಳದಂತೆ ತೊಲಗಿಹೋದರೆ ವಿಶುದ್ಧಿ. ಇದನ್ನು ಮಾಡುವ ಕ್ರಮ ಯಾವುದು? ಮನಸ್ಸನ್ನು ಸಂಯಮಮಾಡುವುದು. ಸಂಯಮವೆಂದರೆ ವಿಷಯಗಳತ್ತ ಹರಿದಾಡದಂತೆ ಬಿಗಿಹಿಡಿಯುವುದು. ಇದಕ್ಕಾದರೂ ದಾರಿ ಯಾವುದು? 'ಮಚ್ಚಿತ್ತಃ', 'ನನ್ನಲ್ಲೆ ಚಿತ್ತವನ್ನು ನಿಲ್ಲಿಸಿ''. ಇದು ಕೃಷ್ಣ ಹೇಳುವ ಮಾತು; ಕೃಷ್ಣನು ಶರೀರವೆಂಬ ರಥಕ್ಕೆ ಸಾರಥಿ; ಎಂದರೆ ಬುದ್ಧಿ. ಬುದ್ಧಿಯ ಸ್ಥಾನದಿಂದ ಹೇಳಿದ ಮಾತು. ನಾನು ಎಂದರೆ ಬುದ್ಧಿ; ನನ್ನಲ್ಲಿ ಎಂದರೆ ಬುದ್ಧಿಯಲ್ಲಿ. ಮನಸ್ಸನ್ನು ವಿಷಯಗಳಿಂದ ಹಿಂದಿರುಗಿಸಿ ಬುದ್ಧಿಯಲ್ಲಿ ನೆಲೆಗೊಳಿಸುವುದು ದಾರಿ. ಇದಕ್ಕಾದರೂ ಉಪಾಯವೇನು? ''ಮತ್ಪರಃ ಯುಕ್ತಃ ಆಸೀತ'. ಬುದ್ಧಿಯೇ ಸರ್ವೋತ್ತಮವೆಂದು ತಿಳಿದು ಮನಸ್ಸು ತನ್ನನ್ನು ಅದರಲ್ಲಿ ತೊಡಗಿಸಿಕೊಳ್ಳುವುದೇ ಉಪಾಯ. ಎಷ್ಟಾದರೂ ಗೀತೆ ಹೇಳುವುದು ಬುದ್ಧಿಯೋಗವನ್ನೆ ಅಲ್ಲವೆ?

(ಈ ಶ್ಲೋಕದಲ್ಲಿ ಪೂರ್ವಾರ್ಧ ಆರನೆಯ ಅಧ್ಯಾಯದ ಹನ್ನೆರಡನೆಯ ಶ್ಲೋಕದ ಮೊದಲ ಸಾಲು ಮತ್ತು ಹದಿನಾಲ್ಕನೆಯ ಶ್ಲೋಕದ ಎರಡನೆಯ ಸಾಲು ಇವುಗಳನ್ನು ಕೂಡಿಸಿಕೊಂಡದ್ದು.)

(48)

ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣಪರಮಾಂ ಮತ್‌ಸಂಸ್ಥಾಮಧಿಗಚ್ಛತಿ ॥

(6,15)

ಈ ರೀತಿಯಾಗಿ ಯೋಗಿಯು ತನ್ನನ್ನು ತಾನು ತೊಡಗಿಸಿಕೊಂಡು ಎಲ್ಲಕಾಲಗಳಲ್ಲೂ ಮನಸ್ಸನ್ನು ಬಿಗಿಹಿಡಿದುಕೊಂಡರೆ ನೆಮ್ಮದಿಯನ್ನು ಪಡೆದುಕೊಳ್ಳುತ್ತಾನೆ; ಬುದ್ಧಿಯ ನೆಲೆಯನ್ನು ಸೇರುತ್ತಾನೆ. ಬುದ್ಧಿಯ ನೆಲೆಯೇ ನೆಮ್ಮದಿ. ಮನಸ್ಸು ವಿಷಯಗಳತ್ತ ಹರಿದಾಡದೆ ಬುದ್ಧಿಗೆ ವಶವಾಗಿರುವಾಗಲೇ ಮನಸ್ಸಿನ ನೆಮ್ಮದಿ. ಇಲ್ಲಿ ಶಾಂತಿಯೆನ್ನುವ ಸ್ಥಿತಿಯನ್ನು ಹೇಳಿರುವುದು ಮನಸ್ಸಿನದೇ. ಶಾಂತಿಯೆಂದರೆ ಉಪರತಿ; ವಿಷಯಗಳ ಏರಿಳಿತ, ಹೊರಗಣ ಸೆಳೆತ, ಒಳಗಣ ಬಿಗಿತ ಯಾವುದೂ ಇಲ್ಲದಿರುವುದು.

ಈ ನೆಮ್ಮದಿಯ ಕೊನೆಯೆಂಬುದೇ ನಿರ್ವಾಣ. (ನಿರ್ವಾಣಪರಮಾ, ನಿಷ್ಠಾ). ನಿರ್ವಾಣವೆಂಬ ಮಾತಿಗೆ ಆರಿಹೋಗುವುದು ಎಂದು ಮೂಲಾರ್ಥ; ಸೊಡರಿನಲ್ಲಿ ದೀಪ ನಂದಿಹೋಗುವುದು; ಸಂಜೆ ಸೂರ್ಯ ಮುಳುಗುವುದು; ಬದುಕಿನ ಉಸಿರು ನಿಂತುಹೋಗುವುದು, ವೈಯಕ್ತಿಕವಾದ ಇರವು ಇಲ್ಲವಾಗುವುದು. ಮೋಕ್ಷವೆಂದು ಪರ್ಯಾಯಪದ. ಶಾಂತಿಯ ಕೊನೆಯ ಘಟ್ಟವೇ ಇದು. ಬಯಕೆಗಳೆಲ್ಲ ಮರೆಯಾಗುತ್ತವೆ; ವಾಸನೆಗಳು ಅಳಿಯುತ್ತವೆ; ವಿಷಯಗಳ ಸೆಳತ ಇಲ್ಲವಾಗುತ್ತದೆ. ತಾನು, ತನ್ನದು ಎಂಬ ಸಂಕುಚಿತ ಇರವು ಬಯಲಾಗುತ್ತದೆ.

ಇದನ್ನೆ 'ನನ್ನ ಇರವು' ಎಂದು ಕೃಷ್ಣ ಬಣ್ಣಿಸಿದ್ದಾನೆ. ಹಿಂದಿನಂತೆ ಇಲ್ಲಿಯೂ 'ನನ್ನ' ಎಂದರೆ 'ಬುದ್ಧಿಯ' ಎಂದೇ ಅರ್ಥ. ಬುದ್ಧಿಯ ಇರವು (ಸಂಸ್ಥಾ, ಒಂದೆಡೆ ನಿಲ್ಲುವುದು, ಒಟ್ಟಾಗಿ ಇರುವುದು, ನೆಲೆಗೊಳ್ಳುವುದು). ಬುದ್ಧಿಯಾಗಿ ಮನಸ್ಸು ಮಾರ್ಪಡುವುದು; ಸಂಕಲ್ಪ-ವಿಕಲ್ಪಗಳು ಹೋಗಿ ನಿರ್ವಿಕಲ್ಪವಾಗುವುದು.

(49)

ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।
ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥

(6,19)

ಗಾಳಿಯಿಲ್ಲದೆಡೆ ಇಟ್ಟ ಸೊಡರಿನಲ್ಲಿ ದೀಪವು ಅತ್ತಿತ್ತ ಅಲುಗಾಡದೆ ನೆಮ್ಮದಿಯಿಂದ ಉರಿಯುವಂತೆ, ಯೋಗಿಯ ಸ್ಥಿತಿಯಿರುತ್ತದೆ. ಮನಸ್ಸನ್ನು ವಿಷಯಗಳ ಕಡೆಗೆ ಹರಿಸದಿದ್ದರೆ ಮನಸ್ಸು ನೆಮ್ಮದಿಯಿಂದಲೆ ಇರುತ್ತದೆ. ಈ ಉಪಮೆಯಲ್ಲಿ ದೀಪವೆಂದರೆ ಬುದ್ಧಿ; ಅದರ ಬೆಳಕೆಂಬುದು ಮನಸ್ಸು; ಗಾಳಿಯೇ ಇಂದ್ರಿಯಗಳು ಮತ್ತು ವಿಷಯಗಳು. ಮನಸ್ಸು ಬುದ್ಧಿಯತ್ತ ಒಲಿದಾಗ ಅದು ಚಿತ್ತ. ಈ ಚಿತ್ತದಲ್ಲಿ ಏಕಾಗ್ರತೆಯು ಒದಗಿದಾಗ ಅದು 'ಯತಚಿತ್ತ', ಎಂದರೆ ವಿಕ್ಷೇಪಗಳಿಲ್ಲದ ಚಿತ್ತ. ಇದು ಯೋಗಿಯದು. ಮೇಲೆ ಹೇಳಿದ ಸಮಾಧಿಯೋಗದಲ್ಲಿ ತೊಡಗಿರುವವನು ತನ್ನ ಮನಸ್ಸು ಬುದ್ಧಿಯಲ್ಲಿ ಸೇರಿಕೊಳ್ಳುವಂತೆ ಮಾಡುತ್ತಾನೆ. ಆಗ ಅವನ ಮನಸ್ಸು ಇಂದ್ರಿಯಗಳ ಸೆಳೆತಕ್ಕೆ ವಶವಾಗಿರುವುದಿಲ್ಲ; ಗಾಳಿಯಿಲ್ಲದ ಕಡೆ ಇಟ್ಟ ದೀಪದ ಬೆಳಕನ್ನು ಗಾಳಿ ಅಲ್ಲಾಡಿಸುವುದು ಹೇಗೆ?

ಇದು ಯೋಗದ ದೆಶೆಯನ್ನು ತಿಳಿಸುವ ಶ್ಲೋಕ. ಯೋಗವು ನಮ್ಮ ಒಳಗೇ ಇರುವ, ಆದರೆ ಬುದ್ಧಿಯ ಆಚೆ ಇರುವ ಆತ್ಮನನ್ನು (ಪರಮಾತ್ಮನನ್ನು) ಕುರಿತದ್ದು.

(50)

ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥

(6,20)

ಈ ಯೋಗದ ಸ್ಥಿತಿಯನ್ನು ಹೇಳಿದೆವಲ್ಲ, ಅಲ್ಲಿ ಯೋಗಾಭ್ಯಾಸವನ್ನು ಮಾಡಿದ್ದರ ಫಲವಾಗಿ, ಚಿತ್ತವು (ಮನಸ್ಸಿನಿಂದೊಡಗೂಡಿದ ಬುದ್ಧಿಯು) ಬಿಗಿಹಿಡಿಯಲ್ಪಡುತ್ತದೆ; ಏಕಾಗ್ರತೆಗಿಂತ ಮುಂದಿನ ಸಿದ್ಧಿಯಿದು; ಅನಂತರ ಚಿತ್ತವು ಪೂರ್ಣವಾಗಿ ಉಪರತವಾಗುತ್ತದೆ. ಎಂದರೆ ಚಿತ್ತವೃತ್ತಿಗಳು ಬಾಹ್ಯವಿಷಯಗಳ ಕಡೆ ತಿರುಗುವುದೇ ಇಲ್ಲ; ತನ್ನಲ್ಲಿ ತಾನೆ ನೆಮ್ಮದಿಯಿಂದ ಇದ್ದುಬಿಡುತ್ತದೆ. ಯೋಗದ ಕೆಲಸ ಚಿತ್ತವೃತ್ತಿಗಳನ್ನು

ನಿರೋಧ ಮಾಡುವುದು, ತಡೆಹಿಡಿಯುವುದು. ಹೀಗೆ ನಿರುದ್ಧವಾದ ಚಿತ್ತವು ಉಪರತವಾಗುತ್ತದೆ. ಶ್ಲೋಕದ ಮೊದಲ ಸಾಲಿನ ಅನ್ವಯ 'ಯತ್ರ ಯೋಗಸೇವಯಾ ನಿರುದ್ಧಂ ಚಿತ್ತಂ ಉಪರಮತೇ' ಎಂದು. ಬೇರೆಡೆ ಇದಕ್ಕೆ ಉಪಮೆಯೊಂದನ್ನು ಕೊಟ್ಟಿದ್ದಾರೆ. ಉರಿಗೆ ಕಟ್ಟಿಗೆಯನ್ನು ಒಡ್ಡದಿದ್ದರೆ ಕ್ರಮೇಣ ಅದು ಆರಿಹೋಗುವಂತೆ (ನಿರಿಂಧನಾಗ್ನಿವತ್).

ಆಗ 'ಆತ್ಮನಿಂದ ಆತ್ಮನನ್ನು ಆತ್ಮನಲ್ಲೇ ಕಾಣುತ್ತ ಸುಖಿಸುತ್ತಾನೆ'. ಆತ್ಮನಿಂದ ಎಂದರೆ ಶುದ್ಧವಾದ ಮನಸ್ಸಿನಿಂದ. ರಜಸ್ಸು ಮತ್ತು ತಮಸ್ಸು ಹೋದಮೇಲೆ ಮನಸ್ಸು ಶುದ್ಧವೇ ತಾನೆ? ಶುದ್ಧವಾದ ಮನಸ್ಸು ಯೋಗಸಿದ್ಧಿಗೆ ಸಾಧನ. ಆತ್ಮನಲ್ಲೇ ಎಂದರೆ ದೇಹದಲ್ಲೇ. ಯೋಗಸಾಧನೆ ಯಾವುದನ್ನೂ ದೇಹದಲ್ಲೇ ಮಾಡಬೇಕಷ್ಟೆ? ಹಿಂದೆ ಹೇಳಿದಂತೆ, ಯಾವ ಕೆಲಸಕ್ಕಾದರೂ ಐದು ವಿವರಗಳಿರಬೇಕು; ಇವುಗಳಲ್ಲಿ ಪ್ರಕೃತಿಗೆ ಸೇರಿದ ಮೂರು- ಶರೀರವೆಂಬ ಅಧಿಷ್ಠಾನ, ಇಂದ್ರಿಯಗಳೆಂಬ ಕಾರಣಗಳು, ದೇಹದ ಕ್ರಿಯೆಗಳೆಂಬ ಚೇಷ್ಟೆಗಳು. ನೋಡುವುದೆಂಬ ಕೆಲಸದ ಅಧಿಷ್ಠಾನ ದೇಹ (ಆತ್ಮನಿ); ಕರಣ ಮನಸ್ಸು (ಆತ್ಮನಾ). ನೋಡುವುದು ಏನನ್ನು? ಆತ್ಮನ ಪ್ರತಿಮೆಯಾದ ಬುದ್ಧಿಯನ್ನು (ಆತ್ಮಾನಂ). ಈ ಬುದ್ಧಿಯಾದರೋ ಆತ್ಮನಿಗೆ ಒಲಿದದ್ದು. ಆತ್ಮನ ಬೆಳಕಿನಿಂದ ಬೆಳಗುವ ಬುದ್ಧಿಯನ್ನೆ ಕರ್ತೃ ಎನ್ನಬಹುದು. ಬುದ್ಧಿಯಲ್ಲಿ ಅಂತರ್ಯಾಮಿಯಾಗಿರುವ ಆತ್ಮ ಅಥವಾ ಪರಮಾತ್ಮವನ್ನು ದೈವ ಎಂದು ಕರೆಯಿರಿ. ಐದು ವಿವರಗಳಲ್ಲಿ ಇವೆರಡು ಪುರುಷನಿಗೆ ಸೇರಿದುವು.

ಕಾಣುವುದು, ನೋಡುವುದು, ಸಾಕ್ಷಾತ್ಕಾರದ ಮಾತು; ನೇರವಾಗಿ ಅನುಭವಿಸುವುದು. ಇದು ಬುದ್ಧಿಯ ಕೆಲಸ. ಇಂದ್ರಿಯಗಳ ನೆರವಿನಿಂದ ನೋಡುವುದಲ್ಲ; ಆತ್ಮದ ಬೆಳಕಿನಲ್ಲಿ ನೋಡುವುದು (ಪಶ್ಯನ್). ನೋಡುವುದೇನೋ ಬುದ್ಧಿಯಾಚೆ ಇರುವ ಆತ್ಮನನ್ನೇ. ಈ ನೋಟ ಸುಖಕರವಾದುದು; ಅನುಭವ ಆತ್ಮಾನುಭವವಾದುದರಿಂದ ಸಂತೋಷವೇ ಅದರ ಸ್ವರೂಪ (ತುಷ್ಯತಿ). ಶ್ಲೋಕದ ಈ ಸಾಲಿನ ಅನ್ವಯ - 'ಯತ್ರ ಆತ್ಮನಿ ಆತ್ಮನಾ ಆತ್ಮಾನಂ ಏವ ಪಶ್ಯನ್ ತುಷ್ಯತಿ ಚ' ಎಂದು.

(51)

ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಂ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಂ ॥

(6,27)

ಯೋಗಸಾಧನೆಯಿಂದ ರಜಸ್ಸನ್ನು ಅಡಗಿಸಿ ನೆಮ್ಮದಿಯಿಂದಿರುವ ಮನಸ್ಸುಳ್ಳ ಯೋಗಿಯು ಬ್ರಹ್ಮನಾದನೆಂದೇ ಅರ್ಥ. ಸಂಸಾರದ ಕ್ಲೇಶಕ್ಕೆ ಕಾರಣವಾಗುವ ಮೂರು ಗುಣಗಳಿಂದಾಚೆ ಇರುವ, ಸಂಸಾರದ ತೊಡಕು ತೊಲಗಿರುವ, ಅವಿದ್ಯೆ ಅಳಿದಿರುವ, ಹೀಗೆ ಕಾಮಕ್ರೋಧಾದಿ ಕೊಳೆಗಳನ್ನು ಕಳೆದುಕೊಂಡು ಅಕಲ್ಮಷನಾಗಿರುವ ಆತ್ಮನೇ ಬ್ರಹ್ಮನೆನಿಸಿಕೊಳ್ಳುತ್ತಾನೆ. ಇದು ಬ್ರಹ್ಮಭಾವ, ಆತ್ಮವು ಬ್ರಹ್ಮವಾಗಿರುವ ಭಾವ. ಆತ್ಮನ ಸ್ವರೂಪವೇ ಇದಾದ್ದರಿಂದ ಸ್ವಸ್ವರೂಪದಿಂದಲೇ ಇರುವ ಭಾವ. ಯೋಗಿಯು ಏನನ್ನು ಮಾಡಲು ಹೊರಟಿದ್ದನೋ ಅದು ಇಲ್ಲಿ ಕೈಗೂಡಿತು; ಅವನು ಕೃತಕೃತ್ಯ (ಮಾಡಬೇಕಾದದ್ದನ್ನು ಮಾಡಿದವನು). ಅವನದ್ದು 'ಅಕಲ್ಮಷ ಸ್ವಭಾವ', ಎಂದರೆ ಶುದ್ಧಸತ್ತ್ವ. ಮನಸ್ಸಿನ ರಜಸ್ಸೇ ಹೋಯಿತು ಎಂದಮೇಲೆ ತಮಸ್ಸು ಮೊದಲೇ ಇಲ್ಲವೆಂದು ಅರ್ಥವಲ್ಲವೆ? ಮನಸ್ಸಿನಲ್ಲಿ ಯಾವ ಬಗೆಯ ವಿಕ್ಷೇಪವೂ ಇಲ್ಲದಿರುವುದರಿಂದ ಅದು 'ಪ್ರಶಾಂತ'; ರಜಸ್ಸು ಹೋದದ್ದರಿಂದ 'ಶಾಂತರಜಸ'. ಇವೆಲ್ಲ ಯೋಗಿಗೆ ಹೇಳಿರುವ ವಿಶೇಷಣಗಳೇ - ಪ್ರಶಾಂತಮನಸಂ, ಶಾಂತರಜಸಂ, ಬ್ರಹ್ಮಭೂತಂ, ಅಕಲ್ಮಷಂ.

ಇಂಥ ಯೋಗಿಯನ್ನು ಉತ್ತಮವಾದ ಸುಖ ತಾನಾಗಿ ಬಂದು ಸೇರುತ್ತದೆ (ಉಪ ಏತಿ). ಉತ್ತಮವಾದ ಸುಖವೆಂದರೆ ಬುದ್ಧಿಯೋಗದ ತುತ್ತತುದಿ. ಅಧಮಸುಖ ಇಂದ್ರಿಯಗಳಿಂದ ಬರುವುದು; ಮಧ್ಯಮ ಸುಖ ಮನಸ್ಸಿನಿಂದ ಒದಗುವುದು; ಉತ್ತಮ ಸುಖ ಬುದ್ಧಿಯದು. ಇದಕ್ಕಿಂತ ಹೆಚ್ಚಿನ ಸುಖ ಯಾವುದಿದೆ? ನಿರತಿಶಯವಾದ ಸುಖ ಅದು. ಉತ್ತಮವಾದ ಸುಖವೆಂದರೆ ಜೀವನ್ಮುಕ್ತಿಯೆಂದೂ ಕೆಲವರು ಸೂಚಿಸಿದ್ದಾರೆ.

(52)

ಯೋಽನ್ತಃ ಸುಖೋಽನ್ತರಾರಾಮಸ್ತಥಾನ್ತರ್ಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥

(5,24)

ಮೇಲೆ ಹೇಳಿದ ಉತ್ತಮಸುಖವು ಒಳಗಿನದು. ಇಂದ್ರಿಯಗಳಾಚೆ ಇರುವ ಮನಸ್ಸಿಗಿಂತ ಹೆಚ್ಚು ಆಳದಲ್ಲಿರುವ ಬುದ್ಧಿಯ ಅನುಭವ (ಅಂತಃ ಸುಖ). ಹೊರಗಡೆಯ ಪ್ರಪಂಚಕ್ಕೂ ಇದಕ್ಕೂ ಏನೇನೂ ನಂಟಿರದು; ವಿಷಯಗಳಾಗಲಿ, ಇಂದ್ರಿಯಗಳಾಗಲಿ ಮನಸ್ಸಾಗಲಿ ಇದಕ್ಕೆ ಕಾರಣವಾಗುವುದಿಲ್ಲ. ಇದು ಸ್ವರೂಪಭೂತವಾದ ಸುಖ. ಚೆನ್ನಾಗಿ ನಿದ್ರೆ ಹೋಗುವಾಗ ಇರುವ ಸುಖದಂತೆ; ಅದನ್ನು ಇತರರಿಗೆ ಆಗ ತಿಳಿಸಲೂ ಆಗುವುದಿಲ್ಲ, ಎದ್ದಮೇಲೆ ಬಣ್ಣಿಸಲೂ ಆಗುವುದಿಲ್ಲ. ಕಾಮ ಮೊದಲಾದ ಉಪದ್ರವಗಳನ್ನು ದೂರ ಅಟ್ಟಿ ಬುದ್ಧಿಯೋಗದಿಂದ, ಅಂತರ್ಗತನಾದ ಆತ್ಮನನ್ನು (ಪರಮಾತ್ಮನನ್ನು) ನೇರಾಗಿ ಕಂಡುಕೊಂಡ ಸುಖ ಇದು. ಇದಕ್ಕೆ ಸರಿಸಾಟಿಯಾದ ಸುಖ ಇನ್ನೊಂದಿದೆಯೆ? ಅದು ಒಳಗಿನ ಆರಾಮವೂ ಹೌದು. ಆರಾಮವೆಂದರೆ ಆಟ (ಆರಮಣ, ಕ್ರೀಡೆ); ಪ್ರೀತಿಗೆ ಕಾರಣವಾಗುವುದು. ಆಟದಲ್ಲಿ ಪ್ರಯೋಜನದ ಅಪೇಕ್ಷೆಯಿರುವುದಿಲ್ಲ; ಏನನ್ನಾದರೂ ಸಾಧಿಸಲು ಆಡುವುದು ಆಟವಾಗುವುದಿಲ್ಲ. ಆತ್ಮನನ್ನು ಬುದ್ಧಿಯು ನೇರಾಗಿ ಅನುಭವಕ್ಕೆ ತಂದುಕೊಂಡುದು ಆರಾಮವೇ, ಒಲವಿಗೆ ನಿಮಿತ್ತವೇ. ಮತ್ತೆ, ಇದು ಒಳಗಿನ ಬೆಳಕೂ ಹೌದು (ಅಂತರ್ಜ್ಯೋತಿ). ಈ ಬೆಳಕಿನಲ್ಲೇ ಆತ್ಮ ಕಾಣಿಸಿಕೊಳ್ಳುವುದು. ಸೂರ್ಯ, ಚಂದ್ರ, ದೀಪ ಮೊದಲಾದ ಹೊರಗಿನ ಬೆಳಕಿನಿಂದ ಆತ್ಮನನ್ನು ಕಾಣಲಾರೆವು; ಬುದ್ಧಿಯ ಬೆಳಕಿನಲ್ಲೇ ಕಾಣಬೇಕು. ಅಷ್ಟೇ ಅಲ್ಲ, ಒಳಗಿನ ಈ ಒಂದು ಬೆಳಕಿನಿಂದಲೇ ಹೊರಗಣ ಎಲ್ಲ ಬೆಳಕುಗಳೂ ಬೆಳಗುವುದು.

ಇಂಥ ಸುಖವನ್ನು, ಆರಾಮವನ್ನು, ಬೆಳಕನ್ನು ಪಡೆದುಕೊಂಡ ಯೋಗಿಯು (ಧ್ಯಾನ ಯೋಗಿಯು) ತಾನೇ ಬ್ರಹ್ಮನಾಗಿ ಬ್ರಹ್ಮನಿರ್ವಾಣವನ್ನು ಪಡೆದುಕೊಳ್ಳುತ್ತಾನೆ. ಬ್ರಹ್ಮನೆಂದರೆ ಮೇಲೆ ಹೇಳಿದಂತೆ ಬುದ್ಧಿಯಾಚೆಯಿರುವ ಆತ್ಮ (ಪರಮಾತ್ಮ). ಬುದ್ಧಿಯಲ್ಲೆ ಇದು ಬೆಳಗಬೇಕು. ಯೋಗದ ಸಮಯದಲ್ಲಿ ದೂರದಿಂದ ಕಂಡುಕೊಂಡ, ಸ್ಥೂಲವಾಗಿ ಅರಿತುಕೊಂಡ ಆತ್ಮವು ಬರುಬರುತ್ತ ಹತ್ತಿರಬಂದು, ಬೆಳೆದು ಬೆಳೆದು ಬುದ್ಧಿಯನ್ನೆಲ್ಲ ಆವರಿಸಿಕೊಳ್ಳುವುದು ಬ್ರಹ್ಮ (ಬೃಂಹಣತ್ವಾತ್, ಬೆಳೆಯುವುದರಿಂದ ಅದು ಬ್ರಹ್ಮ ಎಂದು ಮಾತಿನ ಮೂಲಾರ್ಥ). ಬುದ್ಧಿಯು ಬ್ರಹ್ಮವೇ ಆಯಿತು, ಬ್ರಹ್ಮನಿಂದಲೆ ತುಂಬಿಕೊಂಡಿತು ಎಂದಾಗ 'ಬ್ರಹ್ಮಭೂತ' (ಬ್ರಹ್ಮನಾದವನ್ನು). ಬ್ರಹ್ಮನಲ್ಲೇ

ಅಡಗಿಹೋಯಿತು, ಲಯವನ್ನು ಹೊಂದಿತು ಎನ್ನುವ ಅರ್ಥದಲ್ಲಿ 'ಬ್ರಹ್ಮನಿರ್ವಾಣ'. ಬುದ್ಧಿಯಲ್ಲಿ ಮನಸ್ಸಿನ ವಿಕ್ಷೇಪ ಯಾವುದೂ ಇರದೆ, ತನ್ನ ಶುದ್ಧಸ್ವರೂಪದಲ್ಲಿ ತಾನಿರುತ್ತ ಬುದ್ಧಿಯು ಆತ್ಮದ ಬೆಳಕನ್ನು ತನ್ನಲ್ಲಿ ತಂದುಕೊಂಡು, ತಾನು ತನ್ನ ಇರವನ್ನೇ ಮರೆಮಾಡಿಕೊಂಡು ಆತ್ಮನನ್ನೇ ಕಾಣಿಸುವುದು.

(53)

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಂ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಂ ॥

(5,26)

ಕಾಮ, ಕ್ರೋಧ ಎರಡೂ ರಜೋಗುಣದ ಪ್ರತೀಕಗಳು. ಇವನ್ನು ಬಿಟ್ಟವರು ರಜಸ್ಸಿನ ಅಂಕೆಯ ಜೊತೆಗೆ ತಮಸ್ಸಿನ ಅಂಕೆಯನ್ನೂ ದಾಟಿ ದೂರ ಹೋದವರು. ಸತ್ತ್ವಗುಣದಲ್ಲಿ ನಿಂತು ಮುಂದಿನ ಯೋಗಸಾಧನೆಗೆ ಟೊಂಕ ಕಟ್ಟಿದವರು. ಇಲ್ಲಿ ಯತಿ ಎನ್ನುವ ಮಾತಿಗೆ ಸಂನ್ಯಾಸಿ, ವಿರಕ್ತ ಎಂದರ್ಥವಲ್ಲ; ಯತ್ನಶೀಲ, ಪ್ರಯತ್ನ ಮಾಡುತ್ತಿರುವವನು ಎಂದರ್ಥ. ಇವರು ತಮ್ಮ ಚಿತ್ತವನ್ನು ಸಂಪೂರ್ಣವಾಗಿ ವಶದಲ್ಲಿರಿಸಿಕೊಂಡಿರುವವರೂ ಹೌದು (ಯತಚೇತಸರು).

ಮೇಲಾಗಿ ಇವರು ಆತ್ಮದ ಸ್ವರೂಪವನ್ನು ಅರಿತುಕೊಂಡವರು, ವಿದಿತಾತ್ಮರು, ಎಂದರೆ ಬ್ರಹ್ಮಜ್ಞಾನಿಗಳು, ಸಮ್ಯಕ್‌ದರ್ಶಿಗಳು. ಮನಸ್ಸನ್ನು ದಾಟಿ ಅದರಾಚೆಯಿರುವ ಬುದ್ಧಿಯನ್ನು ಶುದ್ಧಗೊಳಿಸಿ ಅದರ ಬೆಳಕಿನಲ್ಲಿ ಆತ್ಮವನ್ನು ಕಂಡುಕೊಂಡವರು. ಎಂದರೆ ಯೋಗದ ದಾರಿಯನ್ನು ಸವೆಸಿ ಗುರಿಯನ್ನು ಮುಟ್ಟಿದವರು.

ಇಂಥವರಿಗೆ ಎಲ್ಲ ಸ್ಥಳಗಳಲ್ಲೂ ಎಲ್ಲ ಕಾಲಗಳಲ್ಲೂ ಎಲ್ಲ ಸಂದರ್ಭಗಳಲ್ಲೂ (ಅಭಿತಃ) ಹಿಂದಿನ ಶ್ಲೋಕದಲ್ಲಿ ಹೇಳಿದ ಬ್ರಹ್ಮನಿರ್ವಾಣದ ಸ್ಥಿತಿಯೇ ಸಹಜವಾಗಿರುವುದು. ಆದರಿಂದ ಅವರು ಕೆಳಗೆ ಎಂದೂ ಜಾರಲಾರರು; ಅದನ್ನು ಬಿಟ್ಟು ಸಂಸಾರದ ಸ್ಥಿತಿಗೆ ಮತ್ತೆ ಮರಳಲಾರರು.

(54)

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥

(6,29)

ಧ್ಯಾನಯೋಗದಲ್ಲಿ ತನ್ನ ಚಿತ್ತವನ್ನು ತೊಡಗಿಸಿಕೊಂಡವನು ತಾನು (ಎಂದರೆ ತನ್ನ ಬುದ್ಧಿಯ ಬೆಳಕಿನಲ್ಲಿ ಕಾಣುವ ಆತ್ಮನಲ್ಲಿ) ಎಲ್ಲ ಪ್ರಾಣಿಗಳನ್ನು ಕಾಣುತ್ತಾನೆ. ಇದನ್ನು ತನ್ನ ಅನುಭವದಲ್ಲಿ ತಂದುಕೊಳ್ಳುತ್ತಾನೆಂದರ್ಥ. ಮನಸ್ಸು, ಬುದ್ಧಿ ಎರಡಲ್ಲೂ ಈ ಅನುಭವ ಬೇರೂರುತ್ತದೆ. ಎಲ್ಲ ಕಡೆಯೂ (ಚೇತನ, ಅಚೇತನಗಳಲ್ಲಿ) ಅವನು ಆತ್ಮವೊಂದೇ ತತ್ತ್ವವನ್ನು ಕಾಣುವುದರಿಂದ ಅವನದ್ದು ಸಮದೃಷ್ಟಿ. ಅವನು ಹೊಂದಿಸಿಕೊಂಡಿರುವ ಯೋಗ ಆತ್ಮದ ಯಾಥಾತ್ಮ್ಯವನ್ನು ಅಥವಾ ಯಥಾರ್ಥವನ್ನು ಕುರಿತದ್ದು. ಆತ್ಮ ದಿಟವಾಗಿ ಇರುವಂತೆಯೇ ಆತ್ಮನನ್ನು ಅರಿತುಕೊಳ್ಳುವುದು ಯೋಗ. ತನ್ನ ದೃಷ್ಟಿಯನ್ನು ತನ್ನ ಸ್ವರೂಪಕ್ಕೆ ತೊಡಗಿಸಿಕೊಳ್ಳುವುದು, ತನ್ನ ಅರಿವನ್ನು ತನ್ನ ಇರವಿನಲ್ಲೇ ಇರಿಸಿಕೊಳ್ಳುವುದು 'ಯುಜಿರ್' ಧಾತುವಿನಿಂದುಂಟಾದ ಯೋಗಶಬ್ದದ ಅರ್ಥ. ಆತ್ಮವೊಂದೇ ಇರುವುದು ಎಂದಾದ ಮೇಲೆ ಯೋಗಿಯು ಬೇರೆ ಏನನ್ನು ತಾನೆ ಗುರುತಿಸಿಯಾನು? ಬೇರೆ ಯಾವುದಕ್ಕೆ ತಾನೆ ಒಲಿದಾನು? ಹೀಗೆ ಅವನು ಸರ್ವತ್ರ ಸಮದರ್ಶನ. ಯೋಗದ ಪ್ರಯೋಜನವಾದರೂ ಇದೇ ಅಲ್ಲವೆ?

(55)

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥

(6,30)

ಎಲ್ಲೆಲ್ಲಿಯೂ (ಬ್ರಹ್ಮನಿಂದ ಹಿಡಿದು ತೃಣದವರೆಗೆ) ನನ್ನನ್ನೆ ಯಾರು ನೋಡುವರೋ, ಎಲ್ಲವನ್ನೂ ನನ್ನಲ್ಲೆ ಯಾರು ಕಾಣುವರೋ, ಅವರಿಗೆ ನಾನು ಇಲ್ಲವೆಂಬುದಿಲ್ಲ; ನನಗೆ ಅವರು ಇಲ್ಲವೆಂಬುದಿಲ್ಲ. ಇದು ಕೃಷ್ಣನ ಮಾತು; ಕೃಷ್ಣನೆಂದರೆ ಶರೀರರಥದ ಸಾರಥಿಯೆಂಬುದನ್ನೂ ಬುದ್ಧಿಸ್ಥಾನೀಯನೆಂಬುದನ್ನೂ ಮರೆಯಬಾರದು. ಎಲ್ಲ ಪ್ರಾಣಿಗಳಲ್ಲೂ ಅಡಿಪಾಯವಾಗಿರುವುದು ಈ ಶುದ್ಧವಾದ ಬುದ್ಧಿಯೇ;

ಇಂದ್ರಿಯಗಳಾಚೆ, ಮನಸ್ಸಿನಾಚೆ ಇರುವ ಆತ್ಮನನ್ನು ಪ್ರತಿಬಿಂಬಿಸಿಕೊಳ್ಳುವ ಬುದ್ಧಿ. ಆತ್ಮ ಎನ್ನುವ ಮಾತಿನ ಅರ್ಥವೇ ಎಲ್ಲೆಲ್ಲೂ ಹರಡಿಕೊಂಡಿರುವುದು, ವ್ಯಾಪಕವಾದುದು, ಎಲ್ಲದರ ಸಾರಭೂತವಾದ ತತ್ತ್ವ ಎಂದು. ಅದೇ ಎಲ್ಲದರ ಉಸಿರು (ಆನ್), ಅದೇ ಎಲ್ಲೆಲ್ಲೂ ಇರುವುದು (ಅತ್), ಅದರದ್ದೇ ಹರವು (ತತ). ರಜಸ್ಸು, ತಮಸ್ಸುಗಳಿಂದ ಕಲಕಿ, ಕೆಸರಾಗದ ಬುದ್ಧಿ ಅದರ ಬೆಳಕನ್ನು ಹಿಡಿಯಬಹುದು. ಆತ್ಮನನ್ನು ನೋಡುವುದು ಬುದ್ಧಿಯೆ; ಬುದ್ಧಿಯನ್ನು ಹದಮಾಡಿ ಈ ಕೆಲಸಕ್ಕೆ ಒದಗಿಸಿಕೊಳ್ಳುವವನು ಯೋಗಿ. ಇವನನ್ನು ಕುರಿತು ಆಡಿರುವ ಮಾತು ಈ ಶ್ಲೋಕದ ಒಕ್ಕಣೆ.

ಎಲ್ಲವನ್ನೂ ತನ್ನಲ್ಲಿ, ತನ್ನನ್ನು ಎಲ್ಲದರಲ್ಲಿ ನೋಡುವುದೇ 'ಸರ್ವತ್ರ ಸಮದರ್ಶನ'ವೆಂದು ಹಿಂದಿನ ಶ್ಲೋಕ ಹೇಳಿದ್ದು. ಪರಮಾತ್ಮನು ಎಲ್ಲೆಲ್ಲೂ ಇದ್ದಾನೆ, ಎಲ್ಲವೂ ಪರಮಾತ್ಮನಲ್ಲಿ ಇದೆ ಎಂಬ ಅರಿವು ಭಕ್ತರಿಗೆ ಇರಬೇಕಾದದ್ದು ತಾನೆ? ಭಕ್ತನು ಎಂದೂ ಪರಮಾತ್ಮನನ್ನು ಮರೆಯುವುದಿಲ್ಲ; ಪರಮಾತ್ಮನು ಭಕ್ತನನ್ನಾಗಲಿ ಮರೆಯುವುದಿಲ್ಲ ಎಂಬ ಧ್ವನಿಯೂ ಆಗಬಹುದು. 'ನ ಪ್ರಣಶ್ಯಾಮಿ' ಅಥವಾ 'ನ ಪ್ರಣಶ್ಯತಿ' ಎನ್ನುವ ಮಾತು ದೈವವು ಎಡೆಬಿಡದೆ ಭಕ್ತನ ಅನುಭವದಲ್ಲಿರುವುದನ್ನು ಹೇಳುತ್ತದೆ. ಯಾವಾಗಲೂ ಭಗವದನು ಭವವಿರುವುದು ಭಕ್ತನಿಗೆ; ತನ್ನನ್ನು ಭಗವಂತನು ಎಂದಾಗಲಿ ಕೈಬಿಡುವುದಿಲ್ಲವೆಂಬ ವಿಶ್ವಾಸವೂ ಭಕ್ತನದ್ದೇ. ಭಕ್ತನ ಕಡೆಯಿಂದ ತಾನು 'ನ ಪ್ರಣಶ್ಯಾಮಿ' ಎಂಬ ಭರವಸೆ; ತನ್ನ ಕಡೆಯಿಂದ ಭಕ್ತನು 'ನ ಪ್ರಣಶ್ಯತಿ' ಎಂಬ ಆಶ್ವಾಸನೆ.

(56)

ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್‌ಜ್ಞಾತ್ವಾಽಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥

(13,12)

ಈಗ ಪರಮಾತ್ಮ (ಆತ್ಮ, ಬ್ರಹ್ಮ) ಒಂದೇ ನಾವು ತಿಳಿಯಬೇಕಾದ ತತ್ತ್ವ ಎಂದು ಹೇಳುತ್ತಾರೆ. ಜ್ಞೇಯ ಎಂದರೆ ಜ್ಞಾನದಿಂದ ಪಡೆದುಕೊಳ್ಳಬೇಕಾದ ವಸ್ತು; ಪ್ರಾಪ್ಯ ಎಂದಾಗಲಿ ಆಗಬಹುದು. ಪ್ರಕೃತಿಯಿಂದ ಬೇರ್ಪಟ್ಟ ಪುರುಷ; ಬುದ್ಧಿಯಲ್ಲಿರುವ ಆತ್ಮನ ಆಚೆಯಿರುವ ಪರಮಾತ್ಮ; ಪ್ರತಿಬಿಂಬದ ಬಿಂಬ. ಇದನ್ನು ತಿಳಿದಿದ್ದರಿಂದ ಸಂಸಾರದ ಕ್ಲೇಶವೆಲ್ಲವೂ ಮರೆಯಾಗಿಬಿಡುತ್ತವೆ. ಸಂಸಾರವನ್ನು ಮೃತ್ಯು (ಮತ್ತೆ ಮತ್ತೆ ಹುಟ್ಟಿ-ಸಾಯುವ ಸ್ವಭಾವವುಳ್ಳದ್ದು) ಎಂದು ಕರೆದರೆ ಇದು ಅಮೃತ. ಆತ್ಮವೇನೋ

ಎಂದೂ ಇರುವ ವಸ್ತುವೇ ಆದರೂ, ಅದರ ಅನುಭವ ಯೋಗಿಗೆ ಅಥವಾ ಭಕ್ತನಿಗೆ ಒಮ್ಮೆ ಒದಗಿಬಂದಿತೆಂದರೆ ಮತ್ತೆ ಅದು ಮರೆಯಾಗಲಾರದು. ಈ ದೃಷ್ಟಿಯಿಂದಲೂ ಅದು ಅಮೃತವೇ.

ಅದರ ಸ್ವರೂಪವೇ ಹುಟ್ಟಿಲ್ಲದ್ದು; ಅದಕ್ಕೆ ಆದಿಯೆಂಬುದಿಲ್ಲ. ಇನ್ನು ಸಾವು ಹೇಗೆ ಬಂದೀತು? ಅನಾದಿಯಾದದ್ದು ಅಮೃತವೇ ಅಲ್ಲವೆ? ಅದನ್ನೆ 'ಪರಬ್ರಹ್ಮ' ನೆಂದು ವೇದಾಂತವು ವ್ಯವಹರಿಸುವುದು; ಇದನ್ನೆ ಪರಮಾತ್ಮನೆಂದೂ ಕರೆಯುವುದು. 'ಪರ' ಎನ್ನುವ ವಿಶೇಷಣ ಬುದ್ಧಿಯಾಚೆಯಿರುವುದರಿಂದ ('ಬುದ್ಧೇಃ ಪರತಸ್ತು ಸಃ'). ಅದರಾಚೆ ಇನ್ನೇನೂ ಇಲ್ಲದಿರುವುದರಿಂದ ಅದನ್ನು 'ಸತ್' (ಇದೆ, ಇರುವುದು) ಎಂದು ಹೇಳುವುದಾಗದು; ಮನಸ್ಸಿನಿಂದಾಗಲಿ ಇಂದ್ರಿಯಗಳಿಂದಾಗಲಿ ಗ್ರಹಿಸುವುದು ಸಾಧ್ಯವಿಲ್ಲವಾಗಿ. ಮತ್ತೆ ಅದನ್ನು 'ಅಸತ್' (ಇಲ್ಲ, ಅಭಾವ) ಎಂದೂ ಹೇಳಲಾಗುವುದಿಲ್ಲ; ಶುದ್ಧವಾದ ಬುದ್ಧಿಯು ಅದನ್ನು ಗ್ರಹಿಸುವುದರಿಂದ. ವ್ಯಕ್ತವಾದುದರಿಂದ ಸತ್, ಅವ್ಯಕ್ತವಾಗಿ ಅಸತ್. ಎರಡಕ್ಕೂ ಅದು ಆಸರೆಯೇ; ದಿಟವಾಗಿ ಅದು ಎರಡೂ ಅಲ್ಲ (ನ ಸತ್ ತತ್ ನ ಅಸತ್).

(57)

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ॥

(13,15)

ಎಲ್ಲ ಪ್ರಾಣಿಗಳ ಹೊರಗೆ, ಒಳಗೆ ಇರುವಂಥ ತತ್ತ್ವ ಅದು. ಹೊರಗೆ ಎಂದರೆ ಪೃಥಿವೀ, ಅಂತರಿಕ್ಷ, ಭೂತಗಳು, ವಸ್ತುಗಳು, ನದೀಪರ್ವತಗಳು, ಮರಗಿಡಗಳು, ಬೇರೆ ಪ್ರಾಣಿಗಳು, ಶರೀರ, ಇಂದ್ರಿಯ- ಸ್ಥಾನಗಳು ಇವುಗಳೆಲ್ಲವೂ ಈ ಆತ್ಮದ ಅಭಿವ್ಯಕ್ತಿಗಳೇ. ಮತ್ತೆ, ಒಳಗೆ ಎಂದರೆ ಇಂದ್ರಿಯವೃತ್ತಿಗಳು, ಮನಸ್ಸು, ಬುದ್ಧಿ ಇವುಗಳಲ್ಲಿಯೂ ಭೋಕ್ತೃವಾಗಿ ಆತ್ಮವೇ ಇರುವುದು. ಓಡಿಯಾಡದೆ ನೆಲೆಯಾಗಿ ನಿಂತಿರುವ ಸ್ಥಾವರ ಪ್ರಪಂಚವೂ ಆತ್ಮನೇ; ಓಡಿಯಾಡುವ ಜಂಗಮ ಜೀವವರ್ಗವೂ ಆತ್ಮನೇ. ತನ್ನ ಸ್ವಭಾವದಿಂದ ಅದು ಸ್ಥಿರ (ಅಚರ, ಅಚಲ); ಸರ್ವತ್ರ ಅದು ವ್ಯಾಪಕವಾದುದರಿಂದ ಅದಕ್ಕೆ ಚಲನೆಯೆಂಬುದೇನು? ಎಲ್ಲೆಲ್ಲಿಯೂ ಅದೇ ಇರುವುದರಿಂದ ಅದು ಹೋಗುವುದೆಲ್ಲಿಗೆ? ಬರುವುದೆಲ್ಲಿಗೆ? ಆದರೆ ಶರೀರವೆಂದಿರುವಾಗ ಅದರೊಳಗೆ

ಜೀವನಾಗಿ ಚರ (ಚಲ); ಕಾಲದೇಶಗಳ ಚೌಕಟ್ಟಿನಲ್ಲಿ ಚಲನೆ. ಪರಮಾತ್ಮನೆಂದಾಗ ಅಚರ; ಪ್ರತ್ಯಗಾತ್ಮನೆಂದಾಗ (ಜೀವದಲ್ಲಿರುವಾಗ) ಚರ.

ಅದು ಸ್ವಭಾವದಲ್ಲೇ ಅತ್ಯಂತ ಸೂಕ್ಷ್ಮವಾದುದರಿಂದ ಸ್ಥೂಲತಮವಾದ ಇಂದ್ರಿಯಗಳಾಗಲಿ, ಸ್ಥೂಲತರವಾದ ಮನಸ್ಸಾಗಲಿ, ಮನಸ್ಸಿನೊಂದಿಗೆ ಕೂಡಿಕೊಂಡ ಸ್ಥೂಲವೆಂಬ ಬುದ್ಧಿಯಾಗಲಿ ಅದನ್ನು ತಿಳಿಯಲಾರದು (ಅವಿಜ್ಞೇಯ). ತಿಳಿಯದಿದ್ದ ಮಾತ್ರಕ್ಕೆ ಅದು ಇಲ್ಲವೆಂದಲ್ಲ. ತಿಳಿಯಲಾರದವರಿಗೇನೋ ದೂರವೇ. ತಿಳಿಯಬಲ್ಲವರಿಗೆ ಹತ್ತಿರದಲ್ಲೇ ಇರುತ್ತದೆ. ಹೇಗೂ ಆತ್ಮವೇ ತಾನೆ? ಇಂದ್ರಿಯ, ಮನಸ್ಸುಗಳಿಗೆ ದೂರದಲ್ಲಿದೆ; ಬುದ್ಧಿಗೆ ಹತ್ತಿರವೇ ಇದೆ. ಎಲ್ಲೆಲ್ಲಿಯೂ ಇರುವುದು ಅದೇ ಆದ್ದರಿಂದ ದೂರ, ಹತ್ತಿರ ಎಂಬ ಎಣಿಕೆ ಸಲ್ಲದು. ಬಲ್ಲವರಿಗೆ ಹತ್ತಿರ; ಇತರರಿಗೆ ದೂರ. ಅದನ್ನು ಅರಿತುಕೊಳ್ಳುವುದರಲ್ಲಿ ಹತ್ತಿರ, ದೂರ ಎಂಬ ವಿಭಾಗ ಅಷ್ಟೆ.

(58)

ಅವಿಭಕ್ತಂ ವಿಭಕ್ತೇಷು ವಿಭಕ್ತಮಿವ ಚ ಸ್ಥಿತಂ ।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥

(13,16)

ಒಳಗೆ ಏನೂ ಇರದ ಮಡಕೆಯನ್ನಿಟ್ಟರೆ ಮಡಕೆಯೊಳಗಣ ಆಕಾಶ ಹೊರಗಿನ ಆಕಾಶಕ್ಕಿಂತ ಬೇರೆಯಾಗಿರುವಂತೆ ಕಾಣುತ್ತದೆಯಲ್ಲವೆ? ಒಳಗೆ, ಹೊರಗೆ ಎಂಬ ವಿಭಾಗವಿದ್ದಾಗ ಅದು ವಿಭಕ್ತ; ವಿಭಿನ್ನ, ಬೇರ್ಪಟ್ಟದ್ದು. ಆದರೆ ಇದು ಮಡಕೆಯಿಂದಾದ ವಿಭಾಗವಷ್ಟೆ. ಆಕಾಶಕ್ಕೇನು ಒಳಗೆ, ಹೊರಗೆ ಎಂಬುದಿದೆಯೆ? ಒಂದೇ ಆಕಾಶ ಅದು, ಒಳಗಿದ್ದರೂ ಸರಿಯೆ, ಹೊರಗಿದ್ದರೂ ಸರಿಯೆ. ಇದು ಅವಿಭಕ್ತ, ಬೇರ್ಪಡದೆ ಇರುವುದು, ವಿಭಾಗವಾಗದೆ ಇರುವುದು. ಸರ್ವತ್ರ ವ್ಯಾಪಕವಾದ ಆತ್ಮನೂ ಹೀಗೆಯೆ. ಆದರೆ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ ಎಂಬೆಲ್ಲ ಘಟಕಗಳಿದ್ದಾಗ ಅದು ಜೀವವಾಗಿ ತೋರಿಕೊಳ್ಳುತ್ತದೆ. ಇದು ಬುದ್ಧಿಯಿಂದಾಗಿ. ಎಷ್ಟು ಇಂಥ ಉಪಾಧಿಗಳೋ ಅಷ್ಟು ಜೀವಗಳು. ಬೇರೆಬೇರೆಯಂತೆಯೇ ಇರುತ್ತವೆ. ಇದೊಂದು ತೋರಿಕೆಯಷ್ಟೆ (ವಿಭಕ್ತಂ ಇವ). ವಾಸ್ತವವಾಗಿ, ಎಲ್ಲ ಜೀವರ ಅಂತರ್ಯಾಮಿಯಾಗಿರುವ, ಎಲ್ಲ ಬುದ್ಧಿಗಳಲ್ಲಿ ಪ್ರತಿಬಿಂಬಿತವಾಗಿರುವ ಆತ್ಮ ಅವಿಭಕ್ತವೇ. ಒಂದೇ ಆತ್ಮನು ಬೇರೆ ಬೇರೆ ಬುದ್ಧಿಗಳಲ್ಲಿ (ವಿಭಕ್ತೇಷು) ಕಾಣಿಸಿಕೊಳ್ಳುವಾಗ ಬೇರೆಬೇರೆಯಾಗಿಯೇ. ಒಂದೇ ಸೂರ್ಯ ಹತ್ತಾರು

ನೀರಿನ ಹೊಂಡಗಳಲ್ಲಿ ಕಾಣಿಸಿಕೊಳ್ಳುವುದು ಹತ್ತಾರು ಸೂರ್ಯರಂತೆಯೆ ಅಲ್ಲವೆ? ಅವಿದ್ಯೆಯಿಂದಾಗಿ ನಾನಾತ್ವ; ಸ್ವರೂಪದಲ್ಲಿ ಏಕ.

ಅನೇಕ ಜೀವಿಗಳನ್ನು ಎತ್ತಿ ನಿಲ್ಲಿಸುವುದು ಅದೊಂದೇ. ಎಲ್ಲಕ್ಕೂ ಅದೇ ಆಸರೆ, ನೆಲೆ. ಎಲ್ಲ ಜೀವಿಗಳೂ ಅದರಿಂದಲೇ ಹುಟ್ಟಿಬಂದವು; ಅದರಲ್ಲೆ ಅಡಗುವವು. ಎಲ್ಲವನ್ನೂ ಅದೊಂದೇ ಹೊರಹೊಮ್ಮಿಸುವುದು, ಕಾಪಿಟ್ಟು ಸಲಹುವುದು, ಕಡೆಯಲ್ಲಿ ಕಬಳಿಸುವುದು. ಹೊರಹೊಮ್ಮುವ ಜಗತ್ತು ಅನೇಕವಾಗಿದೆ; ಕಾಪಾಡಲ್ಪಡುವ ಜೀವಗಳು ಅನಂತವಾಗಿವೆ; ಕಬಳಿಸಲ್ಪಡುವುವೂ ವಿಭಿನ್ನವಾಗಿವೆ. ಆದರೂ ಇವೆಲ್ಲದರ ಹಿಂದಿರುವ ತತ್ತ್ವ ಅಖಂಡವಾಗಿ ಏಕ. ಈ ಆತ್ಮನೇ ಜ್ಞೇಯ, ತಿಳಿಯಬೇಕಾದದ್ದು. ಅದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆಯೇ.

(59)

ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಂ ॥

(13,17)

ಲೋಕದಲ್ಲಿ ಬೆಳಕನ್ನು ನೀಡುವ ಅನೇಕ ಮೂಲಗಳಿವೆಯಷ್ಟೆ? ಸೂರ್ಯ, ಚಂದ್ರ, ನಕ್ಷತ್ರಗಳು, ಮಿಂಚು, ದೀಪ, ಹೀಗೆ. ಅವೆಲ್ಲಕ್ಕೂ ಬೆಳಕು ಎಲ್ಲಿಂದ ಬರುತ್ತದೆ? ಅದೇ ಆತ್ಮ. ಆತ್ಮನು ಬುದ್ಧಿಗೆ ಬೆಳಕಾಗಿ ಕಾಣಿಸಿ ಕೊಂಡಾಗ, ಬುದ್ಧಿಯು ಮನಸ್ಸನ್ನು ಬೆಳಗುತ್ತದೆ; ಮನಸ್ಸು ಇಂದ್ರಿಯಗಳಿಗೆ ಬೆಳಕನ್ನು ನೀಡುತ್ತದೆ. ಒಂದೊಂದು ಇಂದ್ರಿಯವೂ ಬೆಳಕೇ. ಕಣ್ಣು ರೂಪವನ್ನು ಬೆಳಗುತ್ತದೆ, ಕಿವಿ ಶಬ್ದವನ್ನು, ಹೀಗೆ. ಇವೆಲ್ಲ ಒಳಗಿನ ಬೆಳಕುಗಳು. ಇವು ಬೆಳಗುತ್ತಿದ್ದರೇ ಸೂರ್ಯ, ಚಂದ್ರ, ದೀಪ ಮೊದಲಾದ ಹೊರಗಣ ಬೆಳಕುಗಳು. ಹೊರಗಣ ಬೆಳಕುಗಳಿಗೆ ಈ ಒಳಗಿನ ಬೆಳಕುಗಳು 'ಜ್ಯೋತಿಷಾಂ ಜ್ಯೋತಿ'. ಒಳಗಿನ ಬೆಳಕುಗಳಿಗೂ ಬುದ್ಧಿಯೇ ಬೆಳಕು. ಅದು 'ಜ್ಯೋತಿಷಾಂ ಜ್ಯೋತಿ'. ಆದರೆ ಬುದ್ಧಿಗೇನು ತನ್ನದೆ ಬೆಳಕಿದೆಯೆ? ಅದು ಎಷ್ಟಾದರೂ ಜಡ; ಪ್ರಕೃತಿಯ ಒಂದು ನೆಲೆ ಅದು. ಆತ್ಮದ ಬೆಳಕು ಅದರಲ್ಲಿ ಕಾಣಿಸಿಕೊಂಡಾಗಲೇ ಅದರ ಬೆಳಕು. ದಿಟವಾಗಿ ಇದೇ 'ಜ್ಯೋತಿಷಾಂ ಜ್ಯೋತಿ'. ಪ್ರಕೃತಿಯ ನೆಲೆಯನ್ನು ಮೀರಿದ ಬೆಳಕು ಅದಾದದ್ದರಿಂದ 'ತಮಸ್ಸಿನಾಚೆ ಇರುವುದು' ಎಂದು ಹೇಳುತ್ತಾರೆ. ತಮಸ್ಸೆಂದರೆ ಪ್ರಕೃತಿ; ಬೆಳಕನ್ನರಿಯದ ಕತ್ತಲೆ. ಪುರುಷನ ಸಂಸರ್ಗವಿರದ ಪ್ರಕೃತಿ ತಮಸ್ಸು. ಪುರುಷ ಬೆಳಗಿದರೆ ಪ್ರಕೃತಿಯಲ್ಲೂ ಬೆಳಕು. ಪುರುಷನ

ಬೆಳಕನ್ನು ಬುದ್ಧಿ ಗ್ರಹಿಸದಿದ್ದಾಗ ಅದು ತಮಸ್ಸೇ, ಕತ್ತಲೆಯೇ. ಬುದ್ಧಿಯ ಬೆಳಕಿರದಿದ್ದರೆ ಮನಸ್ಸು, ಇಂದ್ರಿಯಗಳು, ಹೊರಗಣ ವಿಷಯಗಳು ಎಲ್ಲವೂ ಕತ್ತಲೆಯೇ. ಇನ್ನು ಹೊರಗಣ ಬೆಳಕುಗಳು ಏನು ಮಾಡಿಯಾವು?

ಹೀಗೆ ಆತ್ಮತತ್ತ್ವವು ಅರಿವೆಂಬ ಬೆಳಕು, ಪ್ರಕಾಶಸ್ವರೂಪ (ಜ್ಞಾನ). ಅದನ್ನು ಅರಿತುಕೊಳ್ಳುವುದು, ಅನುಭವಕ್ಕೆ ತಂದುಕೊಳ್ಳುವುದು ಯೋಗದ ಗುರಿ (ಜ್ಞೇಯ). ಜ್ಞಾನದಿಂದ ಅದನ್ನು ಪಡೆದುಕೊಳ್ಳುವುದು ಸಾಧ್ಯವೆಂಬರ್ಥದಲ್ಲಿ ಜ್ಞಾನಗಮ್ಯ. ಜ್ಞಾನವೆಂಬ ಹೊರಗಣ ಬೆಳಕನ್ನು ಅದರ ಮೇಲೆ ಚೆಲ್ಲಿ ಅದನ್ನು ಅರಿತುಕೊಳ್ಳಬೇಕಾದುದೇನಿಲ್ಲ; ಅದು ಸ್ವಪ್ರಕಾಶ, ಸ್ವಯಂಜ್ಯೋತಿ. ಅದರ ಬೆಳಕೇ ಉಳಿದೆಲ್ಲವನ್ನೂ ಬೆಳಗುವುದು.

ಅದು ನೆಲೆಸಿರುವುದು ಎಲ್ಲ ಪ್ರಾಣಿಗಳ ಒಡಲಲ್ಲಿ. 'ಹೃತ್' (ಹೃದಯ) ಎಂಬ ಮಾತಿಗೆ ಪ್ರಾಣಿಯ ಎಲ್ಲ ವ್ಯಾಪಾರಗಳೂ ಅಂಗಾಂಗಗಳೂ ಇಲ್ಲಿಯೇ ಕೇಂದ್ರಿಕೃತವಾಗಿರುವುದು ಎಂದರ್ಥ. ಇದರಿಂದಲೇ ಪ್ರಾಣ, ಬುದ್ಧಿ, ಮನಸ್ಸು, ಇಂದ್ರಿಯಗಳು ಎಲ್ಲವೂ ಹೊರಹೊಮ್ಮುವುದು. ಆತ್ಮನ ಅಭಿವ್ಯಕ್ತಿಯಾಗುವುದು ಇಲ್ಲಿಯೇ. ಯೋಗಿಯ ಕಾಣ್ಕೆಗೆ ಆತ್ಮ ತೋರಿಕೊಳ್ಳುವುದು ಇಲ್ಲಿಯೆ ಎಂಬರ್ಥದಲ್ಲಿ ಆತ್ಮನು 'ಹೃದಿ ವಿಷ್ಠಿತಂ'. ಎಲ್ಲಕ್ಕೂ (ಪ್ರಾಣ, ಬುದ್ಧ್ಯಾದಿಗಳಿಗೆ) ಆಸರೆಯಾಗಿರುವವನು, ಅಧಿಷ್ಠಾನ ರೂಪವಾಗಿರುವವನು ಎಂಬರ್ಥದಲ್ಲಿ 'ಹೃದಿ ಧಿಷ್ಠಿತಂ' ಎಂಬೊಂದು ಪಾಠಾಂತರವಿದೆ.

(60)

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥

(3,9)

ಯಜ್ಞದ ಉದ್ದೇಶದಿಂದ ಮಾಡುವ ಕರ್ಮಗಳು ಬಂಧನಕ್ಕೆ ಕಾರಣವಾಗುವುದಿಲ್ಲ; ಇತರ ಯಾವುದೇ ಕರ್ಮವಾಗಲಿ ಜನರನ್ನು ಕಟ್ಟಿಹಾಕುತ್ತದೆ. ಆದ್ದರಿಂದ ಯಜ್ಞದ ಉದ್ದೇಶದಿಂದಲೆ, ಸಂಗವನ್ನು ಬಿಟ್ಟು ಮಾಡಬೇಕು.

ಯಜ್ಞ ಎನ್ನುವ ಮಾತಿಗೆ ಗೀತೆಯಲ್ಲಿ ವಿಶಾಲವಾದ ಅರ್ಥವಿದೆ; ಕರ್ಮಕಾಂಡದ ಚೌಕಟ್ಟು ಇಲ್ಲಿಲ್ಲ. ದೇವತೆಯನ್ನು ಉದ್ದೇಶಿಸಿ ದ್ರವ್ಯತ್ಯಾಗ ಮಾಡುವುದು ಎಂಬ ಕರ್ಮಕಾಂಡದ

ಅರ್ಥವನ್ನೆ ವಿಸ್ತರಿಸಿ, ಜ್ಞಾನವನ್ನುದ್ದೇಶಿಸಿ ಫಲಸಂಗ, ಕರ್ತೃತ್ವಾಭಿಮಾನಗಳನ್ನು ತ್ಯಾಗಮಾಡುವುದು ಯಜ್ಞವೆಂದು ಗೀತೆ ಕಾಣಿಸುತ್ತದೆ. ಎಲ್ಲವನ್ನೂ ಅರಿಯುವ ಆತ್ಮನು 'ಜ್ಞ' (ಜಾನಾತೀತಿ ಜ್ಞಃ); ಅವನನ್ನು ಉದ್ದೇಶಿಸಿ, ಎಂದರೆ ಅವನನ್ನು ಅರಿತುಕೊಳ್ಳುವ ಬಯಕೆಯಿಂದ, ಯಾವ ಕೆಲಸವನ್ನು ಮಾಡಿದರೂ ಅದು ಯಜ್ಞವೇ. ಮೇಲಾಗಿ, ಯಜ್ಞವೆಂದರೆ ವಿಷ್ಣು (ಯಜ್ಞೋ ವೈ ವಿಷ್ಣುಃ) ಎಂದು ಶ್ರುತಿಯೇ ಹೇಳುತ್ತದೆ. ವಿಷ್ಣುವೆಂಬ ಪದಕ್ಕೆ ಸರ್ವತ್ರ ವ್ಯಾಪಕನಾದ ಆತ್ಮ, ಪರಮಾತ್ಮನೆಂದರ್ಥ. ಪರಮಾತ್ಮನನ್ನು ಬುದ್ಧಿಯಲ್ಲಿ ಕಂಡುಕೊಳ್ಳುವುದೇ ಉದ್ದೇಶವಾಗಿ ಮಾಡಿದ ಕೆಲಸ ಕಟ್ಟಿಹಾಕುವುದು ಹೇಗೆ? ಅಂಥ ಕೆಲಸಕ್ಕೆ ಫಲಾಸಕ್ತಿಯೇ ಇರುವುದಿಲ್ಲವಲ್ಲ? 'ನಾನು ಮಾಡುತ್ತಿದ್ದೇನೆ' ಎಂಬ ಅನಿಸಿಕೆಯೇ ಇಲ್ಲದಿರುವಾಗ ಅದು ಕಟ್ಟಿಹಾಕುವುದು ಯಾರನ್ನು?

ಎಂದರೆ ಆತ್ಮಜ್ಞಾನವು ದೊರಕಬೇಕೆಂಬ ಭಾವನೆಯೇ ಯಜ್ಞದ ಅರ್ಥ (ಉದ್ದೇಶ, ಸ್ವರೂಪ). ಇದಕ್ಕಾಗಿ ನಾವು ಧ್ಯಾನ, ಭಕ್ತಿ, ಕರ್ಮಯೋಗ ಮೊದಲಾದ ಕೆಲಸಗಳಲ್ಲಿ ತೊಡಗಿದಾಗ ಅವೆಲ್ಲ ಯಜ್ಞಾರ್ಥವೇ. ಸಾಮಾನ್ಯವಾದ ಪ್ರಾಪಂಚಿಕ ಸೆಳೆತಗಳು ಅಲ್ಲಿ ಇಲ್ಲದಿರುವಾಗ, ವಿಷಯಗಳಿಂದ, ವಾಸನೆಗಳಿಂದ, ಬಯಕೆಗಳಿಂದ, ರಜಸ್ಸು-ತಮಸ್ಸುಗಳ ಪ್ರವೃತ್ತಿಯಿಂದ, ಬಿಡುಗಡೆಯೇ ಫಲ; ಬಂಧನದ ಪ್ರಸಕ್ತಿಯೇ ಇರದು. 'ಇದು ಬೇಕು', 'ಅದು ಬೇಡ', 'ಈ ಸುಖ ದೊರಕಬೇಕು', 'ಆ ಕಷ್ಟ ತೊಲಗಬೇಕು' ಎಂದೆಲ್ಲ ಮಾಡುವ ಕರ್ಮವು ಬಂಧನಕ್ಕೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಈ ಜನರು (ಅಯಂ ಲೋಕಃ) ತೊಡಗುವುದು ಇಂಥ ಕರ್ಮಗಳಲ್ಲಿ ತಾನೆ?

ಗೀತೆಯ ಕಿವಿಮಾತು ಯಜ್ಞದ ಉದ್ದೇಶವನ್ನಿರಿಸಿಕೊಂಡು ಯಾವುದಾದರೂ ಕರ್ಮವನ್ನು ಮಾಡು; ಅದು ಬಂಧನವಾಗುವುದಿಲ್ಲ. ಆದರೆ ಫಲಾಸಕ್ತಿಯನ್ನು ಬಿಟ್ಟು ಕರ್ಮ ಮಾಡಬೇಕು; ಮಾಡುವಾಗ ಕರ್ತೃತ್ವಾಭಿಮಾನವಿರಬಾರದು.

(61)

ಗತಸಂಗಸ್ಯ ಯುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥

(4,23)

ಹೀಗೆ ಫಲದ ಆಸಕ್ತಿಯಿಲ್ಲದೆ, ಯೋಗದ ನೆಲೆಯಲ್ಲಿ, ಬುದ್ಧಿಯು ಆತ್ಮಜ್ಞಾನದಲ್ಲೇ ನೆಲೆನಿಂತು, ಯಜ್ಞವೆಂಬ ಭಾವನೆಯಿಂದ ಮಾಡುವ ಕರ್ಮ ಸಂಪೂರ್ಣವಾಗಿ ಅಳಿದುಹೋಗುತ್ತದೆ; ಅದು ಮಾಡಿದವನನ್ನು ಯಾವ ಬಗೆಯಲ್ಲೂ ಬಂಧಿಸಲಾರದು.

ಅವನ ಆಸಕ್ತಿಗಳೆಲ್ಲ ನಿವೃತ್ತವಾಗಿರಬೇಕು. ಕರ್ಮದ ಹಿನ್ನೆಲೆಯಲ್ಲಿ ಸಂಕಲ್ಪ ಇರಬಾರದು; ಯಾವುದಾದರೊಂದು ಫಲವನ್ನು ಪಡೆದುಕೊಳ್ಳಬೇಕು ಎಂಬ ಬಯಕೆಯಿರಬಾರದು. ಹೀಗೆ ಫಲಾಸಕ್ತಿಯನ್ನು ಬಿಡುವುದೇ ಯೋಗದ ದಾರಿ; ಇದರಲ್ಲಿ ಇಂದ್ರಿಯನಿಗ್ರಹ, ಮನೋನಿಗ್ರಹ, ಬುದ್ಧಿಯ ಶುದ್ಧಿ ಇವೆಲ್ಲ ಯೋಗದ ಪರಿಕರಗಳೇ. ಯೋಗದಲ್ಲಿ ತೊಡಗಿದವನು 'ಯುಕ್ತ'. ಶ್ಲೋಕದ ಮೊದಲಸಾಲಿನಲ್ಲಿ ಬರುವ 'ಯುಕ್ತಸ್ಯ' ಎಂಬ ಮಾತಿಗೆ 'ಮುಕ್ತಸ್ಯ' ಎಂಬುದೊಂದು ಪಾಠಾಂತರವಿದೆ. ಮುಕ್ತನಾದವನೆಂದರೆ ಕರ್ಮಫಲದಿಂದಲೇ ಮುಕ್ತನಾದವನು ಎಂಬರ್ಥ ಸರಿಯಾಗುವುದಿಲ್ಲ. ಮೇಲಿನ ಶ್ಲೋಕದಲ್ಲಿ (3,9) 'ಮುಕ್ತಸಂಗಃ' ಎಂದು ಹೇಳಿರುವುದನ್ನು ನೆನಪಿಗೆ ತಂದುಕೊಳ್ಳಬೇಕು.

ಆತ್ಮಜ್ಞಾನವೊಂದೇ ತನಗೆ ಉದ್ದೇಶವೆಂದುಕೊಂಡು, ಅದಕ್ಕಾಗಿ ಬುದ್ಧಿಯನ್ನು ಸಿದ್ಧಮಾಡಿಕೊಳ್ಳುವುದೇ ಯೋಗ. ಜ್ಞಾನದಲ್ಲಿ (ಆತ್ಮದ ಅರಿವಿನಲ್ಲಿ) ಅವಸ್ಥಿತವಾದ (ನೆಲೆಗೊಂಡ) ಚೇತಸ್ಸು (ಬುದ್ಧಿ) ಉಳ್ಳವನು ಯೋಗಿ. ಅವನದ್ದು ಜ್ಞಾನ ನಿಷ್ಠೆ. ಅವನು ಮಾಡುವ ಕರ್ಮವೆಲ್ಲ ಯಜ್ಞದ ಉದ್ದೇಶದಿಂದಲೇ. 'ಯಜ್ಞಾಯ' ಎನ್ನುವಾಗ ವಿಷ್ಣುವಿಗಾಗಿ, ಎಂದರೆ ಭಗವತ್ ಪ್ರೀತಿಗಾಗಿ, ಈಶ್ವರಾರ್ಪಣ ಬುದ್ಧಿಯಿಂದ ಎಂದರ್ಥ. ಅದರಿಂದ ಬಂಧನವೆಂಬುದಿಲ್ಲ; ಬಿಡುಗಡೆಯೇ.

(62)

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥

(3,19)

ಆದ್ದರಿಂದ ಕರ್ಮಫಲದಲ್ಲಿ ಆಸಕ್ತಿಯನ್ನು ತಳೆಯದೆ ನಿತ್ಯವೂ ಮಾಡಬೇಕಾದ ಕೆಲಸಗಳನ್ನು (ಬಂಧಕವಾಗದ ಬಗೆಯಲ್ಲಿ) ಮಾಡುತ್ತಲೆ ಇರಬೇಕು. ಹೀಗೆ ಫಲಾಸಕ್ತಿಯನ್ನು ಬಿಟ್ಟು ಮಾಡಿದ ಕರ್ಮದಿಂದ ಮನುಷ್ಯನು ಅಧ್ಯಾತ್ಮದ ಕೊನೆಯ ನೆಲೆಯನ್ನು ಮುಟ್ಟುತ್ತಾನೆ. ಫಲಾಸಕ್ತಿಯನ್ನು ಬಿಡುವುದು ಚಿತ್ತಶುದ್ಧಿಗೆ ಕಾರಣವಾಗುತ್ತದೆ; 'ಅಸಕ್ತಃ' ಎನ್ನುವ ಮಾತಿನಿಂದ ಕರ್ಮಯೋಗಿಯನ್ನು ಸೂಚಿಸಿದ್ದಾರೆ. ಕರ್ಮವನ್ನು ಮಾಡಿಯೂ ಅದರ ಫಲದತ್ತ ಮನಸ್ಸನ್ನು ಹರಿಸದಿರುವ ಜಾಣತನವೇ ಯೋಗವೆಂದು ಲಕ್ಷಣವನ್ನು ಹೇಳಿದ್ದಾರೆ ('ಯೋಗಃ ಕರ್ಮಸು ಕೌಶಲಂ'). ಈ ಜಾಣತನವೇ ಉಪಾಯ ಅಥವಾ ಯೋಗ. ಚಿತ್ತವು ಶುದ್ಧವಾಗಲಾಗಿ, ಒದಗಿಬರುವ ಆತ್ಮನ ಅರಿವು ಜ್ಞಾನ. ಈ ಆತ್ಮಾನುಭವ ಅಥವಾ ಆತ್ಮಾವಲೋಕನವೆಂಬುದು ಯೋಗದ ಗುರಿ, ಕಡೆಯ ಹಂತ (ಪರಂ). ಬಂಧಕವಾಗುವುದಿಲ್ಲ ಎಂಬುದು ನಿಷೇಧಾತ್ಮಕ; ಗುರಿಯನ್ನು ಸೇರುತ್ತಾನೆ ಎಂಬುದು ಅದರ ಇನ್ನೊಂದು ಮುಖ.

(63)

ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥

(5,8)

ಕರ್ಮಯೋಗದಲ್ಲಿ ಅಥವಾ ಸಮಾಧಿಯೋಗದಲ್ಲಿ ತೊಡಗಿದವನು (ಯುಕ್ತ) 'ನಾನು ಏನನ್ನೂ ಮಾಡುತ್ತಿಲ್ಲ' ಎಂದು ತಿಳಿಯಬೇಕು; ಆತ್ಮ ತತ್ತ್ವವನ್ನು ಅರಿತವನ ಅನಿಸಿಕೆಯೇ ಇದು. ಆತ್ಮನು (ಪುರುಷನು) ಪ್ರಕೃತಿಯಿಂದ ಬಿಡಲ್ಪಟ್ಟಮೇಲೆ ಅವನು ಮಾಡುವುದೇನಿದೆ? ಮಾಡುವುದು ಪ್ರಕೃತಿಯೇ ಅಲ್ಲವೆ? ಪ್ರಕೃತಿ ಸಂಸರ್ಗದಲ್ಲಿರುವಾಗ ಪ್ರಕೃತಿ ಮಾಡುವುದನ್ನೆಲ್ಲ ತಾನೇ ಮಾಡುತ್ತಿದ್ದೇನೆ ಎಂದುಕೊಳ್ಳುತ್ತಿದ್ದ. ಇಂದ್ರಿಯಗಳ ಕೆಲಸವೆಲ್ಲ ಮನಸ್ಸಿನಿಂದ ಆಗುವುದೇ; ಮನಸ್ಸಿನ ಕೆಲಸವೆಲ್ಲ ಬುದ್ಧಿಯಿಂದ ಆಗುವುದೇ. ಬುದ್ಧಿಯ ಕೆಲಸವಾದರೋ ಆತ್ಮನ ಬೆಳಕಿನಿಂದ ಆಗುವುದು. ಆತ್ಮನದ್ದು ಬರಿಯ ಇರವು; ಕೆಲಸವೇನೂ ಇರದು. ಬುದ್ಧಿಯದೇ ಕೆಲಸ. ಬುದ್ಧಿಯು ಅಶುದ್ಧವಾಗಿದ್ದಾಗ ಆತ್ಮನ ಇರವನ್ನು ಮರೆಮಾಚಿ ತಾನೇ ಮಾಡುತ್ತಿದ್ದೇನೆಂದು ಬುದ್ಧಿ ಅಂದುಕೊಳ್ಳುತ್ತದೆ. ಅದನ್ನೆ ಕರ್ತೃ ಎನ್ನುವುದು. ಆತ್ಮನು ಬುದ್ಧಿಯಲ್ಲಿ ಹಾಗೆ ಸೇರಿಕೊಂಡಿದ್ದಾಗ 'ನಾನು' ಎಂಬ ಅರಿವೂ ಬೇರೂರಿ, ·ಕರ್ತೃತ್ವಾಭಿಮಾನ ಬರುತ್ತದೆ. ಯೋಗದಿಂದ ಬುದ್ಧಿಯು ಶುದ್ಧವಾದಾಗ ಈ ತಪ್ಪುಕಲ್ಪನೆ ಇರಲಾರದು. ಕರ್ತೃತ್ವಾಭಿಮಾನ ಕಳಚಿ ಬೀಳುತ್ತದೆ.

ದೇಹದ ಕ್ರಿಯೆಗಳು, ಇಂದ್ರಿಯ ವ್ಯಾಪಾರಗಳು ನಡೆಯುತ್ತಿರುವಾಗ 'ನನ್ನಿಂದ ಅವು ನಡೆಯುತ್ತಿವೆ' ಎಂಬ ಅಭಿಮಾನ ಕೈಬಿಡುತ್ತದೆ. ಇಂದ್ರಿಯಗಳು ರಜೋಗುಣ, ಅವುಗಳ ವಿಷಯಗಳು (ಅರ್ಥ) ತಮೋಗುಣ. ಗುಣಗಳು ಗುಣಗಳಲ್ಲಿ ತೊಡಗಬಹುದೇ ವಿನಾ ಗುಣಾತೀತನಾದ ಆತ್ಮನೊಂದಿಗೆ ಹೇಗೆ ಹೊಂದಿಕೊಳ್ಳುವುವು? ಗುಣಗಳ ಕಾರ್ಯಕ್ಷೇತ್ರ ಪ್ರಕೃತಿಯೇ; ಪುರುಷನಿಗೆ ಗುಣಗಳ ನಂಟು ಇಲ್ಲ. ಇದು ಯೋಗದಲ್ಲಿರುವವನಿಗೆ ಚೆನ್ನಾಗಿ ತಿಳಿಯುತ್ತದೆ. ಈ ವ್ಯಾಪಾರಗಳಲ್ಲಿ ತನ್ನದೆಂಬುದೇನೂ ಇರದು ಎಂಬ ಅರಿವು ಬರುತ್ತದೆ. ಅದು ಬಂದ ಮೇಲೆ ಕಳವಳ, ಕಸವಿಸಿ, ಕಾಳಜಿ, ಕಾತರ ಎಲ್ಲವೂ ಮರೆಯಾಗುತ್ತವೆ.

(64)

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥

(5,10)

ಯೋಗಿಯಾದವನು ಕರ್ಮಗಳನ್ನು ಮಾಡದೆ ಬಿಡುವುದಿಲ್ಲ. ತನಗೆ ವಿಹಿತವಾದ ಕೆಲಸಗಳನ್ನು ಕೈಗೊಳ್ಳುತ್ತಾನೆ, ವ್ಯವಹಾರದಲ್ಲಿ ತೊಡಗಿಯೆ ಇರುತ್ತಾನೆ. ಆದರೆ ಫಲಗಳಲ್ಲಿ ನೆಲೆಗೊಂಡು ಕೆಲಸಗಳನ್ನು ಮಾಡುವುದಿಲ್ಲ. ಕೆಲಸಮಾಡುವಾಗ ಅವನು ಸಂಗವನ್ನು ಬಿಟ್ಟಿರುತ್ತಾನೆ. ಹಿಂದೆ ಹೇಳಿದಂತೆ, ಸಂಗವೆಂದರೆ ಫಲದಲ್ಲಿ ಆಸಕ್ತಿ; ಕರ್ತೃತ್ವಾಭಿಮಾನ. ಇವೆರಡನ್ನೂ ಬಿಟ್ಟಮೇಲೆ ಕೆಲಸಮಾಡುವ ಉತ್ಸುಕತೆ ಎಲ್ಲಿಂದ ಬರುತ್ತದೆ? ಮಾಡುವ ಕೆಲಸದಲ್ಲಿ ಗೊತ್ತುಗುರಿಯೇ ಇರಲಾರದಲ್ಲ? ಎಂದರೆ 'ಬ್ರಹ್ಮನಲ್ಲಿ ಕರ್ಮಗಳನ್ನೆಲ್ಲ ಇರಿಸಿ' ಎಂದು ಸಮಾಧಾನ ಹೇಳಿದ್ದಾರೆ.

ಆತ್ಮ ಎಂಬ ಮಾತಿಗೆ ಅನೇಕ ಅರ್ಥಗಳಿರುವಂತೆಯೆ, ಬ್ರಹ್ಮ ಎಂಬ ಮಾತಿಗೂ ಹಲವು ಅರ್ಥಗಳಿವೆ. ಬ್ರಹ್ಮ ಎನ್ನುವಾಗ ಬೆಳೆಯುವುದು (ಬೃಂಹಣ), ದೊಡ್ಡದಾಗುವುದು, ಎಲ್ಲವನ್ನೂ ಆವರಿಸಿಕೊಳ್ಳುವುದು ಮೂಲಾರ್ಥ; ಈ ಸಂದರ್ಭದಲ್ಲಿ ಹೀಗೆ ಬೆಳೆಯುವುದು, ದೊಡ್ಡದಾಗುವುದು ಪ್ರಕೃತಿಯೇ. ಪ್ರಕೃತಿಯಲ್ಲಿ ಪರಿಣಾಮ ಇದ್ದದ್ದೇ; ಗುಣಗಳ ವ್ಯಾಪಾರ ಬೃಂಹಣಸ್ವಭಾವದ್ದೇ ಆದ್ದರಿಂದ 'ಬ್ರಹ್ಮನಲ್ಲಿ ಕರ್ಮಗಳನ್ನು ಇರಿಸಿ' ಎಂದರೆ ಪ್ರಕೃತಿಯಲ್ಲಿಯೆ ಕರ್ಮಗಳೆಲ್ಲ ನಡೆಯುವುವು ಎಂದು ಮನವರಿಕೆ ಮಾಡಿಕೊಳ್ಳುವುದು. ಬ್ರಹ್ಮ ಎಂಬ ಶಬ್ದಕ್ಕೆ ಪ್ರಕೃತಿ ಎಂಬರ್ಥ ಶಾಸ್ತ್ರದಲ್ಲಿ ಅನೇಕ ವೇಳೆ ಬರುತ್ತದೆ (ಮಹದ್‌ಬ್ರಹ್ಮ).

ಯಾವ ಕೆಲಸವನ್ನು ಮಾಡುವಾಗಲೂ ಐದು ವಿವರಗಳಿರುತ್ತವೆಯೆಂಬುದು ಮೊದಲೆ ಬಂದ ಒಕ್ಕಣೆಯಷ್ಟೆ. ಅಧಿಷ್ಠಾನವೆಂಬ ಶರೀರ, ಕರಣಗಳೆಂಬ ಇಂದ್ರಿಯಗಳು, ಚೇಷ್ಟೆಗಳೆಂಬ ಶಾರೀರಕ ಕ್ರಿಯೆಗಳು ಇವು ಮೂರಂತೂ ಸ್ಪಷ್ಟವಾಗಿ, ನಿರ್ವಿವಾದವಾಗಿ ಪ್ರಕೃತಿಗೆ ಸೇರಿದವೇ. ಇನ್ನು ಕರ್ತೃ ಮತ್ತು ದೈವ ಇವು ಪುರುಷನೆಂಬ ವಿಭಾಗಕ್ಕೆ ಸೇರಬಹುದೆಂಬ ಸೂಚನೆಯಿದ್ದರೂ, ದಿಟವಾಗಿ ಕರ್ತೃವೆಂದರೆ ಬುದ್ಧಿಯ ಬೆಳಕೇ (ಆತ್ಮನು ಬುದ್ಧಿಯಲ್ಲಿ ತೋರಿಕೊಳ್ಳುವುದು). ದೈವವೆಂದರೆ ಪ್ರಕೃತಿನಿಯಮ. ಹೀಗೆ ಇವೂ ಪ್ರಕೃತಿಯ ವಿವರಗಳೇ ಎಂದಾಗುತ್ತದೆ. ಪ್ರಕೃತಿಯೆಂಬ ಬ್ರಹ್ಮನಲ್ಲೇ ಯೋಗಿಯು ತನ್ನ ಕರ್ತೃತ್ವವನ್ನೂ ಭೋಕ್ತೃತ್ವವನ್ನೂ ಸಲ್ಲಿಸಿಬಿಡುತ್ತಾನೆ. ಮಾಡುವುದು ಪ್ರಕೃತಿಯೇ,

ಮಾಡಿಸುವುದೂ ಪ್ರಕೃತಿಯೇ, ಅನುಭವಿಸುವುದೂ ಪ್ರಕೃತಿಯೇ, ಅನುಭವಿಸುವಂತೆ ಮಾಡುವುದೂ ಪ್ರಕೃತಿಯೇ.

ಇನ್ನು ಬ್ರಹ್ಮನೆಂದರೆ ಸರ್ವಾಂತರ್ಯಾಮಿಯಾದ ಸರ್ವನಿಯಾಮಕನಾದ ಈಶ್ವರ (ಪರಮಾತ್ಮಾ, ದೈವ, ಪರಮೇಶ್ವರ) ಎಂದಿಟ್ಟುಕೊಂಡರೂ 'ಮಾಡುವವನು ನಾನಲ್ಲ, ಮಾಡಿಸುವವನು ಅವನೇ ('ಅಯಮೇವ ಕಾರಯಿತಾ, ನಾಹಂ ಕರ್ತಾ') ಎಂಬ ಅರಿವು ಮುಖ್ಯವಾಗುತ್ತದೆ. ಎಲ್ಲವೂ ಈಶ್ವರೇಚ್ಛೆ, ನಾನು ಮಾಡುವೆನೆಂಬುದು ಹುಸಿಯಾದ ಅಭಿಮಾನ; ನಾನು ದೈವದ ಕೈಯಲ್ಲಿ ಒಂದು ಸಾಧನ ಅಷ್ಟೆ; ನಿಮಿತ್ತಮಾತ್ರದವನು. ಭಕ್ತರು ತಿಳಿಯುವುದು ಹೀಗೆ.

ಯಾವ ಅರ್ಥವನ್ನು ಹಿಡಿದರೂ, ಮಾಡುವ ಕರ್ಮದಿಂದ ಬಂಧನವಾಗುವುದಿಲ್ಲ. ಬಂಧನವನ್ನೇ ಇಲ್ಲಿ ಕೇಡು, ಕೆಡಕು (ಪಾಪ) ಎಂದು ಕರೆದಿದ್ದಾರೆ. ಒಂದು ದೃಷ್ಟಾಂತವನ್ನೂ ಕಾಣಿಸಿದ್ದಾರೆ. ನೀರಿನಲ್ಲಿ ಹುಟ್ಟಿ ಬೆಳೆದ ತಾವರೆ ಗಿಡದ ಎಲೆ ನೀರಿನಿಂದ ಒದ್ದೆಯಾಗುವುದಿಲ್ಲ; ಆದರ ಮೇಲೆ ಬಿದ್ದ ನೀರು ಹಾಗೆಯೆ ಜಾರಿಹೋಗುತ್ತದೆ. ಪ್ರಕೃತಿಯಲ್ಲೇ ಮೈದಳೆದು ತೋರಿಕೊಂಡ ಮನುಷ್ಯ ಪ್ರಕೃತಿಯ ಬಂಧನಕ್ಕೆ ಸಿಲುಕಿಕೊಳ್ಳದಂತೆ ಮಾಡುವುದು ಈ ಅನಾಸಕ್ತಿಯೋಗ.

(65)

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥

(3,17)

ಇನ್ನು, ಯೋಗದ ನೆಲೆಯನ್ನು ಸೇರಿದವನು ಮಾಡಬೇಕಾದದ್ದಾದರೂ ಏನಿದೆ? ಅವನಿಗೆ ಯಾವುದೇ ವೈದಿಕ, ಲೌಕಿಕಕರ್ಮಗಳ ಅಗತ್ಯವೂ ಇಲ್ಲ, ಅವುಗಳಿಂದ ಪ್ರಯೋಜನವೂ ಇಲ್ಲ. ಯೋಗಕ್ಕೆಂದು, ಆತ್ಮಾವಲೋಕನಕ್ಕೆಂದು, ಮಾಡಬೇಕಾಗಿದ್ದ ಕೆಲಸಗಳೂ ಕೈಗೂಡಿದುವು; ಮತ್ತೆ ಮಾಡಬೇಕಾದುದೇನಿಲ್ಲ. ಇನ್ನು ವಿಧಿಯೆಲ್ಲಿಯದು? ನಿಷೇಧವೆಲ್ಲಿಯದು? ತನ್ನಲ್ಲಿ ತಾನು ನೆಮ್ಮದಿಯಿಂದ ಇರುತ್ತಾನೆ, ತನ್ನಲ್ಲಿಯೇ ತಾನು ಸಂತೋಷಪಡುತ್ತಾನೆ, ತನ್ನಷ್ಟಕ್ಕೆ ತಾನು ತೃಪ್ತನಾಗಿರುತ್ತಾನೆ. ಇನ್ನೇನು ಬೇಕು?

ಯೋಗಸಾಧನೆಯನ್ನು ಯಶಸ್ವಿಯಾಗಿ ಮುಗಿಸಿದವನ ಸ್ಥಿತಿಯನ್ನು ಈ ಶ್ಲೋಕ ಹೇಳುತ್ತದೆ. ಅವನು ತನ್ನ ಕೆಲಸಗಳನ್ನೇನೋ ಮಾಡುತ್ತಲೆ ಇರುತ್ತಾನೆ; ಎಲ್ಲರಂತೆ, ಎಲ್ಲರೊಡನೆ ವ್ಯವಹಾರದಲ್ಲಿರುತ್ತಾನೆ. ಆದರೆ ಅವನು ಹೊರಗಣ ಯಾವುದೇ ವಿಷಯವನ್ನು, ಲಾಭವನ್ನು, ಜಯವನ್ನು, ಆಸರೆಯನ್ನು ಬಯಸುವುದಿಲ್ಲ. ಅವನ ಪ್ರವೃತ್ತಿ ಬಹಿರ್ಮುಖವಾದುದಲ್ಲ; ಪ್ರಕೃತಿಗೆ ಪರತಂತ್ರವಲ್ಲ. ಅವನು ಸಂಪೂರ್ಣವಾಗಿ ಸ್ವ-ತಂತ್ರ. ತನ್ನೊಳಗೇ ತನಗೆ ಬೇಕಾದ ಪ್ರೀತಿ, ತೃಪ್ತಿ, ಸಂತೋಷಗಳು ಸಿದ್ಧವಾಗಿರುವಾಗ ಅವನು ಸ್ವ-ರಾಟ್. ಬೇರೆ ಯಾರನ್ನೂ ಅವಲಂಬಿಸಬೇಕಾಗಿಲ್ಲ; ಯಾವುದಕ್ಕೂ ಬಾಯಿಬಿಡಬೇಕಾಗಿಲ್ಲ.

ಆತ್ಮಜ್ಞಾನದಲ್ಲಿ ನೆಲೆಗೊಂಡವನ ಮಾತು ಇದು. ರತಿಯೆನ್ನುವುದು ಯಾವುದರಲ್ಲಿ ಇವನಿಗೆ ಪ್ರೀತಿಯಿದೆ, ಯಾವುದಕ್ಕೆ ಇವನು ಹಾತೊರೆಯುತ್ತಾನೆ (ಆಭಿಮುಖ್ಯ), ಯಾವುದರಲ್ಲಿ ಇವನು ಆಸೆಯಿಂದ ತೊಡಗುತ್ತಾನೆ ಎಂಬುದನ್ನು ಸೂಚಿಸುತ್ತದೆ. ಇವನಿಗೆ ಆತ್ಮ ವಸ್ತುವಿನಲ್ಲೇ ರತಿ. ಅದರಲ್ಲಿಯೇ ಅವನು ತೃಪ್ತ. ತೃಪ್ತಿಯೆಂದರೆ 'ಇಷ್ಟು ಸಾಕು, ಇನ್ನೇನೂ ಬೇಡ' (ಅಲಂಬುದ್ಧಿ) ಎನ್ನುವುದು; ಬೇರೆ ಯಾವುದರ ಬಯಕೆಯೂ ಅವನಿಗಿಲ್ಲ (ವೀತತೃಷ್ಣ). ಹಾಗೆಯೇ ಆತ್ಮದಲ್ಲಿಯೇ ತನ್ನ ಸಂತೋಷವನ್ನು ಕಂಡುಕೊಂಡವನು ಅವನು. ಬೇರೆ ಯಾವುದೂ ಅವನ ಸಂತೋಷಕ್ಕೆ ಕಾರಣವಾಗಲಾರದು.

(66)

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥

(4,19)

ಯಾವನಿಗೆ ಅವನು ಮಾಡುವ ಎಲ್ಲ ಕೆಲಸಗಳಲ್ಲೂ ಬಯಕೆಯೆಂಬುದಾಗಲಿ, ಪ್ರಯೋಜನವನ್ನು ಪಡೆದುಕೊಳ್ಳಬೇಕೆಂಬ ನಿಶ್ಚಯವಾಗಲಿ ಇರುವುದಿಲ್ಲವೋ ಅವನ ಕರ್ಮಗಳೆಲ್ಲ ಆತ್ಮಜ್ಞಾನವೆಂಬ ಬೆಂಕಿಯಲ್ಲಿ ಸುಟ್ಟು ಹೋದಂತೆ ಆಗಿಬಿಡುತ್ತವೆ. ಅವನನ್ನೇ ಪಂಡಿತನೆನ್ನುವುದು.

'ಕಾಮಸಂಕಲ್ಪವರ್ಜಿತ' ನೆಂದರೆ ಫಲಸಂಗರಹಿತನೇ. ಯಾವುದಾದರೊಂದು ಪ್ರಯೋಜನವನ್ನು ಮನಸ್ಸಿನಲ್ಲಿರಿಸಿಕೊಂಡು ಕೆಲಸಮಾಡುವುದಿಲ್ಲ ಅವನು; ತಾನು ಮಾಡುತ್ತಿರುವವನು ಎಂಬ ಅಭಿಮಾನವಾಗಲಿ ಅವನಿಗೆ ಇರುವುದಿಲ್ಲ. ಕಾಶ್ಮೀರದ

ಗೀತಾಪ್ರತಿಗಳಲ್ಲಿ 'ಕಾಮಸಂಕಲ್ಪವರ್ಜಿತಾಃ' ಎನ್ನುವುದಕ್ಕೆ 'ಕಾಮಕ್ರೋಧವಿವರ್ಜಿತಾಃ' ಎಂದು ಪಾಠಾಂತರವಿದೆ. ಬಯಕೆಯೂ ಸಿಟ್ಟೂ ರಜೋಗುಣದ ಅಭಿವ್ಯಕ್ತಿ. ಅದನ್ನು ಬಿಟ್ಟವನು ಎಂದರೆ ಸತ್ತ್ವಗುಣದಲ್ಲೇ ನೆಲೆನಿಂತವನು; ತಮಸ್ಸನ್ನು ಮೊದಲೇ ಬಿಟ್ಟಿರುತ್ತಾನಷ್ಟೆ.

ಕರ್ಮವೆನ್ನುವ ಮರದಿಂದ ಫಲ ಬರುವುದು ಮಾತ್ರವಲ್ಲ, ಬೇರುಗಳೂ ಹೊರಟುಕೊಳ್ಳುತ್ತವೆ. ಮರ ಗಟ್ಟಿಯಾಗಿ ನಿಲ್ಲುತ್ತದೆ; ಹರಡಿಕೊಂಡು ಬೆಳೆಯುತ್ತದೆ. ಆದರೆ ಮರಕ್ಕೆ ಬೆಂಕಿ ಬಿದ್ದರೆ, ಮರ ಸುಟ್ಟುಹೋಗುತ್ತದೆ. ಫಲಗಳು ಹೋಗುವುದಿರಲಿ, ಬೇರುಗಳೂ ನಾಶವಾಗಿಬಿಡುತ್ತವೆ. ಮರ ಮತ್ತೆ ಚಿಗುರುವ, ಬೆಳೆಯುವ ಆಸೆಯೇ ಇರದು. ಕರ್ಮವೆಂಬ ಮರಕ್ಕೆ ಜ್ಞಾನವೆಂಬ ಬೆಂಕಿ.

ಪಂಡಿತ ಎನ್ನುವ ಮಾತಿನ ಮೂಲಾರ್ಥ ಇದು-ಪಂಡಾ ಎಂದರೆ ಜ್ಞಾನ, ಆತ್ಮಜ್ಞಾನ; ಅದನ್ನುಳ್ಳವನು ಪಂಡಿತ. ಎಂದರೆ ತತ್ತ್ವಜ್ಞಾನಿ, ಯಥಾರ್ಥವನ್ನು ತಿಳಿದವನು. ಭ್ರಾಂತನಲ್ಲ; ದೇಹವನ್ನೇ ಆತ್ಮವೆಂದು ಬಗೆದವನಲ್ಲ. ಪ್ರಕೃತಿಪುರುಷರ ವಿಭಾಗವನ್ನು ಬಲ್ಲವನು.

(67)

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥

(12,2)

ಇಲ್ಲಿ ಯೋಗದ ವಿಚಾರವಾಗಿ ಸಿದ್ಧಾಂತವನ್ನು ಹೇಳುತ್ತಾರೆ. ಯಾರು ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸಿ, ಎಡೆಬಿಡದ ಯೋಗದಲ್ಲಿ ತೊಡಗಿ, ಅತಿಶಯವಾದ ಶ್ರದ್ಧೆಯಿಂದ ಕೂಡಿ ಉಪಾಸನೆ ಮಾಡುವರೋ, ಅವರದ್ದೇ ಮೋಕ್ಷದ ಉಪಾಯಗಳಲ್ಲಿ ಶ್ರೇಷ್ಠವಾದದ್ದು.

'ಮಯಿ' (ನನ್ನಲ್ಲಿ), 'ಮಾಂ' (ನನ್ನನ್ನು), 'ಮೇ' (ನನ್ನ) ಎಂಬ ಮಾತುಗಳು ಇಲ್ಲಿ ಬಂದಿವೆ. ಇವೆಲ್ಲ ಆತ್ಮ ಅಥವಾ ಪರಮಾತ್ಮನನ್ನು ಕುರಿತ ಮಾತುಗಳು. ಇಂದ್ರಿಯಗಳನ್ನು ವಿಷಯಗಳಿಂದ ಹಿಂದಕ್ಕೆ ಸೆಳೆದುಕೊಂಡು, ಮನಸ್ಸನ್ನು ಬಿಗಿಹಿಡಿದು, ರಜಸ್ಸನ್ನೂ ತಮಸ್ಸನ್ನೂ ಸಂಪೂರ್ಣವಾಗಿ ಅಡಗಿಸಿಕೊಂಡು, ಶುದ್ಧವಾದ ಬುದ್ಧಿಯಲ್ಲಿ ಆತ್ಮನ ಬೆಳಕು ತಿಳಿಯಾಗಿ ಬಿದ್ದಾಗ, ಬುದ್ಧಿಗೆ ಆತ್ಮಭಾವ ಒದಗುತ್ತದೆ. ಈ ನೆಲೆಯಲ್ಲಿ ಆಡಿದ ಮಾತುಗಳು

ಇವು. ಈ ಬುದ್ಧಿಯಲ್ಲಿ ಮನಸ್ಸನ್ನು ನೆಲೆಗೊಳಿಸುವುದನ್ನು (ಆವೇಶ್ಯ) ಮೊದಲು ಹೇಳಿದ್ದಾರೆ. ನೆಲೆಗೊಳಿಸುವುದೆಂದರೆ ಚೆನ್ನಾಗಿ ಇಡುವುದು, ನೆಮ್ಮದಿಯಿಂದ ಇರುವುದು (ಸಮಾಧಾಯ). ಮನಸ್ಸು ಶುದ್ಧವಾದ ಬುದ್ಧಿಯಲ್ಲಿ ನಿಂತಾಗ, ಆತ್ಮತತ್ತ್ವವನ್ನು ಅದೂ ಅನುಭವಕ್ಕೆ ತಂದುಕೊಳ್ಳುತ್ತದೆ. ಅನಂತರ ಬೇರೆ ಯಾವ ವಿಷಯದ ಕಡೆಗೂ ಮನಸ್ಸು ಹೋಗದೆ, ಬುದ್ಧಿಯಲ್ಲೇ ಒಂದಾಗಿಬಿಡುತ್ತದೆ. ಇದು ಯೋಗ. ಹಾಗೆ ಒಂದಾಗಿಬಿಟ್ಟರೆ 'ಯುಕ್ತ'. ರಾತ್ರಿ-ಹಗಲು, ಆಗ-ಈಗ ಎನ್ನದೆ ಎಲ್ಲ ಕಾಲದಲ್ಲೂ ಎಲ್ಲ ಅವಸ್ಥೆಗಳಲ್ಲೂ ಮನಸ್ಸು ಬುದ್ಧಿಯಲ್ಲೇ ತೊಡಗಿರುವಾಗ 'ನಿತ್ಯಯುಕ್ತ'.

ಇದರ ಫಲವೇನು? ಬುದ್ಧಿಯಲ್ಲಿ ತೋರಿಕೊಂಡ ಆತ್ಮನನ್ನು ಉಪಾಸಿಸುವುದು. ಉಪಾಸನೆಯೆಂದರೆ ಹತ್ತಿರ (ಉಪ) ಕೂಡುವುದು (ಆಸನ). ಬುದ್ಧಿಯು ಎಷ್ಟಾದರೂ ಪ್ರಕೃತಿಯ ವಿವರವೇ. ದಿಟವಾಗಿ ಅದರಾಚೆ ಇರುವುದು ಪುರುಷ ಅಥವಾ ಆತ್ಮ. ಆತ್ಮದ ಹತ್ತಿರವೇ ಬುದ್ಧಿಯನ್ನು ತಂದುಕೊಳ್ಳುವುದು ಉಪಾಸನೆ; ಬೆಳಕಿನತ್ತ ಮುಖಮಾಡಿ ನಿಲ್ಲುವುದು. ಹೀಗೆ ಉಪಾಸನೆಗೆ ಅಣಿಯಾಗಲು ಹೆಚ್ಚಿನ ಶ್ರದ್ಧೆ ಬೇಕು. ಶ್ರದ್ಧೆ ಸಾತ್ತ್ವಿಕವಾದದ್ದು; ಸತ್ತ್ವಗುಣದ ವಿಶಿಷ್ಟ ಪರಿಣಾಮ ಅದು; ಅತ್ತಿತ್ತ ಕದಲದೆ ನಿಲ್ಲುವ ಸ್ಥೈರ್ಯ ಅದಕ್ಕಿದೆ. ಈ ಸ್ಥೈರ್ಯವಿರದಿದ್ದರೆ ಆತ್ಮಲಾಭ, ಆತ್ಮಾವಲೋಕನ ಸಾಧ್ಯವಾಗದು. ಶ್ರದ್ಧೆಯಿಂದ ಕೂಡಿದ ಉಪಾಸನೆಗೆ ಧ್ಯಾನಯೋಗವೆಂದು ಹೆಸರು.

ಈ ಧ್ಯಾನಯೋಗವೇ ಯೋಗಗಳಲ್ಲೆ ಉತ್ತಮವಾದುದು. ಯೋಗ ಎನ್ನುವ ಮಾತಿಗೆ ಉಪಾಯವೆಂದು ಅರ್ಥ. ಆತ್ಮಾವಲೋಕನಕ್ಕೆ ಇರುವ ಉಪಾಯಗಳಲ್ಲೆಲ್ಲ ಇದು ಪ್ರಕೃಷ್ಟವಾದದ್ದು. ಇದು ಬುದ್ಧಿಯ ನೆಲೆಯಿಂದ ಕಂಡುಕೊಂಡಾಗ ತಿಳಿದುಬರುವ ವಿವರ; 'ಮೇ' (ನನ್ನ) 'ಮತ' (ಅಭಿಪ್ರಾಯ) ವೆಂದಿರುವುದು ಹೀಗೆ.

(68)

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥

(12,9)

ಯಾರು ಎಲ್ಲ ಕರ್ಮಗಳನ್ನೂ ಆತ್ಮನಲ್ಲಿ ಬಿಟ್ಟುಕೊಟ್ಟು, ಆತ್ಮದಲ್ಲೇ ತೊಡಗಿದ್ದು, ಬೇರೆ ಯಾವ ಪ್ರಯೋಜನಕ್ಕೂ ಬಾಯಿಬಿಡದ ಯೋಗದಿಂದ ಆತ್ಮನನ್ನು ಧ್ಯಾನಮಾಡಿ ಉಪಾಸನೆ ಮಾಡುವರೋ (ಅವರನ್ನು ಆತ್ಮನು ಅಥವಾ ಪರಮಾತ್ಮನು ಸಂಸಾರಸಾಗರದಿಂದ ದಾಟಿಸುತ್ತಾನೆ).

ಈ ಶ್ಲೋಕವೂ ಮುಂದಿನ ಶ್ಲೋಕವೂ ಸೇರಿಕೊಂಡು ಒಂದು ವಾಕ್ಯವಾಗುತ್ತದೆ. ಎಲ್ಲ ಕರ್ಮಗಳೂ ಎಂದರೆ ವೈದಿಕ, ಲೌಕಿಕ; ಮೈ, ಮಾತು, ಮನಸ್ಸುಗಳಿಂದ ಮಾಡುವ ಎಲ್ಲ ಕೆಲಸಗಳೂ ಎಂದರ್ಥ. 'ಸಂನ್ಯಸ್ಯ' ಎಂದರೆ ಚೆನ್ನಾಗಿ ಬಿಟ್ಟು, ತ್ಯಾಗಮಾಡಿ. ಬಿಟ್ಟುಬಿಡುವುದು (ಸಮರ್ಪಣೆ) ಕೆಲಸವನ್ನಲ್ಲ, ಕೆಲಸದಿಂದ ಬಯಸುವ ಫಲವನ್ನು, ಕೆಲಸವನ್ನು ಮಾಡುತ್ತಿರುವವನು ನಾನೆಂಬ ಅಭಿಮಾನವನ್ನು . ಎಲ್ಲಿ ಇದನ್ನು ಬಿಡುವುದು? ಶ್ಲೋಕವು 'ನನ್ನಲ್ಲಿ' ಎಂದರೆ ಬುದ್ಧಿಯಲ್ಲಿ ಎಂದು ಸೂಚಿಸುತ್ತದೆ. ಬುದ್ಧಿಯು ಪ್ರಕೃತಿಯ ವಿವರವಾಗಿರುವುದರಿಂದ ಜಡವೇ; ಅದರಲ್ಲಿ ನಾನೆಂಬುದು ಹೊಂದುವುದಿಲ್ಲ. ಶುದ್ಧವಾದ ಬುದ್ಧಿಯಲ್ಲಿ ತೋರಿಕೊಳ್ಳುವ ಆತ್ಮದಲ್ಲಿ ಎಂದರ್ಥ. ಆತ್ಮದಲ್ಲಿ ಕರ್ಮಗಳನ್ನು ಬಿಟ್ಟುಕೊಡುವುದೆಂದರೇನು? ದೇಹ, ಇಂದ್ರಿಯ, ಮನಸ್ಸುಗಳಿಂದ ಆಗುವ ಕೆಲಸವೆಲ್ಲ ಬುದ್ಧಿಯಿಂದಲೇ ನಡೆಯುತ್ತವೆ ಎಂಬುದನ್ನು ಅರಿತುಕೊಂಡು, ಬುದ್ಧಿಯ ನೋಟ ಆತ್ಮದ ಕಡೆ ಹೊರಳಿ ಅಲ್ಲೇ ನೆಲೆಸಿದಾಗ, ಈ ಕೆಲಸಗಳೆಲ್ಲ ಕೈಬಿಟ್ಟುಹೋಗುತ್ತವೆ.

ಹೀಗಾದ ಮೇಲೆ ಬುದ್ಧಿಗಿರುವ ಒಂದೇ ಆಸಕ್ತಿ ಆತ್ಮದಲ್ಲಿ; ಅದರ ಬೆಳಕು ತನ್ನಮೇಲೆ ಬಿದ್ದು ತನ್ನನ್ನೆಲ್ಲ ತುಂಬಿಕೊಂಡಿರುವುದು ಮತ್ಪರತೆ. ಬುದ್ಧಿಗೆ ತನ್ನಾಚೆಯಿದ್ದು ತನ್ನನ್ನು ಸೆಳೆದುಕೊಂಡಿರುವ ಆತ್ಮದ ತವಕ. ಇದು ಬುದ್ಧಿಯೋಗ; ಬುದ್ಧಿಯು ಆತ್ಮದಲ್ಲಿ ಕೂಡಿಕೊಂಡಿರುವುದು. ಅದರ ಲಕ್ಷಣಗಳೇನು? ಧ್ಯಾನ ಮತ್ತು ಉಪಾಸನೆ. ಧ್ಯಾನ ಆತ್ಮನನ್ನೆ ಕುರಿತ ಎಡೆಬಿಡದ ಚಿಂತನೆ; ಬುದ್ಧಿಯ ಕೆಲಸ ಇದು. ಉಪಾಸನೆಯೆಂದರೆ ಪೂಜೆ, ಆರಾಧನೆ, ನಮಸ್ಕಾರ, ಸ್ತೋತ್ರ, ಕೀರ್ತನೆ, ಭಜನೆ ಇತ್ಯಾದಿ; ಮನಸ್ಸಿನ ಕೆಲಸ ಇದು. ಎರಡನ್ನೂ ಒಟ್ಟಿಗೆ ಹೇಳುವಾಗ ಧ್ಯಾನಪೂರ್ವಕವಾದ ಭಕ್ತಿಯೋಗ ಎಂಬ ಧ್ವನಿ.

(69)

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತ ಚೇತಸಾಂ ॥

(12,7)

ಹಿಂದಿನ ಶ್ಲೋಕದ ಮುಂದಿನ ಭಾಗ ಇದು; ಹಿಂದೆ ಮೊದಲಾದ ವಾಕ್ಯ ಇಲ್ಲಿ ಮುಗಿಯುತ್ತದೆ. ಯಾರು ಧ್ಯಾನಪೂರ್ವಕವಾದ ಭಕ್ತಿಯೋಗದಿಂದ ಆತ್ಮವನ್ನೆ ಉಪಾಸನೆ ಮಾಡುವರೋ ಅವರನ್ನು ಆತ್ಮತತ್ತ್ವವು ಸಂಸಾರದಿಂದ ಪಾರುಮಾಡಿ ಸಲಹುತ್ತದೆ. ಆತ್ಮದಲ್ಲೇ ಚಿತ್ತವನ್ನು ನೆಲೆಗೊಳಿಸಿದಾಗ ಆತ್ಮವು ಯೋಗಿಯನ್ನು ಮೇಲಕ್ಕೆತ್ತಿ ನಿಲ್ಲಿಸುತ್ತದೆ.

ಇದು ಧ್ಯಾನಯೋಗಿಗಳಿಗೆ, ಭಕ್ತರಿಗೆ (ತೇಷಾಂ) ನೀಡಿರುವ ಆಶ್ವಾಸನೆ. ಆತ್ಮವು ಸಲಹುವುದು ಎನ್ನುವುದಕ್ಕಿಂತ ಪರಮಾತ್ಮನು ಸಲಹುವನು ಎಂದರೆ ಹೆಚ್ಚು ರುಚಿಸುತ್ತದೆ, ಸಮಂಜಸವಾಗಿರುತ್ತದೆ. ಅರ್ಥ ಏನೋ ಒಂದೇ. ಒಕ್ಕಣೆಯಲ್ಲಿ ಭೇದ ಅಷ್ಟೆ. ಸಲುಹುವವನು, ಕಾಪಿಡುವವನು, ಪಾರಗಾಣಿಸುವವನು ಸಮುದ್ಧರ್ತ ('ಸಂ' ಎಂದರೆ ಚೆನ್ನಾಗಿ, 'ಉತ್' ಎಂದರೆ ಮೇಲಕ್ಕೆ, 'ಧರ್ತಾ' ಎಂದರೆ ಎತ್ತುವವನು, ನಿಲ್ಲಿಸುವವನು). 'ನಾನು' (ಅಹಂ) ಎಂಬ ಕರ್ತೃಪದ ಬೇರೆ ಇದೆ. ಮತ್ತೆ ಬುದ್ಧಿಸ್ಥಾನದಲ್ಲಿರುವ ಕೃಷ್ಣನ ಮಾತೇ. ಬುದ್ಧಿಯ ಬೆಳಕಾಗಿರುವ ಆತ್ಮ, ಬುದ್ಧಿಯಾಚೆ ಇರುವ ಪರಮಾತ್ಮ. ಈ ನೆಲೆಯಲ್ಲಿ ಆಡಿರುವ ಮಾತು.

'ಅಹಂ ತೇಷಾಂ ಸಮುದ್ಧರ್ತಾ ಭವಾಮಿ' ಎಂಬ ಅನ್ವಯದಿಂದ ಆತ್ಮ (ಅಥವಾ ಪರಮಾತ್ಮ) ಹೊಸದೊಂದು ಹೊಣೆಯನ್ನು ಹೊತ್ತುಕೊಳ್ಳುವುದೆಂದರ್ಥವಲ್ಲ. ಬುದ್ಧಿಯು ಗುಣಗಳ ಹಿಡಿತದಿಂದ ತಪ್ಪಿಸಿಕೊಂಡು, ಗುಣಾತೀತನಾದ ಆತ್ಮನಲ್ಲಿ ಸೇರಿಕೊಂಡಾಗ, ಹಿಂದಿನ ಎಲ್ಲ ಕ್ಲೇಶಗಳೂ ಮರೆಯಾಗುತ್ತವೆ. ವಿಷಯಗಳು, ಇಂದ್ರಿಯಗಳು, ಮನಸ್ಸು ಇವುಗಳ ಸಹಜ ವ್ಯಾಪಾರವನ್ನೇ ಸಂಸಾರವೆಂದು ಕರೆಯುವುದು. ಇದು ಮತ್ತೆ ಮತ್ತೆ ಅಳಿದುಳಿದು ತೋರಿಕೊಳ್ಳುವುದರಿಂದ 'ಮೃತ್ಯುಸಂಸಾರ'. ದಡವನ್ನು ಕಾಣಲಾರದೆ ತೊಳಲುವುದರಿಂದ 'ಸಾಗರ'. ಇದರಿಂದ ಮೇಲಕ್ಕೆತ್ತುವುದು ಆತ್ಮನನ್ನು ಕುರಿತ ಅರಿವು (ಜ್ಞಾನ). ಪ್ರಕೃತಿಯಿಂದ ಬಂಧನವಾದರೆ, ಪುರುಷನ ಜ್ಞಾನದಿಂದ ಬಿಡುಗಡೆ (ಮುಕ್ತಿ, ಮೋಕ್ಷ).

(70)

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥

(9,22)

ಗೀತೆಯು ಸಾಧಕನಿಗೆ ನೀಡಿರುವ ಭರವಸೆ ಇದು. ಯಾರು ಬೇರೆ ಯಾವ ಪ್ರಯೋಜನವನ್ನೂ ಮನಸ್ಸಿನಲ್ಲಿರಿಸಿಕೊಳ್ಳದೆ ಆತ್ಮವನ್ನೆ ಚಿಂತಿಸಿ ಉಪಾಸನೆ ಮಾಡುವರೋ, ಹಾಗೆ ಎಡೆಬಿಡದೆ ಧ್ಯಾನಯೋಗದಲ್ಲೇ ತೊಡಗಿರುವವರ ಯೋಗಕ್ಷೇಮವನ್ನು ಆತ್ಮವೇ ನೋಡಿಕೊಳ್ಳುತ್ತದೆ. ಹಿಂದಿನಂತೆ ಇಲ್ಲಿಯೂ ಆತ್ಮ ಎನ್ನುವುದರ ಬದಲು ಪರಮಾತ್ಮ ಎಂದಿಟ್ಟುಕೊಂಡರೆ ಹೆಚ್ಚು ಸಮಂಜಸವಾಗಿ ಕಾಣುತ್ತದೆ; ಅರ್ಥದಲ್ಲೇನು ವ್ಯತ್ಯಾಸವಾಗುವುದಿಲ್ಲ.

'ಅನನ್ಯ' ಎನ್ನುವ ಮಾತಿನಲ್ಲಿ 'ಬೇರೆ ಯಾವುದೂ ಇರದ; 'ಬೇರೆಯಲ್ಲದ' ಎಂಬುದು ಮೂಲಾರ್ಥ; ಆತ್ಮವನ್ನು ಬಿಟ್ಟು ಬೇರೆ ಯಾವುದನ್ನೂ ಚಿಂತನೆಮಾಡದೆ ಇರುವುದು (ಅನ್ಯದಚಿಂತಯಿತ್ವಾ) ಎಂದಾಗುತ್ತದೆ. ತನ್ನ ಆತ್ಮ ಬೇರೆ, ತಾನು ಬೇರೆ ಎಂದು ಯೋಗಿಯು ಚಿಂತನೆ ಮಾಡುವುದಿಲ್ಲ ಎಂದೂ ಆಗುತ್ತದೆ (ಅಪೃಥಗ್ಭೂತ). ಹಿಂದಿನಂತೆಯೆ, 'ಮಾಂ' (ನನ್ನನ್ನು) ಎನ್ನುವುದು ಬುದ್ಧಿಸ್ಥಾನೀಯನಾದ ಕೃಷ್ಣನ ಮಾತು. ಬುದ್ಧಿಯಲ್ಲಿ ಪ್ರತಿಬಿಂಬಿತವಾದ ಆತ್ಮವನ್ನು, ಎಂದು ಧ್ವನಿ. 'ನಿತ್ಯಾಭಿಯುಕ್ತ' ಎಂಬ ಮಾತಿನಿಂದ ಬುದ್ಧಿಯೋಗವೇ ಸೂಚಿತವಾಗಿರುವುದು. ಎಲ್ಲ ಬಗೆಗಳಿಂದಲೂ, ಎಲ್ಲ ಕಡೆಯೂ, ಯಾವಾಗಲೂ ಬುದ್ಧಿಯೋಗದಲ್ಲೇ ತೊಡಗಿರುವವರು ನಿತ್ಯಾಭಿಯುಕ್ತರು.

ಇವರು ಹೀಗೆ ಯೋಗದಲ್ಲೆ ಆಯಸ್ಸನ್ನು ಕಳೆಯಬೇಕೆಂದರೆ ವ್ಯವಹಾರ ನಡೆಯುವುದು ಹೇಗೆ? ಶರೀರವಾದರೂ ನೆಟ್ಟಗೆ ಉಳಿದುಕೊಳ್ಳಬೇಕಲ್ಲ? ಇಂದ್ರಿಯಗಳು ತಂತಮ್ಮ ಕೆಲಸಗಳನ್ನು ನಿರ್ವಹಿಸಬೇಕಲ್ಲ? ಮನಸ್ಸಿನ ವೃತ್ತಿಗಳು ಸರಿಯಾಗಿರಬೇಡವೆ? ಇವಕ್ಕೆಲ್ಲ ಯೋಗಿಯು ಗಮನಕೊಡಬೇಡವೆ? ಸಂಸಾರದಲ್ಲಿ ಆಸಕ್ತಿ ಹೋದರೂ, ದೇಹ ಬೀಳುವವರೆಗೆ ಸಂಸಾರದಲ್ಲೆ ಇರಬೇಕಲ್ಲ? ಇವನು ಬುದ್ಧಿಯ ನೆಲೆಯಲ್ಲೇ ಆತ್ಮನನ್ನು ನೋಡುತ್ತ, ಅನುಭವಿಸುತ್ತ ಇದ್ದುಬಿಟ್ಟರೆ ಆದೀತೆ? ಇದಕ್ಕೆ ಆಶ್ವಾಸನೆ - ಅವನು ಅಲ್ಲಿಯೇ, ಬೇರೆ ಏನನ್ನೂ ಬಯಸದೆ, ಆತ್ಮಾವಲೋಕನ ಮಾಡುತ್ತ ಇರಲಿ; ಅವನ ವ್ಯವಹಾರವೆಲ್ಲ ಸಮರ್ಪಕವಾಗಿಯೇ ಸಾಗುತ್ತದೆ. ಆತ್ಮನು (ಎಂದರೆ ಸರ್ವಾಂತರ್ಯಾಮಿಯಾದ ಪರಮಾತ್ಮನು) ಸರ್ವಜ್ಞನು ಮಾತ್ರವಲ್ಲ, ಸರ್ವಶಕ್ತನೂ ಹೌದು. ಅವನು ಯೋಗಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ.

ಯೋಗಕ್ಷೇಮ ಎನ್ನುವಾಗ ಯೋಗವೆಂದರೆ ಇರದಿದ್ದ ಸೌಲಭ್ಯ ಬಂದೊದಗುವುದು (ಅಪ್ರಾಪ್ತಪ್ರಾಪಣಂ), ಕ್ಷೇಮವೆಂದರೆ ಇದ್ದ ಅಥವಾ ಬಂದೊದಗಿದ ಸೌಲಭ್ಯವನ್ನು ಕಾಪಾಡಿಕೊಳ್ಳುವುದು (ಪ್ರಾಪ್ತಸ್ಯ ರಕ್ಷಣಂ). ಯೋಗಕ್ಷೇಮವೆಂಬ ಮಾತಿಗೆ ನೆಮ್ಮದಿ ಎಂದು ತಾತ್ಪರ್ಯ. ಯೋಗಿಯು ತನ್ನ ಯೋಗಕ್ಷೇಮಕ್ಕೆ ತಾನೇನೂ ಶ್ರಮಪಡಬೇಕಾದದ್ದಿಲ್ಲ. ಅದು ತಾನಾಗಿಯೇ ನಡೆಯುತ್ತದೆ. ಪರಮಾತ್ಮ ಅದನ್ನು ನಡೆಸುತ್ತಾನೆ ಎಂದು ಭಕ್ತಯೋಗಿಯ ವಿಶ್ವಾಸ.

ಬ್ಲಾವಟ್ಸ್ಕಿಯವರ ಹಿತವಚನಗಳು

''ವಿಷ್ಣು ಒಬ್ಬನೆ, ಆದರೆ ಅವನಿಗೆ ಸಾವಿರದ ಎಂಟು ಹೆಸರುಗಳಿವೆ. ಒಂದೊಂದು ಹೆಸರೂ ಆ ಒಬ್ಬನ ಗುಣಗಳಲ್ಲಿ ಒಂದೊಂದನ್ನು ಹೇಳುತ್ತದೆ. ಈ ಗುಣಗಳೇ ಅನುಕ್ರಮವಾಗಿ ಹಲವಾರು ದೇವತೆಗಳಾಗಿ ತೋರಿಕೊಂಡಿರುವುದು. ಶಾಶ್ವತ ಧರ್ಮಗಳೂ ಸತ್ಯದ ಸಾರವೂ ದೇವತೆಯಲ್ಲಿ ನೆಲೆಗಟ್ಟಿವೆ. ಅಭಿವ್ಯಕ್ತಿಗೊಂಡ ಸತ್ಯ ಯಾವುದಾದರಿರಲಿ, ಸ್ವಯಂಭುವಾದ ಆ ತತ್ತ್ವದೊಂದಿಗೆ ನೇರವಾಗಿ ನಂಟನ್ನು ಹೊಂದಿಯೆ ಇರುತ್ತದೆ''.

''ಈ ದೇವತೆ, ಆ ದೇವತೆ ಯಾವುದನ್ನೂ ನಂಬಬೇಕೆಂದಿಲ್ಲ. ಜೀವಂತವಾದ ಪ್ರಕೃತಿಯಲ್ಲಿರುವ ಚೇತನವನ್ನು ನಂಬಿದರೆ ಆಯಿತು; ಅದರೊಂದಿಗೆ ತನ್ನ ತಾದಾತ್ಮ್ಯವನ್ನು ಅರಿತುಕೊಂಡರೆ ಸಾಕು. ಈ ಚೇತನವಾದರೋ ಕಣ್ಣಿಗೆ ಕಾಣದು, ಆದರೆ ಎಲ್ಲೆಲ್ಲಿಯೂ ಇರುವಂಥದು; ಎಲ್ಲವನ್ನೂ ಮಾಡಬಲ್ಲುದು. ಸಾರದಲ್ಲಿ ಅದು ಅವಿಭಕ್ತ, ಆದರೆ ಇಡೀ ಜಗತ್ತಾಗಿ ತೋರಿಕೊಂಡಿದೆ. ಸ್ವತಃ ಅದಕ್ಕೆ ರೂಪವೆಂಬುದಿಲ್ಲ, ಆದರೆ ಕಾಣುವ ಎಲ್ಲ ರೂಪಗಳೂ ಅದರದ್ದೇ. ಎಲ್ಲವೂ ಅದೇ; ಆದರೆ ಯಾವುದೂ ಅದಲ್ಲ. ಸರ್ವವ್ಯಾಪಿ, ಆದರೆ ಏಕ. ಅದು ಎಲ್ಲವನ್ನೂ ಒಳಗೊಂಡಿದೆ; ಎಲ್ಲವೂ ಅದರಲ್ಲಿ ಅಡಗಿದೆ. ಈ ಸನಾತನ ಸತ್ಯವನ್ನು ಅರಸುವವನೇ ತಿಯಾಸೊಫಿಸ್ಟ್''

''ಒಳಗೆ ನೋಟವನ್ನು ಹರಿಸಿ ಆತ್ಮನನ್ನು ಅರಿತುಕೊಂಡರೆ ಭಗವಂತ-ನಿರುವನೆಂಬುದನ್ನು ನಿಶ್ಚಯವಾಗಿ ಮನಗಾಣಬಹುದು; ಈ ಅರಿವನ್ನು, ಈ ನಿಶ್ಚಯವನ್ನು ಬೇರೆ ಯಾರಿಗೂ ತಿಳಿಸುವುದಂತೂ ಸಾಧ್ಯವಿಲ್ಲ. ಪೂಜೆ-ಯೆಂಬುದರತ್ತ ಅವನಿಗೆ ಪ್ರವೃತ್ತಿಯಿರದಿದ್ದರೂ, ಹೊರಗಣ ಯಾವುದೇ ರೀತಿಯ ವಿಗ್ರಹಾರಾಧನೆಯನ್ನು ಅವನು ನಿಂದಿಸುವುದಿಲ್ಲ. ತೆರೆಯನ್ನು ಸರಿಸಿ ಅದರಾಚೆ ಇರುವುದನ್ನು ಕಾಣಲು ಶಕ್ತಿಯಿಲ್ಲದಿದ್ದವರು, ಹೊರಗಿರುವುದನ್ನೆ ನಂಬಿಯಾರು; ಅವರು ಮತ್ತೇನು ಮಾಡಬಲ್ಲರು? ಅವ್ಯಕ್ತನಾದ, ಅಜ್ಞೇಯನಾದ ಭಗವಂತನನ್ನು ತೋರಿಸುವ, ತಿಳಿಸಿಕೊಡುವ ಉಪಾಯವಿದೆಯೇ''

''ಅನಂತವು ನಮ್ಮ ಯುಕ್ತಿಯ ಅರಿವಿಗೆ ಬರಲಾರದು. ನಮ್ಮ ಯುಕ್ತಿ ಮಾಡುವುದಾದರೂ ಏನು? ವಿವರಗಳನ್ನು ಬೇರ್ಪಡಿಸುವುದು, ನಿರೂಪಿಸುವುದು. ಅನಂತವಾದುದನ್ನು ಹೀಗೆ ಅರಿಯಬಲ್ಲೆವೆ? ಅದನ್ನು ಅರಿಯಲು ನೆರವಾಗುವುದು ಅಂತಃಪ್ರಜ್ಞೆ. ನಮ್ಮಲ್ಲಿ ಸ್ವಭಾವಸಿದ್ಧವಾಗಿರುವ ಶಕ್ತಿ ಇದು. ಸಮಾಧಿಯ ಸ್ಥಿತಿಯನ್ನು ಮುಟ್ಟಿದವನಿಗೆ ಮಾತ್ರ ಅನಂತದೊಂದಿಗೆ ನೇರವಾದ ನಂಟು ಒದಗಿಬಂದೀತು. ಉಳಿದವರಿಗೆ ಅದು ಬಾಯಿಮಾತು ಅಷ್ಟೆ. ಸಮಾಧಿಯಲ್ಲಿರುವಾಗ 'ನಾನು', 'ನನ್ನದು' ಎಂಬೆಲ್ಲ ಭಾವನೆಗಳೂ ಕಳಚಿಬೀಳುತ್ತವೆ. ಅಂತಃಪ್ರಜ್ಞೆ ಎದ್ದುಕೊಳ್ಳುವುದು ಆಗಲೆ''.

''ಗುಪ್ತವಿದ್ಯೆಯೆನ್ನುವುದೊಂದು ಆಕರ್ಷಕವಾದ ಸಮುದ್ರ; ಆದರೆ ಅದರಲ್ಲಿ ಬಿರುಗಾಳಿ ಹೆಚ್ಚು, ಬಂಡೆಗಳೇ ತುಂಬಿವೆ. ಅದರ ಮೇಲೆ ಸಾಗಲು ತೊಡಗುವ ನಾವಿಕನಿಗೆ ಜಾಣತನವಿರಬೇಕು, ಅನುಭವವಿರಬೇಕು. ಇಲ್ಲದಿದ್ದರೆ ಸಮುದ್ರ ಅವನನ್ನು ಕಬಳಿಸಿಬಿಡುತ್ತದೆ. ಅಲ್ಲಿ ತೋರಿಕೊಳ್ಳುವ ವಜ್ರವೈಡೂರ್ಯಗಳೂ ಮುತ್ತುರತ್ನಗಳೂ ಮಣಿಮಾಲೆಗಳೂ, ಎತ್ತೆತ್ತಲೂ ಕಾಣಿಸಿಕೊಳ್ಳುವ ಬೆಳಕುಗಳೂ ಕಲಿಪುರುಷನು ಬೀಸಿದ ಬಲೆ; ಅವನ್ನೆಲ್ಲ ನಂಬಿಕೊಂಡು, ಅವಕ್ಕೆ ಹಾತೊರೆದು ನೀರಿಗೆ ಇಳಿದರೆ ಸರ್ವನಾಶವೇ ಕಟ್ಟಿಟ್ಟ ಬುತ್ತಿ. ಅವುಗಳಿಗೆ ಕುರುಡನಾದವನೇ ಜಾಣ. ಈ ಸಮುದ್ರದಲ್ಲಿ ಹೊರಡುವವರು ಬಹುಮಂದಿ; ದಡಸೇರಿ ಧನ್ಯರಾಗುವವರು ತೀರವಿರಳ. ನಾವಿಕನು ಯಶಸ್ವಿಯಾಗಬೇಕಾದರೆ ಅವನು ಕಿವಿಯಿಂದ ಕಾಣಬೇಕು, ಕಣ್ಣಿಂದ ಕೇಳಬೇಕು, ಕಾಮನ ಬಿಲ್ಲಿನ ಭಾಷೆಯನ್ನು ಅರಿತಿರಬೇಕು; ತನ್ನ ಆರೂ ಇಂದ್ರಿಯಗಳನ್ನು ಏಳನೆಯ ಇಂದ್ರಿಯದಲ್ಲಿ ಅಡಗಿಸಿರಬೇಕು''.

''ಭಗವದುಪದಿಷ್ಟನಾದ ಅಮೋನಿಯಸ್‌ನ ಶಿಷ್ಯ ಪ್ಲೋಟೈನಸ್‌ನ ಪ್ರಕಾರ ಭಗವದ್‌ಜ್ಞಾನಕ್ಕೆ ಮೂರು ಹಂತಗಳು. ಮೊದಲನೆಯದು ಅಭಿಪ್ರಾಯ; ಇದರ ಮೂಲ ಇಂದ್ರಿಯ ಪ್ರತ್ಯಕ್ಷ. ಎರಡನೆಯದು ವಿಜ್ಞಾನ; ಇದರ ಮೂಲ ಯುಕ್ತಿ. ಮೂರನೆಯದು ದರ್ಶನ; ಇದರ ಮೂಲ ಅಂತಃಪ್ರಜ್ಞೆ. ಮೂರನೆಯದೇ ಯಥಾರ್ಥವಾದ ತಿಳಿವಳಿಕೆ; ಅದಕ್ಕೆ ಯುಕ್ತಿ ನೆರವಾಗಬೇಕಷ್ಟೆ. ಯುಕ್ತಿಯದೇ ಸ್ವತಂತ್ರವಾದ ಪಾತ್ರ ಅದರಲ್ಲಿಲ್ಲ''.

''ಮನುಷ್ಯನ ಚೇತನವು ಈಶ್ವರಭಾವವೆಂಬ ಸಮುದ್ರದಲ್ಲಿ ಒಂದು ಹನಿಯಾಗಬೇಕು. ಈಶ್ವರಭಾವವೆಂದರೆ ಇಡೀ ವಿಶ್ವದೊಂದಿಗೆ ತಾನು ಸಮರಸವಾಗಿ ಸೇರಿಕೊಂಡಿದ್ದೇನೆಂಬ ಭಾವ. ತನ್ನ ದೇಹದೊಂದಿಗೆ ಸಮರಸವಾಗಿ ಸೇರಿಕೊಂಡಿರುವುದು ಜೀವಭಾವ. ಅದನ್ನು ಬಿಟ್ಟು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣರಾದ ತತ್ತ್ವಗಳೊಂದಿಗೆ ತಾನು ಪಾಲ್ಗೊಂಡಿರುವುದು ಮಾತ್ರವಲ್ಲ, ಈ ಮೂರೂ ತತ್ತ್ವಗಳಿಗೆ ಕಾರಣನೂ, ಸತ್ತಾಪ್ರದನೂ, ಸಾರವೂ, ನಿಯಾಮಕನೂ ಆದ ಪರಬ್ರಹ್ಮನೊಂದಿಗೆ ಕೂಡಿಕೊಳ್ಳಬೇಕು. ಹೀಗೆ ಕೂಡಿಕೊಳ್ಳುವುದನ್ನೇ ನಿರ್ವಾಣದ ಸುಖ, ಸಹಜಾನಂದ ಎಂದೆಲ್ಲ ಕರೆಯುತ್ತಾರೆ''

''ಪ್ರತಿಯೊಂದು ನಾಡಿನಲ್ಲೂ ಅದರ ಸಂರಕ್ಷಕರಿರುತ್ತಾರೆ. ಜ್ಞಾನದ ದೀವಿಗೆಯಿಂದ ಕತ್ತಲನ್ನು ತೊಲಗಿಸಿ, ಸತ್ಯವನ್ನು ನಮಗಾಗಿ ಅರಸಿ ತೋರಿಸಿ, ನಮ್ಮ ಕೃತಜ್ಞತೆಗೆ ಪಾತ್ರರಾಗುತ್ತಾರೆ; ದೇಹದ ರೋಗವನ್ನು ನೀಗಿಸಿ ಪ್ರಾಣದಾನ ಮಾಡುವಂತೆಯೇ ಅವರ ಕೆಲಸ. ಯಾವುದು ದಿಟ, ಯಾವುದು ಸಟೆ ಎಂಬ ವಿವೇಕವನ್ನು ನಮಗೆ ಒದಗಿಸಿ, ಈವರೆಗೆ ಇರದಂಥ ಆಧ್ಯಾತ್ಮಿಕ ದೀಪವೊಂದನ್ನು ನಮ್ಮೊಳಗೆ ಬೆಳಗಿಸಿ, ನಮ್ಮನ್ನು ಹೊಸದಾಗಿಯೇ ಹುಟ್ಟಿಸಿಬಿಡುತ್ತಾರೆ. ಈ ಸಂರಕ್ಷಣೆಗೆ ಯಾವ ಹೆಸರಾದರೇನು? ಕೃಷ್ಣನೆನ್ನಿ, ಬುದ್ಧನೆನ್ನಿ, ಏಸುವೆನ್ನಿ, ಈಸ್ಕುಲಪಿಯಸ್ ಎನ್ನಿ, ಸಂರಕ್ಷಕನೆನ್ನುವುದರ ಸಾಂಕೇತಿಕ ಹೆಸರುಗಳಷ್ಟೆ ಅವು. ಈ ಸಂಕೇತಗಳಾದರೋ ದಡ್ಡರ ವಿನೋದಕ್ಕಾಗಿ ಕಲ್ಪಿತವಾದುವಲ್ಲ; ತತ್ತ್ವಜ್ಞಾನದ ಅಡಿಮುಡಿಯೇ ಸಂಕೇತ''

''ಎಪಿಕ್ಯೂರಸ್ ಹೇಳುತ್ತಾನೆ - ದೇವತೆಗಳಿರುವುದು ದಿಟ. ಆದರೆ ಸಾಮಾನ್ಯ ಅವಿದ್ಯಾವಂತ ಜನ ನಂಬಿಕೊಂಡಿರುವಂತೆ ಅಲ್ಲ. ಸಾಮಾನ್ಯ ಜನರು ಪೂಜೆಮಾಡುವ ದೇವತೆಗಳನ್ನು ನಂಬದಿದ್ದ ಮಾತ್ರಕ್ಕೆ ಯಾರೂ ನಾಸ್ತಿಕರಾಗುವುದಿಲ್ಲ. ಆದರೆ ಸಾಮಾನ್ಯ ಜನರ ನಂಬಿಕೆಗಳನ್ನೇ ಈ ದೇವತೆಗಳ ಮೇಲೆ ಹೇರಿದರೆ ಅದೀಗ ನಾಸ್ತಿಕತೆ. ಒಂದೇ ದೈವಿಕಚೇತನ ಪ್ರಕೃತಿಯಲ್ಲೆಲ್ಲ ವ್ಯಾಪಕವಾಗಿದೆ; ದೇವತೆಗಳೆಂಬುವರು ಅದರ ಮೊದಲ ತೋರಿಕೆಗಳಷ್ಟೆ''.

''ವರ್ತಮಾನವೆಂಬುದು ಭೂತಕಾಲದ ಮಗು; ಭವಿಷ್ಯತ್ಕಾಲವು ವರ್ತಮಾನದಿಂದಲೇ ಹುಟ್ಟುವುದು. ಆದರೆ ವರ್ತಮಾನಕ್ಕೆ ತನಗೆ ತಂದೆ ತಾಯಿಯಿಲ್ಲವೆಂದಾಗಲಿ, ತಾನು ಬಂಜೆಯೆಂಬುದಾಗಲಿ ಅರಿವಿದೆಯೆ? ವರ್ತಮಾನವು ತನ್ನನ್ನೆ ತಾನು ಮತ್ತೆ ಮತ್ತೆ ಹುಟ್ಟಿಸುತ್ತಿರುತ್ತದೆ. 'ನಾನು ಭೂತಕಾಲದ ಮಗು, ಆಗಿ ಹೋದ ಗಳಿಗೆಯಿಂದಲೇ ಹುಟ್ಟಿದ್ದು' ಎಂದುಕೊಳ್ಳುವಷ್ಟರಲ್ಲಿ ಅದೇ ಭೂತಕಾಲವಾಗಿಬಿಡುತ್ತದೆ! ಮಾತು ಮುಗಿಯುವುದರೊಳಗೆ ವರ್ತಮಾನವೇ ಮರೆಯಾಗಿಬಿಡುತ್ತದೆ. ಭೂತಕಾಲಕ್ಕೆ ತಾನು ಭವಿಷ್ಯತ್ತು; ಆದರೆ ವರ್ತಮಾನವೆನ್ನುವಷ್ಟರಲ್ಲಿ ಭೂತವೇ. ಹೀಗೆ ಮೂರೂ ಕಾಲಗಳನ್ನು ಬೆಸುಗೆ ಹಾಕಿ ಒಂದಾಗಿಸುವುದು ಮಹಾಮಾಯೆ''.

''ಹಿಂದುಗಳು 'ಮೂರನೆಯ ಕಣ್ಣು', 'ಶಿವದೃಷ್ಟಿ' ಎಂದು ಕರೆಯುವ ಕಾಣ್ಕೆಯೊಂದಿದೆ. ಇದಿಲ್ಲದಿದ್ದವರು ತಮ್ಮೆದುರಿಗೆ ತೆರೆಯ ಮೇಲೆ ತೋರಿಕೊಳ್ಳುವುದಷ್ಟನ್ನೆ ಕಂಡಾರು; ಗಾಢವಾದ ಕತ್ತಲೆಯಲ್ಲಿ ಅಡಗಿರುವುದನ್ನು ಕಾಣಲಾರರು. ಮೂರನೆಯ ಕಣ್ಣು ಹೊರಗಿನ ನೋಟವನ್ನು ಒಳಗಿನ ಆಸರೆಯ ಮೇಲೆ ಮಾರ್ಪಡಿಸಿಕೊಳ್ಳಬಲ್ಲುದು; ಕತ್ತಲೆಯಲ್ಲಿ ಅಡಗಿರುವ ಬೆಳಕನ್ನು ಕಾಣಬಲ್ಲುದು; ಶೂನ್ಯವಾಗಿ ತೋರಿಕೊಂಡುದರಲ್ಲೇ ಇಡೀ ವಿಶ್ವವನ್ನು ಗುರುತಿಸಬಲ್ಲುದು''.

''ನಮ್ಮಲ್ಲಿ ಒಬ್ಬೊಬ್ಬರಲ್ಲೂ ಒಳಗಿನ ಒಂದು ಗ್ರಹಣಶಕ್ತಿಯಿದೆ. ಅದಕ್ಕೆ ಅಂತಃಪ್ರಜ್ಞೆ ಎಂದು ಹೆಸರು. ಅದನ್ನು ಬೆಳೆಸಿಕೊಳ್ಳುವವರು ವಿರಳ. ಆದರೆ ಇದರಿಂದಲೇ ನಾವು ಇದ್ದುದನ್ನು ಇದ್ದಂತೆಯೆ ತಿಳಿಯಬಲ್ಲೆವು. ಅದು ಜೀವಕ್ಕೆ ಸಹಜವಾದ ಸಾಮರ್ಥ್ಯ. ಅದನ್ನು ನಾವು ಬಳಸಿಕೊಂಡಂತೆಲ್ಲ ಅದು ಬೆಳೆಯುತ್ತದೆ. ಇಂದ್ರಿಯಗಳನ್ನಾಗಲಿ ಯುಕ್ತಿಯನ್ನಾಗಲಿ ಬಳಸಿ ನಾವು ತಿಳಿಯುವುದಕ್ಕಿಂತ ಹೆಚ್ಚು ನಿಚ್ಚಳವಾಗಿ ಅಂತಃಪ್ರಜ್ಞೆಯಿಂದ ತಿಳಿಯಬಲ್ಲೆವು. ನಮ್ಮ ಬುದ್ಧಿವಂತಿಕೆ, ತರ್ಕಗಳಿಂದ ನಾವು ಅರಿತುಕೊಳ್ಳುವುದು ವಿಷಯಗಳ ಮೇಲುಮೇಲಿನ ವಿವರಗಳನ್ನಷ್ಟೆ; ಯಾರಾಗಲಿ ಅರಿತುಕೊಳ್ಳಬಹುದಾದಷ್ಟೆ. ಅಂತಃಪ್ರಜ್ಞೆ ಹೀಗೆ ಹೊರಗಣ ವಿಷಯಗಳಿಂದ ನಮ್ಮ ಅರಿವಿನ ಕಡೆಗೆ ಬರುವ ಪ್ರವೃತ್ತಿಯಲ್ಲ; ಒಳಗಿನಿಂದ ಹೊರಗೆ ಹರಿಯುವ ಪ್ರವೃತ್ತಿ. ಆದರಿಂದ ಆಧ್ಯಾತ್ಮಿಕವಾದೊಂದು ಸಂವೇದನೆ ಎದ್ದುಕೊಳ್ಳುತ್ತದೆ; ಸರಿಯಾದ ಕ್ರಿಯೆಯಲ್ಲಿ ತೊಡಗುವ ಶಕ್ತಿಯನ್ನೂ ಅದು ಒದಗಿಸುತ್ತದೆ. ವಸ್ತುವಿನ ಯಥಾರ್ಥಜ್ಞಾನ, ಕರ್ತವ್ಯನಿಶ್ಚಯ ಎರಡೂ ಅಂತಃಪ್ರಜ್ಞೆಯ ಫಲಗಳು''.